ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೦–೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಜಾನಪದ ಕ್ಷೇತ್ರಕ್ಕೆ ದೇಜಗೌ ಕೊಡುಗೆ

ನಿಬಂಧಕಾರರು

ಕೆ.ಸಿ. ಶಿವಸಿದ್ದಪ್ಪ

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಲೀಲಾ ಅಪ್ಪಾಜಿ

ಪ್ರಾಂಶುಪಾಲರು
ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦–೧೧

9/2

ಕನ್ನಡ ವಿಶ್ವವಿದ್ಯಾಲಯ

ಹಂಪಿ

[illegible]
[illegible]

ಜಾನಪದ ಕ್ಷೇತ್ರಕ್ಕೆ ದೇಜಗೌ ಕೊಡುಗೆ

ಸಂಶೋಧಕರು

[illegible]

ಮಾರ್ಗದರ್ಶಕರು

ಡಾ. [illegible]

[illegible]

೨೦೦೯-೧೦

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೦-೧೧ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಜಾನಪದ ಕ್ಷೇತ್ರಕ್ಕೆ ದೇಜಗೌ ಕೊಡುಗೆ

ನಿಬಂಧಕಾರರು

ಕೆ.ಸಿ. ಶಿವಸಿದ್ದಪ್ಪ
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಕ.ವಿ.ವಿ. ಹಂಪಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಲೀಲಾ ಅಪ್ಪಾಜಿ
ಪ್ರಾಂಶುಪಾಲರು
ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು.

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦-೧೧

ದೃಢೀಕರಣ ಪತ್ರ

೨೦೧೦-೧೧ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS/00473**ರ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ ಕೆ.ಸಿ. ಶಿವಸಿದ್ದಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ **"ಜಾನಪದ ಕ್ಷೇತ್ರಕ್ಕೆ ದೇಜಗೌ ಕೊಡುಗೆ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೧೩-೦೬-೨೦೧೧

(ಡಾ. ಲೀಲಾ ಅಪ್ಪಾಜಿ)
ಪ್ರಾಂಶುಪಾಲರು
ಕನ್ನಡ ವಿಭಾಗ,
ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು.

ಅಭ್ಯರ್ಥಿಯ ಘೋಷಣಾ ಪತ್ರ

"ಜಾನಪದ ಕ್ಷೇತ್ರಕ್ಕೆ ದೇಜಗೌ ಕೊಡುಗೆ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTM/K0473**ರ ವಿದ್ಯಾರ್ಥಿಯಾದ ನಾನು ೨೦೧೦-೧೧ನೇ ಸಾಲಿನ ಪರೀಕ್ಷೆಗಾಗಿ **ಡಾ. ಲೀಲಾ ಅಪ್ಪಾಜಿ,** ಪ್ರಾಂಶುಪಾಲರು ಮತ್ತು ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, ಮದ್ದೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
೧೩-೦೬-೨೦೧೧

(ಕೆ.ಸಿ. ಶಿವಸಿದ್ದಪ್ಪ)
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಜಾನಪದ ಕ್ಷೇತ್ರಕ್ಕೆ ದೇಜಗೌ ಕೊಡುಗೆ

ಪರಿವಿಡಿ

*****

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮಾನವನು ಪ್ರಾಚೀನ ಬದುಕಿನಿಂದ ಮೊದಲುಗೊಂಡು ಇತ್ತೀಚಿನವರೆಗೂ ಅನೇಕ ಪರಿವರ್ತನೆಗಳ ನಡುವೆಯೂ ತನ್ನದೇ ಆದ ಜೀವನಶೈಲಿಯನ್ನು ರೂಪಿಸಿಕೊಂಡವನು. ಜಾನಪದವು ಜನಪದರಿಂದ ಜನಪದರಿಗಾಗಿ ಜನಪದರಿ ಗೋಸ್ಕರವೇ ಜನ್ಮವೆತ್ತಿರುವಂಥದ್ದು. ಪ್ರಾಚೀನ ಕಾಲದಿಂದಲೂ ಕೇವಲ ಮೌಖಿಕ ರೂಪವಾಗಿಯೇ ಚಾಲ್ತಿಯಲ್ಲಿದ್ದ ಜನಪದ ಸಾಹಿತ್ಯ ಯಾವುದೋ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಸಂಗ್ರಹ ಕಾರ್ಯಕ್ಕೆ ಒಳಗಾಗಿ ಲಿಖಿತ ರೂಪವನ್ನು ಪಡೆದಿರಬೇಕು. ಮಾನವನ ಸರ್ವತೋಮುಖವಾದ ಜೀವನ ನಿರ್ವಹಣೆಯೇ ಜನಪದ ರೀತಿ-ನೀತಿಗಳಿಗೆ ಒಳಗಾಗಿ ಸಾಗುತ್ತಿದ್ದಂಥದ್ದು. ಮಾನವನು ಸಮಾಜದಲ್ಲಿ ನೆಮ್ಮದಿಯ ಜೀವನ ನಡೆಸಲು ಕೆಲವು ರೂಢಿ ಸಂಪ್ರದಾಯಗಳ ಗಡಿಯನ್ನು ತಾನೇ ಕಟ್ಟಿಕೊಂಡು, ನೈತಿಕ ನಡವಳಿಕೆಗಳು ಅವನ ಬದುಕನ್ನು ನಿರ್ದೇಶಿಸುತ್ತಿದ್ದವು. ಇತ್ತೀಚಿನ ವೈಜ್ಞಾನಿಕ ನಾಗರಿಕತೆಯ ಹಾಗೂ ಎಲ್ಲಾ ಅರ್ವಾಚೀನ ಕತೆಗಳ ತಾಯಿ ಬೇರುಗಳನ್ನು ಪ್ರಾಚೀನ ಜಾನಪದದಲ್ಲಿ ಗುರುತಿಸಬಹುದಾಗಿದೆ. ಜನಪದ ಸಾಹಿತ್ಯ ಕೇವಲ ಒಬ್ಬ ವ್ಯಕ್ತಿಯ ಸೃಷ್ಟಿಯಲ್ಲ. ಸಮಾಜದಲ್ಲಿನ ಸಮಷ್ಟಿ ಜನರ ಪ್ರತಿಭೆಯ ರೂಪ. ಯಾವುದೋ ಕಾಲಘಟ್ಟದಲ್ಲಿ ಸೃಷ್ಟಿಯಾಗಿ ಸುಪ್ತವಾಗಿದ್ದ ಜನಪದ ಗೀತೆ, ಕಥೆ, ಗಾದೆ, ಲಾವಣಿ, ಕಥನಕವನ.... ಇನ್ನಿತರ ಸಾಹಿತ್ಯ ಪ್ರಕಾರಗಳು ಇಂದು ಜಾಗತಿಕ ಸಾಹಿತ್ಯಕ್ಕೆ ಆಕರವಾಗಿ ಕಾರ್ಯನಿರ್ವಹಿಸುವಷ್ಟು ಸಮರ್ಥವಾಗಿದೆ.

ಕರ್ನಾಟಕದ ಉದ್ದಗಲಕ್ಕೂ ವಿಶಾಲವಾಗಿ ವ್ಯಾಪಿಸಿದ್ದ ಜಾನಪದ ಸಾಹಿತ್ಯದ ಸಂಗ್ರಹಕಾರ್ಯವು ತೀವ್ರಗತಿಯಲ್ಲಿ ಪ್ರಾರಂಭವಾಯಿತು. ವಿವಿಧ ಜಾನಪದ ವಿದ್ವಾಂಸರುಗಳು ಬಹುಮೌಲ್ಯಯುತವಾದ ಸಂಗ್ರಹಕಾರ್ಯಕ್ಕೆ ಸಾಕ್ಷಿಯಾದರು. ಹಿರಿಯ ಜಾನಪದ ಸಂಗ್ರಹಕಾರರಿಗೆ ಬೃಹತ್ ಪ್ರಮಾಣದಲ್ಲಿರುವ ಜಾನಪದ ಸಾಹಿತ್ಯವು ಸಂಗ್ರಹ ಕಾರ್ಯಕಷ್ಟೇ ಸೀಮಿತವಾಯಿತಲ್ಲ ಎಂಬ ಕೊರಗು ಮನದಲ್ಲೇ ಬೇರೂರಿತ್ತು. ಬಹುಜನರ ಕಾಣಿಕೆಯಾದ ಜಾನಪದ ಸಾಹಿತ್ಯ ಶಿಷ್ಟ ಸಾಹಿತ್ಯದ ಮುಂದೆ ಮೂಲೆಗುಂಪಾಗುವ ಸಂದರ್ಭ ನಿರ್ಮಾಣವಾಯಿತಲ್ಲ, ಅದರಲ್ಲಿನ ಕಾವ್ಯಾಂಶಗಳು, ಆಶಯಗಳು ಕಥೆಯ ಹಂದರ ಹೊರಜಗತ್ತಿಗೇ ಪರಿಚಯವಾಗಬೇಕೆಂಬ ಹಿರಿದಾದ ಆಸೆ ಒಡಮೂಡುತ್ತಿತ್ತು. ೧೯೬೬-೭೭ರ ದಶಕದ ಜಾನಪದ ಕ್ಷೇತ್ರ ಸುವರ್ಣಾಕ್ಷರದಲ್ಲಿ

ಬರೆದಿಡಬೇಕಾದ ಕಾಲಘಟ್ಟ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ತರಗತಿಗಳಲ್ಲಿ ಪಠ್ಯವಿಷಯವಾಗಿ ಜಾನಪದವನ್ನು ಪ್ರಾರಂಭಿಸಿದ ಕೀರ್ತಿ ಶ್ರೀ ದೇಜಗೌ ಅವರಿಗೆ ಸಲ್ಲುತ್ತದೆ.

ಸ್ನಾತಕೋತ್ತರ ತರಗತಿಗಳಲ್ಲಿ ಪಠ್ಯ ವಿಷಯವಾದ ಜಾನಪದ ಹೊಸ ಪರಂಪರೆಯನ್ನು ಹುಟ್ಟುಹಾಕಿತು. ವಿದ್ಯಾರ್ಥಿಗಳಿಗೆ ಉಪನ್ಯಾಸಕರು ತಮ್ಮ ಸ್ವಂತ ಅನುಭವದ ಜೊತೆಗೆ ಇತರ ಭಾಷೆಗಳ ಗ್ರಂಥಗಳ ಆಳವಾದ ಅಧ್ಯಯನದಿಂದ ಟಿಪ್ಪಣಿಗಳನ್ನು ಮಾಡಿಕೊಂಡು ಬೋಧನೆಯನ್ನು ಪ್ರಾರಂಭಿಸಿದರು. ಹಿರಿಯ ಉಪನ್ಯಾಸಕರು ಯುವ ಜಾನಪದ ಸಾಹಿತಿಗಳಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಜಾನಪದ ಸಂಗ್ರಹ, ಬೋಧನೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಜವಾಬ್ದಾರಿ ವಹಿಸಿದರು.

ಜಾನಪದ ಸಾಹಿತ್ಯದ ಅಧ್ಯಯನ ಕಾರ್ಯ ವಿಶ್ವವಿದ್ಯಾನಿಲಯದಲ್ಲಿ ಹೇಗೆ ಪ್ರಾರಂಭವಾಯಿತು, ಈ ಸಂದರ್ಭದಲ್ಲಿ ದೇಜಗೌ ಅವರು ಜಾನಪದ ಸಾಹಿತ್ಯಕ್ಕೆ ಕೊಡುಗೆ ನೀಡಿದ ಪ್ರಾರಂಭದ ಕ್ಲಿಷ್ಟ ಪರಿಸ್ಥಿತಿ ಅರಿಯುವ ಆಸಕ್ತಿ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಜಾನಪದ ಬಗೆಗಿನ ಪ್ರಶ್ನಾವಳಿಗಳಿಗೆ ಉತ್ತರ ತಿಳಿಯುವ ಮಹತ್ತರ ಉದ್ದೇಶದಿಂದ ಈ ವಿಷಯವನ್ನು ನಿಬಂಧಕ್ಕಾಗಿ ಆಯ್ಕೆ ಮಾಡಿಕೊಳ್ಳುವ ಕುತೂಹಲ ಉಂಟಾಯಿತು.

'ವಿಶ್ವದೊಳಗೊಂದು ವಿಶ್ವ ಜಾನಪದ' ಎಂಬ ಮಾತು ಸಾರ್ವಕಾಲಿಕವಾದುದು. ಜಾಗತಿಕ ಸಾಹಿತ್ಯದ ಜಾನಪದಕ್ಕೆ ಸೀಮಿತ ಗಡಿರೇಖೆ ಎನ್ನುವಂಥದ್ದು ಇಲ್ಲ. ಭೂಮಿಯ ಮೇಲಿನ ಪ್ರಕೃತಿ ಸಂಪತ್ತಿನಷ್ಟೇ ಜಾನಪದ ವಿಶ್ವವ್ಯಾಪಿಯಾದುದು. ಸಾಗರದಲ್ಲಿನ ನೀರಿನಷ್ಟೇ ವ್ಯಾಪಕವಾಗಿ ತನ್ನ ಗಡಿರೇಖೆ ಯನ್ನು ವಿಸ್ತರಿಸಿಕೊಂಡಿರು–ವಂಥದ್ದು.

ಕರ್ನಾಟಕದಲ್ಲಿ ಮೊದಲ ಬಾರಿಗೆ ಜಾನಪದ ಮೈಸೂರು ವಿಶ್ವವಿದ್ಯಾನಿಲಯ ಮೆಟ್ಟಿಲೇರಿದ್ದು, ದೇಜಗೌ ಅವರ ಜೀವನ ಮತ್ತು ಸಾಧನೆಯ ಕಿರುಪರಿಚಯ, ಅವರ 'ಜಾನಪದ ಮಹಾ ಸಂಪುಟ' ಎಂಬ ಬೃಹತ್ ಗ್ರಂಥವನ್ನು ಸೀಮಿತ ಗಡಿಯಾಗಿ ಆಧಾರವಾಗಿ ತೆಗೆದುಕೊಂಡು 'ಜಾನಪದ ಅಧ್ಯಯನ, ಜಾನಪದವಾಹಿನಿ, ಜಾನಪದ ಸೌಂದರ್ಯ, ಮುನ್ನುಡಿಗಳು, ಜಾನಪದ ವಿಚಾರಧಾರೆ ಜೊತೆಗೆ ಜನಪದಗೀತಾಂಜಲಿ ಎಂಬ ಪುಸ್ತಕಗಳ ವಿವರಣೆ ವಿಮರ್ಶೆ ಮಾಡುವ ಜೊತೆಗೆ 'ಜಾನಪದ ಕ್ಷೇತ್ರಕ್ಕೆ ದೇಜಗೌ ಕೊಡುಗೆ' ಎಂಬ ನಿಂಬಧವನ್ನು ಪೂರ್ಣಮಾಡಲು ಪ್ರಯತ್ನಿಸಿದ್ದೇನೆ. ಜಾನಪದ

ವಸ್ತು ವಿಶ್ಲೇಷಣೆ ಜೊತೆಗೆ ಜಾನಪದ ವಸ್ತು ಸಂಗ್ರಹಾಲಯದ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಈ ಸೀಮಿತ ಪರಿಧಿಯಲ್ಲಿ ನಿಬಂಧದ ಮೂಲಕ ಈಡೇರಿದೆ ಎಂದರೆ ಅತಿಶಯೋಕ್ತಿ ಆಗಿರಲಾರದು. ಅನುಬಂಧದಲ್ಲಿ ದೇಜಗೌ ಅವರನ್ನು ಸಂದರ್ಶನ ಮಾಡಿ ಸುಸಂದರ್ಭದ ಪ್ರಶ್ನೋತ್ತರಗಳನ್ನು ದಾಖಲುಗೊಳಿಸಿದ್ದೇನೆ.

ಅಧ್ಯಾಯ ೨

ದೇಜಗೌ ಅವರ ಜೀವನ ಮತ್ತು ಸಾಧನೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಗದ್ಯ ಬರಹಗಾರರಲ್ಲಿ ದೇಜಗೌ ಅವರ ಹೆಸರು ಚಿರಂತನವಾದುದು. ವ್ಯಕ್ತಿಯ ಹುಟ್ಟು ಕೇವಲ ಸಾಂಕೇತಿಕ ವಾದರೂ ಜೀವನದಲ್ಲಿ ಘಟಿಸುವ ಅನಿರೀಕ್ಷಿತ ಘಟನಾವಳಿಗಳು, ನಿಸರ್ಗ ಸಹಜವಾದ ಮಾನವ ಪ್ರೇಮದಿಂದ ವ್ಯಕ್ತಿಯೊಬ್ಬ ತಳ ಕುಟುಂಬದಿಂದ ಬಂದರೂ ಉನ್ನತ ಮೈಲಿಗಲ್ಲನ್ನು ಏರಿ ಇತರರಿಗೆ ಆದರ್ಶಪ್ರಾಯರಂತೆ ನಿದರ್ಶನವಾಗಿ ನಿಂತಂಥವರು ವಿಶ್ವಚೇತನ ಶ್ರೀಯುತ ದೇಜವರೇಗೌಡ ಅವರು.

ಇಪ್ಪತ್ತನೇ ಶತಮಾನದಲ್ಲಿ ಆರಂಭವಾದ ನವೋದಯ ಚಳುವಳಿಯ ಅಗ್ರಲೇಖಕರ ಪ್ರಭಾವ ಪ್ರೇರಣೆ ಹಾಗೂ ಇತರ ಸಾಹಿತ್ಯ ಪಂಥಗಳ ಸತತ ಅಭ್ಯಾಸ ಜೊತೆಗೆ ಬೋಧನೆಯ ಫಲವಾಗಿ ದೇಜಗೌ ಅವರು ಇತರರಿಗಿಂತ ಭಿನ್ನವಾಗಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ.

ನಮ್ಮ ನಾಡಿನ ಬಹುಶ್ರುತ ವಿದ್ವಾಂಸರಲ್ಲಿ ಒಬ್ಬರಾಗಿರುವ ದೇಜಗೌ ಅವರು ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಾಗಿ ಸರ್ವತೋಮುಖ ಬೆಳವಣಿಗೆಗಾಗಿ ತನುಮನ ಧನಗಳನ್ನು ಅರ್ಪಿಸಿಕೊಂಡಿರುವಂಥ ವ್ಯಕ್ತಿ . ಇಂದು ಕನ್ನಡಿಗರಿಗೆ 'ದೇಜಗೌ' ಎಂಬ ಮೂರಕ್ಷರಗಳಿಂದ ಚಿರಪರಿಚಿತರಾಗಿದ್ದಾರೆ. ಅವರ ಹೆಸರಿನ ಮೊದಲ ಸಂಕೇತಾಕ್ಷರ ದೇ. ತಂದೆಯವರಾದ ದೇವೇಗೌಡರನ್ನು ಗುರುತಿಸುತ್ತದೆ. ಜವರೇಗೌಡರ ಜನನ ರಾಮನಗರ ಜಿಲ್ಲೆಯ 'ಚನ್ನಪಟ್ಟಣ ತಾಲ್ಲೂಕಿನ ತಾಯಿಯ ತವರಾದ 'ಮುದಿಗೆರೆಯಲ್ಲಿ' ಜುಲೈ ೬, ೧೯೧೮ರಂದು ಜನಿಸಿದರು. ಇವರ ಬಾಲ್ಯಜೀವನ ನಮ್ಮ ನಾಡಿನ ಎಷ್ಟೋ ಹಳ್ಳಿಗಳ ಹಾಗೆ ಯಾವುದಕ್ಕೂ ಹೆಸರಲ್ಲದ ಹಳ್ಳಿ-ಚಕ್ಕರೆ ಎಂಬ ಕುಗ್ರಾಮ. ಇದು ಚನ್ನಪಟ್ಟಣಕ್ಕೆ ಸುಮಾರು ನಾಲ್ಕೂವರೆ ಮೈಲು ದೂರದಲ್ಲಿದೆ.

ಮನೆಯ ಬಾಗಿಲಲ್ಲೇ ಶಾಲೆಗಳಿದ್ದರೂ ಅಲ್ಲಿಗೆ ತಮ್ಮ ಮಕ್ಕಳನ್ನು ಕಳಿಸಲು ಸಾಧ್ಯವಾಗದ ಅಸಹಾಯಕ ಸ್ಥಿತಿಯಲ್ಲಿ ಎಷ್ಟೋ ಕುಟುಂಬಗಳು ನರಳುತ್ತಿದ್ದವು. ಜವರೇಗೌಡರು ಇಂಥ ಒಂದು ಕಡು ಬಡ ಕುಟುಂಬಕ್ಕೆ ಸೇರಿದವರು. ಅವರ ಮನೆತನದಲ್ಲಿ ವಿದ್ಯೆಯನ್ನು ಕಲಿತವರು ಯಾರು ಇರಲಿಲ್ಲ. 'ಮೂಗೂರು' ಕಡೆಯಿಂದ ಬಂದ ಅವರ ಪೂರ್ವಿಕರ ಪರಂಪರೆಯಲ್ಲಿ ಲಿಂಗೇಗೌಡರು ಅವರ ಮಗ ದೇವೇಗೌಡರು. ದೇವೇಗೌಡರ ಮೂರನೆ ಹೆಂಡತಿ ಚೆನ್ನಮ್ಮ ಜವರೇಗೌಡರ ತಾಯಿ.[೧]

---

೧. ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ ಸಂ. ಹಾ.ಮಾ.ನಾಯಕ, ಪು. ೨

ದೇವೇಗೌಡರ-ಚೆನ್ನಮ್ಮನವರ ದಾಂಪತ್ಯದಲ್ಲಿ ಮೊದಲು ಜನಿಸಿದ ಮೂರು ಮಕ್ಕಳು ತೀರಿ ಹೋಗಿದ್ದರು. ದುರ್ವಿಧಿಯಿಂದ ಕಾಪಾಡಿಕೊಳ್ಳಲು ನಾಲ್ಕನೆಯ ಗಂಡು ಮಗುವಿಗೆ ಕಾಡೇಗೌಡನೆಂದು ಹೆಸರಿಟ್ಟು ಬದುಕಿಸಿಕೊಂಡರು. ಐದನೆಯ ಮಗು ಹೆಣ್ಣು, ಆರನೆಯವರು ಜವರೇಗೌಡರು, ಕೊನೆಯ ಮಗು ಮತ್ತೆ ಹೆಣ್ಣು.

ಚೆನ್ನಮ್ಮನವರು ಜವರೇಗೌಡರನ್ನು ಹೆತ್ತಿದ್ದು ತಮ್ಮ ತೌರೂರು ಮುದಿಗೆರೆಯಲ್ಲಿ. ಅಜ್ಜನ ಮನೆಯ ಆಡಿನ ಕೊಟ್ಟಿಗೆಯಲ್ಲಿ ಜವರೇಗೌಡರು ಜನ್ಮತಾಳಿದರು. ಜವರೇಗೌಡರು ಹುಟ್ಟುವ ಹೊತ್ತಿಗೆ ಅವರ ತಂದೆಯವರಿಗೆ ದೃಷ್ಟಿ ಮಂದವಾಗತೊಡಗಿತ್ತು. ದುಡಿಮೆಯು ದೇವೇಗೌಡರ ಕೈಯಲ್ಲಿ ಸಾಗದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಕುಟುಂಬದ ಅತ್ಯಂತ ಕಷ್ಟಕರ ಸಮಯದಲ್ಲಿ ಹೆತ್ತವರ ಕೈ ಕೂಸಾಗಿ ಧೂಳಿನ ಮಗುವಾಗಿ ಜವರೇಗೌಡರು ಬೆಳೆದರು.

ಮೊದಲ ಮಗನ ಪುಸ್ತಕ ಬಟ್ಟೆಗಳನ್ನು ನೋಡಿಕೊಳ್ಳುವುದೇ ಸಾಧ್ಯವಾಗದ ಮುಗ್ಗಟ್ಟಿನಲ್ಲಿ ಎರಡನೇ ಮಗನ ವಿದ್ಯಾಭ್ಯಾಸ ಕೇವಲ ಕನಸಿನ ಮಾತಾಗಿತ್ತು. ಜವರೇಗೌಡರಿಗೆ ಐದು ವರ್ಷವಾಗುತ್ತಲೇ ಆಡು ಕಾಯುವ ಕೆಲಸವನ್ನು ವಹಿಸಲಾಯಿತು.. ಬಾಲ್ಯ ಸಹಜವಾದ ಕುತೂಹಲ, ಅಕ್ಷರಾಭ್ಯಾಸ ಮಾಡಬೇಕೆಂಬ ಅದಮ್ಯ ಬಯಕೆ ಮನಸ್ಸಿನ ಎಲ್ಲೋ ಒಂದು ಮೂಲೆಯಲ್ಲಿ ತುಡಿಯುತ್ತಿತ್ತು. ಊರಿನ ಶಾಲೆ, ಅಲ್ಲಿನ ವಿದ್ಯಾರ್ಥಿಗಳು ಜವರೇಗೌಡರ ಮನಸ್ಸು ಸೆಳೆದರು. ಎಲ್ಲ ಮಕ್ಕಳಂತೆ ತಾನೂ ಶಾಲೆಗೆ ಹೋಗಬೇಕೆಂಬ ಆಸೆ ಚಿಗುರೊಡೆಯಿತು. ಆಡುಗಳನ್ನು ಬೇಲಿಯಲ್ಲಿ ಮೇಯಲು ಬಿಟ್ಟು ಅವರು ಶಾಲೆಗೆ ಹೋಗಿ ಕುಳಿತುಕೊಳ್ಳಲು ಪ್ರಾರಂಭಿಸಿದರು. ಅನೇಕ ದಿನ ಹೀಗೆ ನಡೆಯಿತು. ಅಕ್ಷರಾಭ್ಯಾಸದಲ್ಲಿ ಅವರು ಆಸಕ್ತಿಯನ್ನೂ ಜಾಣ್ಮೆಯನ್ನೂ ತೋರಿದರು. ಒಂದು ದಿನ ಅವರು ಬಿಟ್ಟು ಬಂದಿದ್ದ ಆಡುಗಳು ಯಾರದೋ ಹೊಲಗಳನ್ನು ಧ್ವಂಸ ಮಾಡಿದವು ದೂರು ದೇವೇಗೌಡರನ್ನು ಮುಟ್ಟಿತು. ತೋಟದ ಮಾಲೀಕರಿಂದ ದೇವೇಗೌಡರಿಗೆ ತರಾಟೆ, ಬೈಗುಳಗಳ ಸುರಿಮಳೆ, ಇದರಿಂದ ಕೋಪಗೊಂಡ ತಂದೆ ಶಾಲೆಯ ಒಳಗಡೆ ಅಕ್ಷರ ಕಲಿಯುತ್ತಿದ್ದ ಮುಗ್ಧಬಾಲಕ ಜವರೇಗೌಡರನ್ನು ಧರಧರನೆ ಎಳೆದುಕೊಂಡು ಬಂದು "ಬಡ್ಡಿ ಮಗನೇ ನಿನ್ನ ಇಸ್ಕೂಲಿಗೆ ಹೋಗು ಅಂದೋರು ಯಾರು? ಎನ್ನುತ್ತಾ ಹಿಪ್ಪುನೇರಳೆ ಕಡ್ಡಿಯ ರುಚಿಯನ್ನು ತೋರಿಸಿದರು.

ಮಗನ ಮೈಮುಖ ನೋಡದೆ ಹೊಡೆಯತೊಡಗಿದರು. ದೇವೇಗೌಡರು ಚೀರುತ್ತಿದ್ದ ಹುಡುಗ, ಹರಿದ ಅಂಗಿ, ನೇಲುತ್ತಿದ್ದ ಕಚ್ಚೆ ಮೈಮೇಲಿನ ಬಾಸುಂಡೆಗಳು,

ಶಾಲೆಯ ಕಿಟಕಿಯಿಂದ ನೋಡುತ್ತಿದ್ದ ವೆಂಕಟರಾಮಯ್ಯಂಗಾರ್ ಎಂಬ ಅಧ್ಯಾಪಕರ ಹೃದಯವನ್ನು ಕಲಕಿತು. ಘಟನೆಯನ್ನೆಲ್ಲ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀಮಾನ್ ಹೆಚ್.ಕೆ.ವೀರಣ್ಣಗೌಡರಿಗೆ ವಿವರಿಸಿ ಹೇಳಿ ದೇವೇಗೌಡರಿಗೆ ಬುದ್ಧಿಹೇಳುವಂತೆ ಸೂಚಿಸಿದರು. ಆ ಹುಡುಗನ ಅಸಹಾಯಕ ಕರುಣಾಕ್ರಂದನವನ್ನು ಕೇಳಿದ ಉಪಾಧ್ಯಾಯರ ಕರಳು ಮರುಗಿತು. ಸುರಿಯುತ್ತಿರುವ ಕಣ್ಣೀರು ಏಟಿನ ಬಿಸಿಯಿಂದ ಮುಗ್ಧ ಬಾಲಕ ಚೀರಾಡುತ್ತಿರುವುದನ್ನು ಗಮನಿಸಿ ಧಾವಿಸಿಬಂದು ತಂದೆಯ ಕೈಯಿಂದ ಬಿಡಿಸಿ ವೆಂಕಟರಾಮಯ್ಯಂಗಾರ್ ಮುಖ್ಯೋಪಾಧ್ಯಾಯರ ಬಳಿಗೆ ಕರೆದೊಯ್ದರು. ಇವರು ವಿವರವನ್ನು ತಿಳಿದುಕೊಂಡ ಮೇಲಂತೂ ದೇವೇಗೌಡರನ್ನು ತರಾಟೆಗೆ ತೆಗೆದುಕೊಂಡರು. ತಕ್ಷಣ ದೇವೇಗೌಡರನ್ನು ಕುರಿತು "ಏನಯ್ಯಗೌಡ ನಿನಗೇನು ಸ್ವಲ್ಪವೂ ಕರುಣೆ ಇಲ್ಲವೇ? ಆ ಹುಡಗನನ್ನು ದನ ಹೊಡೆಯುವ ಹಾಗೆ ಹೊಡೆದಿರುವೆಯಲ್ಲ. ಸ್ಕೂಲಿಗೆ ಹುಡುಗರು ತಾವಾಗಿಯೇ ಬರುವುದಿಲ್ಲ. ನಿಮ್ಮ ಹುಡುಗ ತಾನಾಗಿಯೇ ಸ್ಕೂಲಿಗೆ ಬಂದರೆ ನಿನಗೆ ಆಗುವುದಿಲ್ಲ. ಇದು ಸರಿಯೇ? ಇನ್ಮೇಲೆ ಹೀಗೆ ಮಾಡದೆ ಹುಡುಗನನ್ನು ಸ್ಕೂಲಿಗೆ ಕಳುಹಿಸು" ಎಂದು ಬುದ್ಧಿ ಹೇಳಿದರು. ಹುಡುಗ ಬುದ್ಧಿವಂತನೆಂದೂ ಅವನನ್ನು ಶಾಲೆಗೆ ಸೇರಿಸಬೇಕೆಂದೂ ಅವರು ಆಗ್ರಹಪಡಿಸಿದರು. ಆದರೆ ಬಡತನ ಹರಿದು ತಿನ್ನುತ್ತಿದ್ದ ದೇವೇಗೌಡರು ತಮ್ಮ ಸ್ಥಿತಿಯನ್ನೆಲ್ಲ ವಿವರಿಸಿದರು. ದೊಡ್ಡ ಮಗ ಈಗ ಓದುತ್ತಿರುವುದಾಗಿಯೂ ಇನ್ನೊಬ್ಬನನ್ನು ಶಾಲೆಗೆ ಸೇರಿಸುವುದು ಸಾಧ್ಯವೇ ಇಲ್ಲವೆಂದೂ ಅವರು ಹೇಳಿದರು. ಕೊನೆಗೆ ವೀರಣ್ಣಗೌಡರು "ಹುಡುಗನ ಬಟ್ಟೆ ಬರೆ ಸ್ಲೇಟು ಪುಸ್ತಕಗಳ ಬಗ್ಗೆ ನೀನು ಯೋಚಿಸಬೇಡ ಅದೆಲ್ಲವನ್ನು ನಾನು ನೋಡಿಕೊಳ್ಳುತ್ತೇನೆ. ಅವನನ್ನು ನಾಳೆಯಿಂದ ಶಾಲೆಗೆ ಕಳಿಹಿಸು ಇಲ್ಲದಿದ್ದರೆ ಸರ್ಕಾರಕ್ಕೆ ಬರೆದು ನಿನ್ನ ಜೈಲಿಗೆ ಹಾಕಿಸುತ್ತೇನೆ ಎಂದು ಹೆದರಿಸಿದರು. ದೇವೇಗೌಡರಿಗೆ ಈಗ ಬೇರೆ ದಾರಿಯೇ ಇಲ್ಲವಾದಂತಾಯಿತು.

ವೀರಣ್ಣಗೌಡರು ಮಾತಿನಂತೆ ನಡೆದುಕೊಂಡು ಬಾಲಕನಿಗೆ ಪೋಷಾಕು ಪುಸ್ತಕಗಳನ್ನು ಒದಗಿಸಿದರು. ಶುರುವಿನಲ್ಲಿಯೇ ಅವರನ್ನು ಮೂರನೇ ತರಗತಿಗೆ ಸೇರಿಸಿದರು. ಹೀಗೆ ಜವರೇಗೌಡರ ವಿದ್ಯಾಭ್ಯಾಸ ಆರಂಭವಾಯಿತು. ಹನ್ನೆರಡನೇ ವಯಸ್ಸಿನಲ್ಲಿ (೧೯೩೦) ಜವರೇಗೌಡರು ಲೋಯರ್ ಸೆಕೆಂಡರಿ ಪರೀಕ್ಷೆ ಕಟ್ಟಿದರು. ಶಾಲೆಯ ಮುಖ್ಯೋಪಾಧ್ಯಾಯರಾದ 'ಪುಟ್ಟಶಾಸ್ತ್ರಿ'ಗಳ ಪ್ರೇರಣೆಯಿಂದ ಸ್ಕಾಲರ್‌ಶಿಪ್-ನಿಂದ ಓದನ್ನು ಮುಂದುವರೆಸಿ ಹೈಸ್ಕೂಲ್ ಓದಿಗೆ ಚನ್ನಪಟ್ಟಣಕ್ಕೆ ಬಂದರು.

ಆ ದಿನಗಳಲ್ಲೇ ಇವರು ವಾಚನಾಲಯದಲ್ಲಿ ಓದುತ್ತಿದ್ದಾಗ ಆಕಸ್ಮಾತ್ತಾಗಿ 'ಇಂಗ್ಲಿಷ್ ತ್ರೈಮಾಸಿಕ ತ್ರಿವೇಣಿ' ಅವರ ಕಣ್ಣಿಗೆ ಬಿದ್ದಿತು. ಅದರಲ್ಲಿ ಕುವೆಂಪು

ಅವರನ್ನು ಕುರಿತ ಲೇಖನ ಇವರ ಮನ ಸೆಳೆಯಿತು. 'ಪ್ರಬುದ್ಧ ಕರ್ನಾಟಕದಲ್ಲಿ ಬಂದ ಕುವೆಂಪು ಅವರ ಭಾವ ಚಿತ್ರವನ್ನು ಯಾರಿಗೂ ಕಾಣದಂತೆ ಹರಿದು ತಂದು' ಕಟ್ಟು ಹಾಕಿಸಿ ತಮ್ಮ ಕೋಣೆಯಲ್ಲಿ ಇರಿಸಿಕೊಂಡಿದ್ದರು.

ಜವರೇಗೌಡರು ಬಿ.ಎ. ಆನರ್ಸ್‌ಗೆ ೧೯೩೮ರಲ್ಲಿ ಮೈಸೂರಿನ ಮಹಾರಾಜ ಕಾಲೇಜನ್ನು ಆರಿಸಿಕೊಂಡರು. ಬಿ.ಎ. ಆನರ್ಸ್‌ಗೆ ಬಯಸಿದ್ದು ಇಂಗ್ಲಿಷ್, ಕೊನೆಗೆ ತೆಗೆದುಕೊಳ್ಳಲು ನಿರ್ಧರಿಸಿದ್ದು ಚರಿತ್ರೆ. ಆಮೇಲೆ ತೆಗೆದುಕೊಂಡದ್ದು ಕನ್ನಡ. ಮೈಸೂರಿನಲ್ಲಿ ಉಳಿದುಕೊಳ್ಳಲು ಶುಚಿತ್ವ ಜೀವನಕ್ಕೆ ಹೇಳಿಮಾಡಿಸಿದಂತಿದ್ದ ಶ್ರೀರಾಮಕೃಷ್ಣಾಶ್ರಮವನ್ನು ಸೇರಿದರು.

ಜವರೇಗೌಡರಿಗೆ ಕನ್ನಡ ಓದಿ ಆನರ್ಸ್ ಪಡೆದಿದ್ದರೂ ಆಗ ದುಡಿಮೆಯ ಯಾವ ಅವಕಾಶವೂ ಇರಲಿಲ್ಲ. ಕಾನೂನು ಮತ್ತು ಎಂ.ಎ. ವ್ಯಾಸಂಗಕ್ಕೆ ಕೊಲ್ಲಾಪುರಕ್ಕೆ ಬಂದರು. ಆದರೆ ತಡವಾಗಿ ಹೋದದ್ದರಿಂದ ಆ ಕಾಯಕ ಫಲಪ್ರದವಾಗದೆ ವಾಪಸ್ಸು ಬಂದು ವಿದ್ಯಾ ಇಲಾಖೆಯಲ್ಲಿ ಗುಮಾಸ್ತರಾದರು. ಹೆಚ್ಚು ದಿನ ಅಲ್ಲಿ ಉಳಿಯಲಾರದೆ 'ಕೃಷ್ಣಶಾಸ್ತ್ರಿ'ಗಳ ನೆರವಿನಿಂದ ಕನ್ನಡ ಎಂ.ಎ. ಶಿಕ್ಷಣಕ್ಕೆ ಸೇರಿದರು. ವಿದ್ಯಾರ್ಥಿ ವೇತನವೂ ದೊರೆಯಿತು. ಚನ್ನಪಟ್ಟಣ ತಾಲ್ಲೂಕಿನ ತಿಮ್ಮಸಂದ್ರದ ಅಪ್ಪಾಜಿಗೌಡರ ಮಗಳು 'ಸಾವಿತ್ರಮ್ಮ'ನವರೊಂದಿಗೆ ದಿನಾಂಕ ೨೬-೪-೪೩ರಂದು ಜವರೇಗೌಡರ ವಿವಾಹ ನಡೆಯಿತು.

೧೯೪೬ರಲ್ಲಿ ದೇಜಗೌ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ನೇಮಕಗೊಂಡು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದರು. ಮುಂದೆ ಎರಡು ವರ್ಷಗಳಲ್ಲಿಯೇ ದೇಜಗೌ ಸ್ವತಃ ತಾವು ಓದಿದ ಕಾಲೇಜಾದ ಮಹಾರಾಜ ಕಾಲೇಜಿಗೆ ಅಧ್ಯಾಪಕರಾಗಿ ಬಂದರು. ತಮ್ಮ ಬರವಣಿಗೆಯ ಅಭಿವ್ಯಕ್ತಿಗೆ ಚಾಲನೆ ದೊರಕಿದ್ದು ಈ ಸಂದರ್ಭದಲ್ಲಿಯೇ ಆಗಿದೆ. ದೇಜಗೌ ಅವರು ಮೊದಲ ಬಾರಿಗೆ ೧೯೪೯ರಲ್ಲಿ ಶ್ರೀಮತಿ ಕೃಷ್ಣ ಹಥೀಸಿಂಗನ 'With no Regrets' ಕೃತಿಯ ಅನುವಾದ 'ನೆನಪು ಕಹಿಯಲ್ಲ' ಪುಸ್ತಕ ಪ್ರಕಟಿಸಿದರು. ಇಲ್ಲಿಂದ ಪ್ರಾರಂಭಗೊಂಡ ಇವರ ಅಭಿವ್ಯಕ್ತಿಯ ಲೇಖನಿ ಇಂದು ಕೂಡ ಬತ್ತದ ತೊರೆಯಾಗಿ ಹರಿಯುತ್ತಿದೆ.

೧೯೫೫ರಲ್ಲಿ ಕ್ರಮಪ್ರಾಪ್ತವಾಗಿ ದೇಜಗೌ ಪ್ರಾಧ್ಯಾಪಕರಾದರು. ಅನಂತರ ಪ್ರಸಾರಾಂಗದ ಕಾರ್ಯದರ್ಶಿ, ಪರೀಕ್ಷಾಧಿಕಾರಿ, ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರಾಗಿ ನೀಡಿದ ಶಿಕ್ಷಣ, ಆಡಳಿತ ಹಾಗೂ ಜೀವನಾನುಭವಗಳು ಅವರು

ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಎರಡು ಅವಧಿಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ, ಮಾಡಿದ ಕೆಲಸ ಕನ್ನಡ ನಾಡುನುಡಿ ಸಂಸ್ಕೃತಿಯಲ್ಲಿ ಸ್ಮರಣೀಯವಾದುದಾಗಿದೆ. ಕುವೆಂಪು ಅವರ ಕಾಣ್ಕೆಗಳನ್ನು ನನಸಾಗಿಸಲು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗೆ ಸರ್ವಾಂಗೀಣವಾದ ಅಭಿವೃದ್ಧಿಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲು ಶ್ರಮಿಸಿದ್ದಾರೆ.

ಅಪಾರವಾದ ಸಾಮಾಜಿಕ ಹಿನ್ನೆಲೆಯುಳ್ಳ ದೇಜಗೌ ಅವರಿಗೆ ಸಂಘಸಂಸ್ಥೆ-ಗಳನ್ನು ಕಟ್ಟುವ, ಬೆಳೆಸುವ ಗುಣ ರಕ್ತಗತವಾಗಿ ಬಂದದ್ದು. ಅವರ ಹೋರಾಟದ ಬದುಕಿನಲ್ಲಿ ನಾವು ನಿಂತು ನೋಡಿದಾಗ ಅವರ ಒಟ್ಟು ಸಾಧನೆ ಅಪಾರ, ಅಪರಿಮಿತ, ಅವರು ಪಡೆದ ಸಿದ್ಧಿ ಅಪೂರ್ವ. ಅಂತಹ ಅಪಾರವಾದ ಸಿದ್ಧಿಯನ್ನು ತಂದು-ಕೊಡುವಲ್ಲಿ ಇವರು ಮಾಡಿದ ಸಾಂಘಿಕ ಸಾಧನೆಯೂ ಕೂಡ ಒಂದು. 'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ಗಾದೆ ಮಾತು ಇಲ್ಲಿ ತುಂಬ ಮಹತ್ವಪೂರ್ಣದ್ದಾಗಿದೆ. ದೇಜಗೌ ಅವರು ಅಪಾರ ಸಾಧನೆಗಳ ನಡುವೆಯೂ ಸದೃಢವಾದ ಹಲವಾರು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿ ಗೊಬ್ಬರ ನೀರು ಹಾಕಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಹೀಗೆ ಅವರು ಕಟ್ಟುವ ಮತ್ತು ಬೆಳೆಸುವ ಕ್ರಿಯೆ ಜೊತೆಗೆ ಇಂದು ಫಲಬಿಡುವ ಸಂಸ್ಥೆಗಳನ್ನಾಗಿ ಮಾಡುವಲ್ಲಿ ದೇಜಗೌ ಅವರ ಪಾತ್ರ ಮಹತ್ತರ ಉದ್ದೇಶಗಳಲ್ಲಿ ಒಂದಾಗಿದೆ.

ಪ್ರತಿಭೆ ಮತ್ತು ಸತತವಾದ ದುಡಿಮೆ ಇವೆರಡೂ ಒಟ್ಟೊಟ್ಟಿಗೆ ಇದ್ದರೆ ಎಂಥ ಅಸಾಧ್ಯವಾದುದನ್ನು ಸಾಧಿಸಬಹುದೆಂಬುದಕ್ಕೆ ದೇಜಗೌ ಅವರೇ ನಮಗೆ ಜೀವಂತ ನಿದರ್ಶನ. ಇವರಿಗೆ ಸಿಕ್ಕಂತ ಅಧಿಕಾರದಲ್ಲಿ ಕೆಲವೊಂದು ಮಹತ್ವದ ಆಲೋಚನೆಗಳಿಗೆ ಗೆಲುವು ಸಿಕ್ಕಿದೆ. ಇವರು ಕೇವಲ ಹೆಸರಿಗೆ ಮಾತ್ರ ಸಂಸ್ಥೆಗಳನ್ನು ಕಟ್ಟದೆ, ಅದರ ಮೂಲಕ ಕನ್ನಡ ನಾಡುನುಡಿಗೆ ಸಮಾಜಕ್ಕೆ ಸಂಸ್ಕೃತಿಗೆ ಅಪಾರವಾದ ಕೊಡುಗೆಯನ್ನು ಸಲ್ಲಿಸುವ ನಿಟ್ಟಿನಲ್ಲಿ ದೇಜಗೌ ದಾಪುಗಾಲಿಟ್ಟಿದ್ದಾರೆ. ಒದಗಿದ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ಕಲಾತ್ಮಕತೆ, ವ್ಯಕ್ತಿ-ವಿಶಿಷ್ಟತೆ, ನೈಪುಣ್ಯತೆ ಸಾಹಿತ್ಯಿಕವಾಗಿ ವ್ಯಕ್ತಿಯ ಬದುಕನ್ನು ರೂಪಿಸುತ್ತದೆ ಎಂಬುದಕ್ಕೆ ಇಂದು ದೇಜಗೌ ಸಾಕ್ಷಿಯಾಗಿದ್ದಾರೆ. ಕನ್ನಡಭಾಷೆ ಸುಮಾರು ಎರಡು ಸಾವಿರದಷ್ಟು ಸುಧೀರ್ಘವಾದ ಇತಿಹಾಸವನ್ನು ಹೊಂದಿದ್ದು, ಹಲ್ಮಿಡಿ ಶಾಸನದಿಂದ ಮೊದಲ್ಗೊಂಡು ಇಂದಿನವರೆಗೂ ಉತ್ಕೃಷ್ಟ ಸಾಹಿತ್ಯಕೃಷಿ ಕನ್ನಡ ಭಾಷೆಯಲ್ಲಾಗಿದೆಯೆಂದು ಆದ್ದರಿಂದ ಕನ್ನಡಕ್ಕೆ ನ್ಯಾಯಯುತವಾಗಿ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರಕಬೇಕೆಂದು ಉಪವಾಸ ಸತ್ಯಾಗ್ರಹ ಮಾಡಿ ಯಶಸ್ವಿಯಾದವರು ದೇಜಗೌ.

ದೇಜಗೌ ಕನ್ನಡ ಭಾಷೆಯ ರಕ್ಷಣೆ ಮತ್ತು ಬೆಳವಣಿಗೆಯಲ್ಲಿ ವಹಿಸಿದ ಪಾತ್ರ ಬಹಳ ಮಹತ್ವದ್ದಾಗಿದೆ. ಇವರ ಅಧಿಕಾರಾವಧಿಯಲ್ಲಿ ಕೈಗೊಂಡ ಸರ್ವೋದ್ಧಾರದ ಧ್ಯೇಯೋದ್ದೇಶಗಳೆಂದರೆ

೧) ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು.

೨) ಆಡಳಿತ ಮಾಧ್ಯಮವಾಗಬೇಕು

೩) ಪಿಎಚ್.ಡಿ ಅಂತಹ ಸಂಶೋಧನಾ ಮಹಾಪ್ರಬಂಧಗಳು ಅದು ಯಾವುದೇ ವಿಷಯದಲ್ಲಿ ಬೇಕಾದರೂ ಇರಲಿ ಅದನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಿದರು.

೪) ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಬೇಕು

೫) ಕನ್ನಡ ಪಂಡಿತರಿಗೆ ಬಿ.ಎಡ್ ಓದಲು ಅವಕಾಶವಿರಬೇಕು

೬) ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಕೆಲಸಗಳಲ್ಲಿ ಆಧ್ಯತೆ ಇರಬೇಕು. ಇವುಗಳನ್ನು ಕಾರ್ಯಗತಗೊಳಿಸಿ ಕನ್ನಡದ ಏಳ್ಗೆಗಾಗಿ ಶ್ರಮಿಸಿದರು. ಕನ್ನಡ ಭಾಷೆ ಬೆಳವಣಿಗೆ ಹೊಂದಬೇಕಾದರೆ ಹಲವಾರು ಯೋಜನೆಗಳನ್ನು ಕನ್ನಡದ ಬೆಳವಣಿಗೆಗೋಸ್ಕರ ಜಾರಿಗೆ ತಂದು ಅವುಗಳನ್ನು ಕಾರ್ಯಗತಗೊಳಿಸಿದ ಕೀರ್ತಿ ಅವರಿಗೆ ಸಲ್ಲಿತ್ತದೆ.

೧) ವಿಶ್ವಕೋಶ ಯೋಜನೆ

೨) ಭಾಷಾಂತರ ಯೋಜನೆ

೩) ಜಾನಪದ ಸಾಹಿತ್ಯ ಬೆಳವಣಿಗೆ

೪) ಸಂಪಾದನಾ ಶಾಸ್ತ್ರದ ಯೋಜನೆ

೫) ಸ್ಥಳನಾಮ ಅಧ್ಯಯನದ ಬೆಳವಣಿಗೆ

೬) ಕನ್ನಡನಾಡಿಗೆ ಸೇವೆಸಲ್ಲಿಸಿದವರ ಹೆಸರಿನಲ್ಲಿ ಸಂಘಸಂಸ್ಥೆಗಳ ಸ್ಥಾಪನೆ

೭) ಪ್ರಶಸ್ತಿಗಳನ್ನು ಸೃಷ್ಟಿ ಮಾಡುವುದರ ಮುಖಾಂತರ

೮) ಹೊಸ ಲೇಖಕರಿಗೆ ಮುನ್ನುಡಿ ಬರೆಯುವ ಮುಖಾಂತರ ಕನ್ನಡ ಬಗೆಗಿನ ಸಮಷ್ಟಿ ಪ್ರಜ್ಞೆಯ ಧೀಶಕ್ತಿ ಅವರಿಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ದೇಜಗೌ ಕನ್ನಡವನ್ನು ಸಂಘಸಂಸ್ಥೆಗಳನ್ನು ಕಟ್ಟುವ ಮೂಲಕ ತಮ್ಮ ಹೊಸ ಸಂಸ್ಕೃತಿಯ ಹೊಸ ಆಶಯಗಳನ್ನು ಆಯಾಮಗಳನ್ನು ಹೇಗೆ ರೂಪಿಸಿಕೊಳ್ಳುತ್ತಾರೆ

ಎಂಬುದಕ್ಕೆ ಅವರು ಕಟ್ಟಿದ ಸಂಘಸಂಸ್ಥೆಗಳೇ ಸಾಕ್ಷಿಯಾಗಿವೆ. ಅವರು ಕಟ್ಟಿ ಬೆಳೆಸಿದ ಸಂಘಸಂಸ್ಥೆಗಳಲ್ಲಿ ಮುಖ್ಯವಾದವುಗಳೆಂದರೆ,

೧) ಜ್ಞಾನೋದಯ ಸಂಘ

೨) ಕರ್ನಾಟಕ ಸಂಘ–ಕನ್ನಡಸಂಘ

೩) ಕನ್ನಡ ಅಧ್ಯಯನ ಸಂಸ್ಥೆ

೪) ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

೫) ಶ್ರೀ ಕುವೆಂಪು ವಿದ್ಯಾ ಪರಿಷತ್ತು

೬) ಅಖಿಲ ಭಾರತೀಯ ಸ್ಥಳನಾಮ ಪರಿಷತ್ತು

೭) ಹಿರಿಯ ನಾಗರಿಕ ಸಭಾ

೮) ಭಾಷಾಂತರ ಪರಿಷತ್ತು

೯) ಕನ್ನಡ ಅಧ್ಯಾಪಕ ಪರಿಷತ್ತು

೧೦) ಕೆ.ವಿ.ಶಂಕರಗೌಡ ಸಾಂಸ್ಕೃತಿಕ ಪ್ರತಿಷ್ಠಾನ

೧೧) ವಚನಸಾಹಿತ್ಯ ಪರಿಷತ್ತು

೧೨) ಮಹಾಜನ ಸಭಾ

೧೩) ಅಂತರ ಜಾತಿಯ ವಿವಾಹ ವೇದಿಕೆ

೧೪) ನೃಪತುಂಗ ಸಾಹಿತ್ಯವೇದಿಕೆ

೧೫) ದೇಜಗೌ ಟ್ರಸ್ಟ್

೧೬) ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ

೧೭) ಕುವೆಂಪು ಭಾಷಾ ಭಾರತಿ

ಹೀಗೆ ನೂರಾರು ಸಂಘಸಂಸ್ಥೆಗಳಿಗೆ ಸ್ಫೂರ್ತಿ ನೀಡಿ ಪೋಷಿಸಿ ಬೆಳೆಸಿದ್ದಾರೆ.

ಅಧ್ಯಾಯ – ೩

ಅಧ್ಯಯನ ಶಿಸ್ತಾಗಿ ಜಾನಪದ

ಭಾರತ ದೇಶವನ್ನು ವಸಾಹತುವಾಗಿ ಮಾಡಿಕೊಂಡು ಸುದೀರ್ಘ ಆಳ್ವಿಕೆ ಮಾಡಿದ ಬ್ರಿಟಿಷರು, ಇಲ್ಲಿನ ಪರಿಸರ ವೈವಿದ್ಯಮಯ ಭಾಷೆ, ಸಂಸ್ಕೃತಿ, ಆಚಾರ–ವಿಚಾರಗಳಿಗೆ ಮಾರುಹೋದರು. ಸ್ಥಳೀಯ ಜನರ ಜೊತೆ ಹೆಚ್ಚಿನ ಒಡನಾಟಕ್ಕಾಗಿ ಹಾಗೂ ಸುಲಭ ಆಡಳಿತ ನಿರ್ವಹಣೆಗಾಗಿ ಬ್ರಿಟಿಷ್ ಆಡಳಿತಗಾರರು ಮತ್ತು ಮಿಷನರಿ ವಿದ್ವಾಂಸರುಗಳು ನಾಡಿನ ಭಾಷೆ, ಕಲೆ, ಸಾಹಿತ್ಯ ಇವುಗಳ ಅಧ್ಯಯನವನ್ನು ಮಾಡುವ ಸಂದರ್ಭದಲ್ಲಿ ದೇಸಿ ಬದುಕನ್ನು ಗಮನಿಸಿ, ಅದನ್ನು ತಮ್ಮ ಲೇಖನಗಳು, ಗ್ರಂಥಗಳು ಮತ್ತು ಪ್ರವಾಸಿ ಕಥನಗಳಲ್ಲಿ ದಾಖಲಿಸಿದ್ದಾರೆ. ಬಿ.ಎಲ್.ರೈಸ್, ಪ್ರೀಟ್, ಮೆಕೆಂಜಿ, ಮೊಗ್ಲಿಂಗ್... ಮುಂತಾದ ಆಂಗ್ಲ ಮಿಷನರಿಗಳು ಪ್ರಚಲಿತವಿರುವ ಶಿಲಾಶಾಸನ, ಗ್ರಂಥಸ್ಥ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದರು. ಮುಂದಿನ ದೇಸಿ ವಿದ್ವಾಂಸರು ಇದರಿಂದ ಪ್ರಭಾವಿತರಾಗಿ ಪ್ರಕೃತವಿರುವ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸಲು ಪ್ರಾರಂಭಿಸಿದರು.

೧೯೭೦ರ ದಶಕದಲ್ಲಿ ಜಾನಪದಕ್ಕೆ ಭದ್ರ ಬುನಾದಿ ಒದಗಿಸಲು ಪಾಶ್ಚಾತ್ಯ ಜಾನಪದ ಅಧ್ಯಯನ ಪಥವನ್ನು ಗಮನಿಸಿ ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾದ ವಿದ್ವಾಂಸರಲ್ಲಿ ದೇಜಗೌ ಮೊದಲಿಗರಾಗುತ್ತಾರೆ. ದೇಜಗೌ ಅವರು ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಮೊದಲಾದ ಕ್ಷೇತ್ರಗಳಲ್ಲಿ ವಿಶಿಷ್ಟವೂ ಮೌಲಿಕವೂ ಆದ ಸೇವೆ ಸಲ್ಲಿಸಿದ್ದಾರೆ. ಅಂತಹ ಕ್ಷೇತ್ರಗಳಲ್ಲಿ ಜಾನಪದವು ಒಂದು. ಇವರ ಸದೃಢ ಸಂಕಲ್ಪ ಶಕ್ತಿ ಪ್ರಚಂಡ ಕ್ರಿಯಾಶಕ್ತಿಗಳನ್ನು ಹೊಂದಿ ಮೂಡಿ ಬಂದ ಕಾರ್ಯಕ್ಷೇತ್ರ ಜಾನಪದ.

ಸ್ನಾತಕೋತ್ತರ ಮಟ್ಟದಲ್ಲಿ ಜಾನಪದ ಅಧ್ಯಯನವನ್ನು ಪ್ರಾರಂಭಿಸಿದ್ದು ಭರತಖಂಡದಲ್ಲೇಕೆ ಇಡೀ ಏಷಿಯಾದಲ್ಲಿಯೇ ಪ್ರಪ್ರಥಮ ಪ್ರಯತ್ನ. ಈ ಪ್ರಯತ್ನ ತುಂಬ ಯಶಸ್ವಿಯಾಗಲು ನೆರವು ನೀಡಿದವರು ತರಿಕೆರೆಯ ಕೆ.ಆರ್.ಲಿಂಗಪ್ಪನವರು ಎಂದು ದೇಜಗೌ ಅವರು ಹೇಳಿಕೊಂಡಿದ್ದಾರೆ (ತಮ್ಮ ಹೋರಾಟದ ಬದುಕು ಆತ್ಮ ಕಥನದಲ್ಲಿ ಹೇಳಿಕೊಂಡಿದ್ದಾರೆ).

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೧೯೬೬ರಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಆರಂಭವಾಗಿ ಡಾ. ದೇಜಗೌರವರು ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಕನ್ನಡ ಜಾನಪದ ಮೂರನೇ ಘಟ್ಟ ಆರಂಭವಾಯಿತು. ಜಾನಪದದ ಬಗ್ಗೆ ಶೈಕ್ಷಣಿಕ ವಲಯಗಳಲ್ಲಿ ಉಪೇಕ್ಷೆ ಉದಾಸೀನ ಮನೋಭಾವನೆಗಳೇ ಹೆಚ್ಚಾಗಿದ್ದಾಗ ಡಾ. ದೇಜಗೌ

ಅವರು ತುಂಬ ದಿಟ್ಟತನದಿಂದ ಹಾಗೂ ದೂರಾಲೋಚನೆಯಿಂದ "ಜಾನಪದ ಸರಸ್ವತಿಯನ್ನು ವಿಶ್ವವಿದ್ಯಾನಿಲಯದ ಮೆಟ್ಟಿಲು ಹತ್ತಿಸಿದರು.[೧] ಎಂದಿದ್ದಾರೆ.

ಜಾನಪದ ಗರ್ಭದಿಂದಲೇ ಹುಟ್ಟಿ ಬಂದವರಾದ್ದರಿಂದ ದೇಜಗೌ ಅವರಿಗೆ ಜಾನಪದಗಳ ಬಗೆಗಿನ ಆಸಕ್ತಿ ಯಾವಾಗ ಹೇಗೆ ಅಂಕುರಿಸಿತು, ಹೇಗೆ ಬೆಳೆಯಿತು ಎಂಬಂಥ ಪ್ರಶ್ನೆಗಳು ನಮಗೆ ಇಲ್ಲಿ ಅಮುಖ್ಯ, ನಿಜವಾದ ಅರ್ಥದಲ್ಲಿ ಹೇಳುವುದಾದರೆ ದೇಜಗೌ ಜನಪದರು. ನಾಡಿನಲ್ಲಿ ತಬ್ಬಲಿಯಾಗಿದ್ದ ಜಾನಪದವನ್ನು ಆರಾಧ್ಯ ದೈವವಾಗಿ ಪ್ರತಿಷ್ಠಾಪಿಸಿ ಪೂಜೆಗೆ ಅಣಿಮಾಡಿಸಿ ಅದಕ್ಕೆ ಒಂದು ಮಹತ್ವದ ಸ್ಥಾನವನ್ನು ಒದಗಿಸಿಕೊಟ್ಟವರು ಡಾ.ದೇಜಗೌ ಅವರಾಗಿದ್ದಾರೆ.

ಕನ್ನಡ ಎಂ.ಎ. ತರಗತಿಯಲ್ಲಿ ಜಾನಪದವನ್ನು ಒಂದು ಐಚ್ಛಿಕ ಅಧ್ಯಯನ ವಿಷಯವೆಂದು ಪರಿಗಣಿಸಿ ಅದಕ್ಕೆ ಶೈಕ್ಷಣಿಕ ಸ್ಥಾನಮಾನವನ್ನು ಕರ್ನಾಟಕದಲ್ಲಿ ಮೊದಲ ಬಾರಿಗೆ ತಂದುಕೊಟ್ಟದ್ದು ಬಹುಮುಖ್ಯ ಸಾಧನೆ. ಅದಕ್ಕೆ ಮೊದಲು ಕಲ್ಕತ್ತ ವಿಶ್ವವಿದ್ಯಾನಿಲಯವನ್ನು ಬಿಟ್ಟರೆ ಬೇರೆ ಯಾವ ವಿಶ್ವವಿದ್ಯಾನಿಲಯದಲ್ಲಿಯೂ ಜಾನಪದ ಅಧ್ಯಯನದ ವಿಷಯವಾಗಿರಲಿಲ್ಲ ಎಂಬ ತೀ.ನಂ.ಶಂಕರನಾರಾಯಣ್‌ರವರ ಮಾತು ತುಂಬಾ ವಿಶಿಷ್ಟವಾದುದು.[೨]

ಕವಿರಾಜಮಾರ್ಗಕಾರ ಕನ್ನಡಿಗರನ್ನು "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತಮತಿಗಳ್" ಎಂದು ಕರೆಯುತ್ತಾನೆ. ನಮ್ಮಲ್ಲಿ ಹುಲುಸಾಗಿರುವ ಜನಪದ ಸಾಹಿತ್ಯವನ್ನು ಕಂಡಾಗ ಕವಿರಾಜಮಾರ್ಗಕಾರನ ಈ ಮಾತು ಅಕ್ಷರಶಃ ಸತ್ಯ ಎನಿಸುತ್ತದೆ. ಆದರೂ ಅವರ ಹೃದಯವರಳಿ ಉಕ್ಕಿ ಬಂದ ಸಾಹಿತ್ಯ ಭಾವನೆಗಳ ಮಡುವಿನಲ್ಲಿ ಹೊರಳಾಡುವುದನ್ನು ಕಂಡಾಗ ಯಾವ ಕಾವ್ಯ ಪ್ರಯೋಗಗಳಿಗೂ ಏನೂ ಕಡಿಮೆ ಇಲ್ಲ. ಆ ನಂತರದ ವಿಷಾದ ಸಂಗತಿ ಎಂದರೆ ಕಾವ್ಯ ಪ್ರಯೋಗಗಳಲ್ಲಿ ನಿಷ್ಣಾತರಾದ ವಿದ್ವಾಂಸರುಗಳು ಕುರಿತೋದೆಯೂ ಕಾವ್ಯ ಪ್ರಯೋಗಗಳಲ್ಲಿ ಅದ್ಭುತ ಯಶಸ್ಸನ್ನು ಸಾಧಿಸಿದ ಜನಪದ ಸಾಹಿತ್ಯವನ್ನು ಬೀದಿ ಸಾಹಿತ್ಯ ಅನಕ್ಷರಸ್ಥ, ಅಗ್ರಾಮ್ಯ, ಸಾಹಿತ್ಯ ಎಂದು ಹೀಗಳೆದು ಮೂಲೆಗೊತ್ತರಿಸಿದರು. ವಿದ್ವಾಂಸರುಗಳ ಆಸ್ಥಾನ ಪಂಡಿತರುಗಳ ಜರಿರುಮೂಲು, ಶಾಲು ಹೊದ್ದ ಜನಗಳ ಅಸಡ್ಡೆಯ ಕಾರಣದಿಂದಾಗಿ ಅರಸೊತ್ತಿಗೆಯ ಅಂತ್ಯದವರೆಗೂ ಜನಪದ ಸಾಹಿತ್ಯ ಮೇಲೆ ಬರಲಾಗಲಿಲ್ಲ. ಮುಂದೆಯೂ ಶಿಷ್ಟಕವಿಗಳು "ಜನವಾಣಿಬೇರು, ಕವಿವಾಣಿ ಹೂವು" ಎಂಬುದನ್ನು

---

೧. ಡಾ. ಹಾ.ಮಾ. ನಾಯಕ, ಕನ್ನಡ ಜಾನಪದ ಗ್ರಂಥಸೂಚಿ, ಪು. iv

೨. ರಸಷಷ್ಟಿ, ಕನ್ನಡ ಜಾನಪದಕ್ಕೆ ಡಾ. ದೇಜಗೌ ಅವರ ಕೊಡುಗೆ, ಪು. ೭೫

ಮರೆತು ಜನಪದ ಸಾಹಿತ್ಯ ಎಂದರೆ ಮೂಗು ಮುರಿಯಲಾರಂಭಿಸಿದರು. ರಾಗಿಬೀಸುವ ಪದಗಳನ್ನು ಪಠ್ಯವನ್ನಾಗಿ ಬೋಧಿಸುವುದು ಮೂರ್ಖತನ ಎಂದು ವಿಶ್ವವಿದ್ಯಾನಿಲಯದ ಬುದ್ಧಿವಂತ ಜನ ಹಾಸ್ಯ ಮಾಡಿ ನಕ್ಕರು. ಇಂಥ ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡ ಜನಪದ ಸಾಹಿತ್ಯ ಅಳಿವು, ಉಳಿವಿನ ಮಧ್ಯೆ ಓಲಾಡುತ್ತಿದ್ದಾಗ, ಕನ್ನಡಿಗರಲ್ಲಿ 'ಜಾನಪದದ ಬಗೆಗೆ ಸ್ಪಷ್ಟವಾದ ಕಲ್ಪನೆ ಒಂದನ್ನು ರೂಪಿಸಿದವರು ಅದಕ್ಕೆ ಬಿರುಸಿನ ಚಾಲನೆಯನ್ನಿತ್ತವರು ಪ್ರೊ. ದೇಜಗೌ ಅವರು ಆದ್ದರಿಂದಲೇ ಡಾ. ಚಕ್ಕರೆ ಶಿವಶಂಕರ ಅವರು ಇವರನ್ನು 'ಜಾನಪದ ಹರಿಕಾರ' ಎಂದು ಕರೆದಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ.

ಭಾರತದಲ್ಲಿ ಪೂರ್ಣಪ್ರಮಾಣ ಜಾನಪದ ಎಂ.ಎ. ಶಿಕ್ಷಣವನ್ನು ಮೊಟ್ಟ ಮೊದಲು ೧೯೬೯ರಲ್ಲಿ ಆರಂಭಿಸಿದ ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಗ ಕುಲಪತಿಗಳಾಗಿದ್ದ ಡಾ. ದೇಜಗೌ ಅವರಿಗೆ ಹಾಗೂ ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿದ್ದ ಡಾ. ಹಾ.ಮಾ.ನಾಯಕ್ ಅವರಿಗೆ ಸಲ್ಲುತ್ತದೆ. ಹಾಗೆಯೇ ಕನ್ನಡ ಅಧ್ಯಯನ ಸಂಸ್ಥೆ ನಡೆಸುತ್ತಿರುವ ಜಾನಪದ ಡಿಪ್ಲೊಮಾ ತರಗತಿಗಳು ತುಂಬಾ ಉಪಯುಕ್ತವಾಗಿವೆ. ಜಾನಪದ ಪ್ರಾಧ್ಯಾಪಕರಾಗಿ ಡಾ. ಜೀಶಂಪ ಅವರು ನೇಮಕಗೊಂಡ ಮೇಲೆ ಜಾನಪದ ಸಂಗ್ರಹ ಸಂಪಾದನೆ ಮೊದಲಾದ ಕಾರ್ಯಗಳು ತೀವ್ರಗತಿಯಲ್ಲಿ ನಡೆಯುತ್ತಿವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಕ್ಷೇತ್ರದಲ್ಲಿ ಆಗಿರುವ ಈ ಎಲ್ಲಾ ಸಾಧನೆಗಳಿಗೂ ಮೂಲ ಕಾರಣರು ಡಾ. ದೇಜಗೌ ಅವರು. "ಜಾನಪದ ಅಭಿವೃದ್ಧಿಯಲ್ಲಿ ಅವರು ತೋರಿದ ಆಸಕ್ತಿ ನೀಡಿದ ನಾಯಕತ್ವ ಯಾವಾಗಲೂ ನೆನೆಸಬೇಕಾದಂಥವು" ಎಂದು ಡಾ.ಹಾ.ಮಾ.ನಾಯಕರು ಹೇಳಿರುವ ಮಾತುಗಳು ತುಂಬಾ ಸಮರ್ಪಕವಾಗಿವೆ.

ಇಂದು ಕರ್ನಾಟಕ ವಿಶ್ವವಿದ್ಯಾನಿಲಯ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ, ಹಂಪಿ ಕನ್ನಡ ವಿಶ್ವವಿದ್ಯಾನಿಲಯ ಸಹ ಮೈಸೂರು ವಿಶ್ವವಿದ್ಯಾನಿಲಯದ ಪಂಕ್ತಿಯನ್ನನುಸರಿಸಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಕರ್ನಾಟಕ ಜಾನಪದ ಪರಿಷತ್ತನ್ನು ಕಟ್ಟುವುದರ ಮೂಲಕ ೧೯೬೦ರಲ್ಲಿ ತರಿಕೆರೆಯಲ್ಲಿ ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸಿ ಜನಪದ ಕಲಾವಿದರಿಗೆ ಪ್ರೋತ್ಸಾಹ ಉತ್ತೇಜನ ನೀಡಿದವರು ದೇಜಗೌ. 'ಜಾನಪದ ಎಂಬ ಅರ್ಧವಾರ್ಷಿಕ ಸಂಚಿಕೆ ಇವರ ನೇತೃತ್ವದಲ್ಲಿ ಹೊರಬರಲು ಕೂಡ ಕಾರಣರಾದರು. ಭಾರತೀಯತ್ವದ ಅಥವಾ ದೇಶಿಯತೆಯ ರಕ್ಷಣೆಗಾಗಿ ಜಾನಪದವನ್ನು ಸಂಪ್ರದಾಯವನ್ನು ಅಂದು ಜೀರ್ಣೋದ್ಧಾರದ ಕಾರ್ಯವನ್ನು ಮಾಡುವುದಕ್ಕೋಸ್ಕರ

ವ್ಯಾಪಕವೂ ಸಕಲ ಶಾಸ್ತ್ರಗಳಿಗೆ ಮಾತೃಪ್ರಾಯವೂ ಆದ ಜಾನಪದ ಶಾಲಾಕಾಲೇಜು-ಗಳಲ್ಲಿ ಅಧ್ಯಯನ ವಿಷಯವಾಗಿ ಶೈಕ್ಷಣಿಕ ವ್ಯವಸ್ಥೆಯಲ್ಲಿ ಒಂದು ಕೊರತೆಯನ್ನು ನೀಗಿಸಿದವರು ದೇಜಗೌ.

ಜಾನಪದ ಅಧ್ಯಯನ ಸಂಶೋಧನೆ, ಸಂಗ್ರಹ ಈ ಕ್ಷೇತ್ರಗಳಲ್ಲಿ ಅಪಾರ ಯಶಸ್ಸು ಗಳಿಸಿ 'ಜೀಶಂಪ' ಅವರ ಪ್ರತಿಭೆ, ಶಕ್ತಿ, ಸಾಮರ್ಥ್ಯಗಳನ್ನು ಗುರುತಿಸಿ ಬೆಳಕಿಗೆ ತಂದವರು ದೇಜಗೌ. ಅಲ್ಲದೇ ಡಾ. ದೇಜಗೌ ಅವರು ಮೈಸೂರು ವಿಶ್ವವಿದ್ಯಾ-ನಿಲಯದಲ್ಲಿ ಕನ್ನಡ ಮತ್ತು ಜಾನಪದ ಪ್ರಾಧ್ಯಾಪಕರಾಗಿ ಸೇವಗೆ ಸಲ್ಲಿಸಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಇವರ ಮಾರ್ಗದರ್ಶನದಲ್ಲಿ ಜಾನಪದ ಪ್ರಾಧ್ಯಾಪಕರಾಗಿದ್ದ ಡಾ. ಜೀ.ಶಂಪ. ಅವರು "ದಕ್ಷಿಣ ಕರ್ನಾಟಕ ಜನಪದ ಕಾವ್ಯ ಸಂಪ್ರದಾಯಗಳು" ಎಂಬ ವಿಷಯವಾಗಿಯೂ, ಡಾ. ಡಿ.ಕೆ ರಾಜೇಂದ್ರ ಅವರು "ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ" ಎಂಬ ವಿಷಯವಾಗಿಯೂ ಡಾ. ತೀ.ನಂ.ಶಂಕರನಾರಾಯಣ ಅವರು 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಎಂಬ ವಿಷಯ-ವಾಗಿಯೂ ಸಂಶೋಧನೆಗಳನ್ನು ನಡೆಸಿ ಪ್ರೌಢ ನಿಬಂಧಗಳನ್ನು ಬರೆದು ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ದೇಜಗೌ ಅವರಿಗೆ ಜಾನಪದವು ಬಹುಜನರ ಬದುಕಿನ ಪ್ರತಿರೂಪವಾಗಿದ್ದು ಶಿಷ್ಟ ಸಾಹಿತ್ಯದ ಜೊತೆಗೆ ಸರಿಸಮಾನವಾಗಿ ನಿಲ್ಲಬೇಕೆಂಬ ಹಂಬಲದಿಂದ ತಮ್ಮ ಕೈಲಾದ ಮಟ್ಟಿಗೆ ಜನಪದ ಸಾಹಿತ್ಯ ಕಟ್ಟಿಬೆಳೆಸಲು ಪ್ರಾರಂಭಿಸಿದರು.

ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಂಗ್ರಹ ಕಾರ್ಯಕ್ಕೆ ಹಲವರು ಹಲವು ಕಡೆಗಳಲ್ಲಿ ಕೈ ಹಚ್ಚಿದ್ದರೆಂಬುದು ನಿಜವಾದರೂ ಆ ಎಲ್ಲರೂ ಜಾನಪದದ ಬಗೆಗಿನ ಪರಿಪೂರ್ಣ ದೃಷ್ಟಿಕೋನಗಳನ್ನು ಹೊಂದಿದವರಾಗದೆ ವೈಜ್ಞಾನಿಕ ಸಂಬಂಧಕ್ಕಿಂತ ಹೆಚ್ಚಾಗಿ ಭಾವನಾತ್ಮಕ ಸಂಬಂಧವನ್ನು ಹೊಂದಿದವರಾಗಿದ್ದರು. ಜನಪದ ಸಾಹಿತ್ಯ ಎಂದಾಕ್ಷಣ ನಿಜವಾದ ಅರ್ಥದಲ್ಲಿ ಜಾನಪದ ಬೆಳಕು ಕಂಡಿರಲಿಲ್ಲ. ಈ ದಿಸೆಯಲ್ಲಿ ಅದರ ವೈಜ್ಞಾನಿಕ ಬೆಳವಣಿಗೆಗೆ ಸಂವರ್ಧನೆಗೆ ಬುನಾದಿ ಹಾಕಿದವರು ದೇಜಗೌ. ೧೯೬೭ರಲ್ಲಿ ಜೀಶಂಪ ಅವರ "ಜಾನಪದ ಸಾಹಿತ್ಯ ಸಮೀಕ್ಷೆ" ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ "ಜಾನಪದ ಸಂಪ್ರದಾಯದ ಕುಟುಂಬ ಬಹಳ ದೊಡ್ಡದು. ಅಷ್ಟೇ ವ್ಯಾಪಕವಾದುದು. ಅದರ ಬೇರುಗಳ ಪ್ರಾಚೀನತೆಯ ಗರ್ಭಾಂತರಾಳದಲ್ಲಿ ಹುದುಗಿ-ಕೊಂಡಿರುವಂತೆಯೇ ಅದರ ಕೊಂಬೆಗಳು ಸಂಕೀರ್ಣ ಸ್ವರೂಪದ ಆಧುನಿಕತೆಯಲ್ಲಿ ಲಯವಾಗಿದೆ. ಅದು ಪ್ರವೇಶಿಸಿದ ಜೀವನ ವ್ಯಾಪಾರವಲ್ಲ. ಗೀತೆ, ಕಥೆ, ಲಾವಣಿ, ಯಕ್ಷಗಾನ, ಒಗಟು, ಗಾದೆ, ಮಂತ್ರ, ತಂತ್ರ, ಚಿತ್ರ, ಶಿಲ್ಪ, ವೈದ್ಯ, ಕೃಷಿ ನಂಬಿಕೆ ಹಬ್ಬ

ಹರಿದಿನಗಳು ಇವೆಲ್ಲ ಆ ಸಂಪ್ರದಾಯದ ಶಾಖೋಪಶಾಖೆಗಳು ಎಂದು ಹೇಳುವ ಈ ಮಾತುಗಳು ಅವರ ಆಳವಾದ ವಿದ್ವತ್ತನ್ನು ಜಾನಪದದ ಬಗ್ಗೆ ಇರುವ ವಿಶಾಲಪೂರ್ಣ ದೃಷ್ಟಿಯನ್ನು ಮನವರಿಕೆ ಮಾಡಿಕೊಡುತ್ತದೆ" ಎಂದಿದ್ದಾರೆ.

ದೇಜಗೌ ಅವರ ಜಾನಪದ ಸಾಧನೆಗಳನ್ನು ಡಾ.ಚಕ್ಕರೆ ಶಿವಶಂಕರ ಅವರು ಒಟ್ಟು ಮೂರು ಹಂತಗಳಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆ ಮೂರು ಹಂತಗಳೆಂದರೆ

೧) ಜಾನಪದ ಸಂರಕ್ಷಣೆ

೨) ಜಾನಪದ ಬೆಳವಣಿಗೆ

೩) ಜಾನಪದ ಸಾಹಿತ್ಯಿಕ ಸಾಧನೆಗಳು ಎಂಬಂಥ ವಿಭಾಗ ಕ್ರಮಗಳಾಗಿವೆ.

ಮಹಾಕವಿ ಕುವೆಂಪು ಅವರ ಅಂತರಂಗದ ಶಿಷ್ಯರೂ ಆಗಿರುವ ಪ್ರೊ. ದೇಜಗೌ ಕನ್ನಡಕ್ಕೆ ಒಂದು ರೀತಿಯಲ್ಲಿ ಮೌನಕ್ರಾಂತಿಯನ್ನು ಮಾಡಿದವರು. ಕನ್ನಡ ಭಾಷೆ, ಕನ್ನಡ ಸಂಸ್ಕೃತಿ ಜಾನಪದವನ್ನು ಬಿಟ್ಟು ಇರಲು ಸಾಧ್ಯವಿಲ್ಲ. ಭಾಷೆ, ಸಂಸ್ಕೃತಿ ಉಳಿದು ಬೆಳೆಯಬೇಕಾದರೆ ಜನರ ಜಾನಪದವನ್ನು ಉಳಿಸಿಕೊಂಡು ಮುಂದಿನ ಪೀಳಿಗೆಗೂ ಉಳಿಸಬೇಕು. ಈ ನಿಟ್ಟಿನಲ್ಲಿ ಸಂಗ್ರಹಕಾರ್ಯ ಒಂದೆಡೆ-ಯಾದರೆ ಅಧ್ಯಯನದ ಶಿಸ್ತಾಗಿ ಅಳವಡಿಸಿಕೊಂಡು ಬೆಳೆಸುವುದು ಇನ್ನೊಂದು ಬಗೆ. ದೇಜಗೌ ಎರಡೂ ನೆಲೆಯಲ್ಲೂ ಕೆಲಸ ಮಾಡಿದ್ದಾರೆ. ತಮ್ಮ ಅಧಿಕಾರಾವಧಿಯಲ್ಲಿ ಹಿಡಿತಕ್ಕೆ ಸಿಗದ ಜಾನಪದವನ್ನು 'ಅಧ್ಯಯನ-ಸಂಶೋಧನೆಯ ವ್ಯಾಪ್ತಿಗೆ ತರುವುದರ ಮೂಲಕ ಚಿರಂತನೆ ಹಾಗೂ ಚಿರದೂತನತ್ವವನ್ನು ಕೊಟ್ಟರೆನ್ನಬಹುದು.

ಜಾನಪದವೂ ಒಂದು ಅಧ್ಯಯನ ಯೋಗ್ಯ ವಿಷಯವೆನ್ನುವುದನ್ನು ಮನದಟ್ಟು ಮಾಡಿಕೊಟ್ಟರು. ಅದಕ್ಕಾಗಿ ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳನ್ನು ಸೃಷ್ಟಿಮಾಡಿದರು. ಅಧ್ಯಯನದ ಜೊತೆಗೆ ಅದಕ್ಕೆ ಸಂಗ್ರಹಾಲಯವೂ ಇರಬೇಕೆಂದು ವಿಶ್ವವಿದ್ಯಾನಿಲಯ ಆವರಣದಲ್ಲೇ ಅದನ್ನು ಕಾರ್ಯರೂಪಕ್ಕೆ ತಂದರು.

ಅಧ್ಯಾಯ – ೪

ಜಾನಪದ ಸಾಹಿತ್ಯ

ಜಾನಪದ ಸಾಹಿತ್ಯ ವಿಶ್ವವ್ಯಾಪಿಯಾಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ-ಕೊಂಡಿದೆ. ಜನಸಾಮಾನ್ಯರು ತಮ್ಮ ನೋವು ನಲಿವುಗಳನ್ನು ಪದಗಳ ಮೂಲಕ ಅಭಿವ್ಯಕ್ತಿಸಿ ಹಾಡಿನ ರೂಪುಕೊಟ್ಟಿರಬೇಕು, ಕಾಲದಿಂದ ಕಾಲಕ್ಕೆ ಮೌಖಿಕ ರೂಪವಾಗಿ ಸಂಚರಿಸುತ್ತಿದ್ದ ಜನಪದ ಸಾಹಿತ್ಯ ಯಾವುದೋ ಒಂದು ನಿರ್ಧಿಷ್ಟ ಕಾಲದಲ್ಲಿ ಲಿಖಿತರೂಪಕ್ಕೆ ಒಳಗಾಗಿ ಇಂದು ನಮ್ಮ ಮುಂದೆ ಬೃಹತ್ತಾಗಿ, ಸಾಗರೋಪಾದಿಯಲ್ಲಿ ಹರಡಿದೆ. ಇಂದಿನ ಶಿಷ್ಟ ಸಾಹಿತ್ಯಕ್ಕೆ ತಾಯಿ ಬೇರು ಜಾನಪದವೇ ಎಂದರೂ ತಪ್ಪಾಗದು. ಜನಪದ ಸಾಹಿತ್ಯ ಗೀತೆ, ಕಥೆ, ಕಥನಕವನ, ಗಾದೆ, ಒಗಟು, ಲಾವಣಿ, ಮಹಾಕಾವ್ಯ..... ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಜೀವಂತಿಕೆಯನ್ನು ಪಡೆದಿದೆ.

ಜಾನಪದ ಹಾಗೂ ದೇಜಗೌರವರ ನಡುವಿನ ಸಂಬಂಧ ಅವಿನಾಭಾವದಿಂದ ಕೂಡಿರುವಂಥದ್ದು. ಹುಟ್ಟು ಜಾನಪದರಾದ ಪ್ರೊ.ದೇಜಗೌ ಅವರು ಜಾನಪದ ಕ್ಷೇತ್ರದ ಅಭಿವೃದ್ಧಿ ಕುರಿತು ಮಾಡಿದ ಯೋಜನೆಗಳು ಹಲವು; ಅವರು ಕಂಡ ಕನಸುಗಳು ಅನೇಕವು. ಅವರು ಮೊದಲೇ ಮನಸ್ಸು ಮಾಡಿ ಕನ್ನಡ ಜಾನಪದ ಕ್ಷೇತ್ರ ಬೇಸಾಯಕ್ಕೆ ತೊಡಗಿದ್ದಿದ್ದರೆ ಖಂಡಿತವಾಗಿಯೂ ಹೊನ್ನಬೆಳಕು ಬೆಳೆದು ಹೊಸ ಸುಗ್ಗಿಯುಂಟು ಮಾಡುತ್ತಿದ್ದರು. ಎಂದು ಡಾ.ನಂ.ತಪಸ್ವಿಕುಮಾರ್ ಅವರು ಅಭಿಪ್ರಾಯಪಟ್ಟಿದ್ದಾರೆ.

ವಾಸ್ತವವಾಗಿ ಕನ್ನಡ ಜನಪದ ಸಾಹಿತ್ಯದ ಅಭ್ಯಾಸಿಗಳಿಗೆ ಜಾನಪದಾಧ್ಯಯನ-ವನ್ನು ತಲಸ್ಪರ್ಶಿಯಾಗಿ ಮಾಡುವ ಅಗತ್ಯವಿದೆ; ಅದು ಆ ಕ್ಷೇತ್ರದ ಮೂಲನೆಲೆ-ಗಳನ್ನೆಲ್ಲವನ್ನೂ ಒಳಗೊಂಡಂತೆ ಸಮಗ್ರವಾಗಿ ಆಗಬೇಕು ಎಂದು ಪ್ರಥಮಬಾರಿಗೆ ಅರಿತುಕೊಂಡು ಆ ನಿಟ್ಟಿನಲ್ಲಿ ಕರ್ನಾಟಕದಲ್ಲಿ ವೈಜ್ಞಾನಿಕ ಅಧ್ಯಯನಕ್ಕೆ ತಳಹದಿ ಹಾಕಿದವರೇ ದೇಜಗೌ. ಅವರ ಜನಪದ ಸಾಹಿತ್ಯಿಕ ಸಾಧನೆಗಳ ಬಗೆಗೆ ನಾವು ಗುರುತಿಸುವಾಗ ಅವರ ಜಾನಪದ ಸಾಹಿತ್ಯ ಕೃತಿಗಳ ಬಗೆಗೆ ನಮ್ಮ ಗಮನ ಹರಿಸಬೇಕಾಗಿದೆ. ದೇಜಗೌ ಅವರ ಆಳವಾದ ವಿದ್ವತ್ತಿಗೆ ವೈಜ್ಞಾನಿಕ ದೃಷ್ಟಿಗೆ ವೈಚಾರಿಕ ನೋಟಕ್ಕೆ ಕನ್ನಡಿ ಹಿಡಿದಂತಿದೆ. ಅವರ ಒಟ್ಟು ಜನಪದ ಸಾಹಿತ್ಯ ಸಾಧನೆಗಳೆಂದರೆ

೧) ಜಾನಪದ ಅಧ್ಯಯನ

೨) ಜಾನಪದ ವಾಹಿನಿ

೩) ಜನಪದ ಸೌಂದರ್ಯ

೪) ಜಾನಪದ ವಿಚಾರಧಾರೆ

೫) ಜನಪದ ಗೀತಾಂಜಲಿ

೬) ಭಾರತದ ಜನಪದ ಕಥೆಗಳು

೭) ಮುನ್ನುಡಿಗಳು

೧. ಜಾನಪದ ಅಧ್ಯಯನ:

ದೇಜಗೌ ಅವರು ೧೯೭೬ರಲ್ಲಿ ಬರೆದ 'ಜಾನಪದ ಅಧ್ಯಯನ' ಪುಸ್ತಕ ಮಹತ್ತರವಾದುದಾಗಿದೆ. ಇಂಗ್ಲಿಷಿನಲ್ಲಿನ ಎ.ಎಚ್.ಕ್ರಾಪೆಯವರ 'The science of Folklore' ಗ್ರಂಥಕ್ಕೆ ಸರಿಸಮಾನವಾಗಿ ನಿಲ್ಲುವ ಗ್ರಂಥ ಇದಾಗಿದೆ. ಒಂದರ್ಥದಲ್ಲಿ ಈ ಗ್ರಂಥ ಕನ್ನಡದ Standard Dictionary of Folklore ಎಂದು ಹೇಳಿದರೂ ಅತಿಶಯೋಕ್ತಿಯೇನಲ್ಲ[೧] ಎಂದು ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕದಲ್ಲಿ ಜಾನಪದ ಗಂಭೀರ ಸಂಶೋಧನೆಯ ಶಿಸ್ತಾಗಿ ಸ್ನಾತಕೋತ್ತರ ತರಗತಿಗಳ ಉನ್ನತ ಅಧ್ಯಯನ ವಸ್ತುವಾಗಿ ನೆಲೆಗೊಂಡದ್ದು, ದೇಜಗೌ ಅವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಮಹಾಪರ್ವಕಾಲದಲ್ಲಿ ಜನಪದ ಸಾಹಿತ್ಯ ಮತ್ತು ಅದರ ಇತರ ಪ್ರಕಾರಗಳು ಗ್ರಾಮೀಣ ಸಂಸ್ಕೃತಿಯ ನೆಲೆಯಿಂದ ಜನ್ಮತಾಳಿದ ಸಾಮಾನ್ಯ ಜನವರ್ಗದ ಸೃಷ್ಟಿಯಾಗಿರುವುದರಿಂದ ಅದು ಕೇವಲ ವಿರಾಮ ಕಾಲದ ಹಾಡಿಕೆಗೆ ಮತ್ತು ಕೇಳಿಕೆಗೆ ಮಾತ್ರ ಅರ್ಹವಾದದ್ದೇ ಹೊರತು ಸಾಹಿತ್ಯ ವಿಮರ್ಶೆಯ ಮತ್ತು ಜ್ಞಾನದ ವಿವಿಧ ಶಿಸ್ತುಗಳ ಮೂಲಕ ಸೂಕ್ಷ್ಮವಾಗಿ ಮತ್ತು ವ್ಯಾಪಕವಾಗಿ ಅಧ್ಯಯನ ಮಾಡಬಹುದಾದ ವಿಷಯಗಳಲ್ಲಿವೆ ಎಂಬ ಕಾಲದಲ್ಲಿ ಇದನ್ನು ವಿಶ್ವವಿದ್ಯಾನಿಲಯದ ಎತ್ತರಕ್ಕೆ ಏರಿಸಿದ ಕೀರ್ತಿಯೂ ಕೂಡ ಇವರದೆ.

ಜಾನಪದವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಮತ್ತು ಅದರ ವಿಶ್ವವ್ಯಾಪಕತೆಯನ್ನು ಮನ್ನಣೆ ಮಾಡಲು ಕನ್ನಡದಲ್ಲಿ ಆಕರ ಗ್ರಂಥಗಳಾವುವು ಇಲ್ಲದಿದ್ದ ಸಮಯದಲ್ಲಿ ಜನಪದದ ಅನಂತ ವಿಸ್ತಾರವನ್ನು ಸಮೃದ್ಧಿಯನ್ನೂ ಅನಾವರಣ-ಗೊಳಿಸುವ ಪ್ರಪ್ರಥಮವಾಗಿ ಮತ್ತು ಮೌಲಿಕ ಆಧಾರ ಗ್ರಂಥವೊಂದನ್ನು ತಮ್ಮ ವಿಸ್ತಾರ ವ್ಯಾಸಂಗ ಮತ್ತು ವಿದ್ವತ್ತಿನ ಮೂಲಕ ಕನ್ನಡ ಲೋಕಕ್ಕೆ ನೀಡಿದ ಹಿರಿಮೆ ದೇಜಗೌ ಅವರದಾಗಿದೆ. ಈ ಅನನ್ಯ ಮಹತ್ವದ ಗ್ರಂಥವೇ ಈ ಜಾನಪದ ಅಧ್ಯಯನ ಪುಸ್ತಕ-

೧. ಅನಿಕೇತನದಲ್ಲೊಂದು ವಿಶ್ವಚೇತನ ಲೇಖನ: ಡಾ. ಟಿ.ಕೆ. ಕೆಂಪೇಗೌಡ, ಪು. ೧೦೧

ವಾಗಿದೆ. ಇಂದು ಕೂಡ ಈ ತರಹದ ಜಾನಪದ ವಿಸ್ತಾರ ಮತ್ತು ವೈವಿಧ್ಯಗಳನ್ನು ತಿಳಿಸಿಕೊಡುವ ಇಂತಹ ಆಕರಗ್ರಂಥ ಮತ್ತೊಂದು ಬಂದಿಲ್ಲವೆಂದರೆ ಗ್ರಂಥದ ಮೌಲಿಕತೆ ಮತ್ತು ಬಹುಶ್ರುತತೆ ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಇದು ನಮ್ಮ ಭಾಷೆ ಸಾಹಿತ್ಯ ಸಂಸ್ಕೃತಿಗೆ ಹಿಡಿದ ಮಹತ್ವದ ಪುಸ್ತಕವಾಗಿದೆ.

ಈ ಮಹತ್ವದ ಕೃತಿಯಲ್ಲಿ ಹದಿಮೂರು ವಿಭಾಗಗಳಿವೆ. ಜನಪದಗೀತೆ, ಜನಪದಕಥೆ, ಜನಪದ ಕಥನಕಾವ್ಯ, ಐತಿಹ್ಯ, ಪುರಾಣಗಳು, ಕುಣಿತ ಮತ್ತು ಬಯಲಾಟ, ಗಾದೆಗಳು, ಒಗಟುಗಳು, ಮಾಟ–ಮಂತ್ರ, ನಂಬಿಕೆಗಳು, ಸಂಪ್ರದಾಯಗಳು ಮತ್ತು ಹಬ್ಬಗಳು, ಸಸ್ಯಜಾನಪದ, ಪ್ರಾಣಿಜಾನಪದ, ಪರಿಸರ ಜಾನಪದ ಇವೆಲ್ಲವೂ ಹೊಸದನ್ನು ಹೇಳುವ ಹೆಚ್ಚು ಆಸಕ್ತಿ ಪೂರ್ಣವಾದವುಗಳಾಗಿವೆ. ಈ ಕೃತಿ ಒಟ್ಟಾರೆ ಜಾನಪದದ ಒಂದು ಸಮಗ್ರ ಚಿತ್ರವನ್ನು ಓದುಗರಿಗೆ ತಂದು ಕೊಡುತ್ತದೆ. ಈ ಗ್ರಂಥ ೪೧೧ ಪುಟಗಳ ವ್ಯಾಪ್ತಿಯನ್ನು ಹೊಂದಿದೆ.

ಈ ಪುಸ್ತಕಕ್ಕೆ ದೇಜಗೌ ಅವರು ಒಂದು ಉಪಯುಕ್ತವಾದ ಪೀಠಿಕೆಯನ್ನು ಬರೆದು ಜಾನಪದ ಮತ್ತು ಶಿಷ್ಟ ಪದದ ವ್ಯತ್ಯಾಸ, ಜಾನಪದದ ಮಹತ್ವ, ಜಾನಪದ ಮತ್ತು ಇತರ ವಿಜ್ಞಾನಗಳಿಗಿರುವ ಸಂಬಂಧ ಜಾನಪದ ಕ್ಷೇತ್ರದಲ್ಲಿ ಮುಂದೆ ನಡೆಯಬೇಕಾಗಿರುವ ಕಾರ್ಯಗಳು – ಹೀಗೆ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿದ್ದಾರೆ. ಮುಂದಿನ ಅಧ್ಯಾಯಗಳಲ್ಲಿ ಆ ಕ್ಷೇತ್ರದಲ್ಲಿ ಈವರೆಗೆ ನಡೆದಿರುವ ಅಧ್ಯಯನ ಕಾರ್ಯ ಅವುಗಳ ವಿಭಜನ ಕ್ರಮ, ಹೀಗೆ ಹಲವಾರು ಉಪಯುಕ್ತ ವಿವರಗಳನ್ನು ಕೊಟ್ಟಿದ್ದಾರೆ. ಉದಾಹರಣೆಗಳನ್ನು ಕೊಡುವಾಗ ಪಾಶ್ಚಾತ್ಯ ಜಾನಪದರ ಸಹಾಯ ಪಡೆಯುವುದು ಮಾತ್ರವಲ್ಲದೆ ಭಾರತದ ಹಾಗೂ ಕರ್ನಾಟಕದ ಜಾನಪದದ ಸಹಾಯವನ್ನು ಪಡೆದುಕೊಂಡಿರುವುದನ್ನು ಕಾಣಬಹುದು. ಈ ಗ್ರಂಥದ ಮತ್ತೊಂದು ಮುಖ್ಯ ಲಕ್ಷಣವೆಂದರೆ ಕನ್ನಡ ಜಾನಪದದಿಂದ ಹೆಚ್ಚು ಉದಾಹರಣೆಗಳನ್ನು ಕೊಟ್ಟು ತತ್ವಗಳನ್ನು ಪ್ರತಿಪಾದಿಸಿರುವುದು.

ಜಾನಪದ ಅಧ್ಯಯನದ 'ಪ್ರವೇಶ'ದಲ್ಲಿ ಜನಪದ ಸಾಹಿತ್ಯದ ಸ್ಥಾನಮಾನಗಳ ಬಗೆಗೆ ದೇಜಗೌ ವಿವರಿಸಿದ್ದಾರೆ. ಅವರೇ ಹೇಳುವ ಹಾಗೆ "ಪ್ರಾಯಶಃ ಜಾನಪದದಷ್ಟು ವಿಶಾಲವೂ, ವ್ಯಾಪಕವೂ, ಸರ್ವಾತ್ಮಕವೂ ಆದ ಮತ್ತೊಂದು ಪದವಿಲ್ಲವೆಂದು ತೋರುತ್ತದೆ. ಹರಿಯ ಬಸುರಲ್ಲಿ ಬ್ರಹ್ಮಾಂಡವಡಗಿರುವಂತೆ ಜಾನಪದ ಕುಕ್ಷಿಯಲ್ಲಿ ಜಗತ್ತೆಲ್ಲ ಹುದುಗಿದೆ. ಪ್ರಾಚೀನ ಅರ್ವಾಚೀನಗಳೆರಡೂ ಅದರಲ್ಲೂ ಸಂಧಿಸಿ ಪರಸ್ಪರ ಕೈ ಕುಲುಕುತ್ತದೆ. ಅದಕ್ಕೆ ಆದಿ ಅಂತ್ಯಗಳಿಲ್ಲ. ಅದರ ಅವಶೇಷಗಳಿಗೆ ಸಾವಿಲ್ಲ. ಆಧುನಿಕ

ಮಾನವನಲ್ಲಿ ಆದಿಮಾನವತನ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುವಂತೆ ಬೀಜದಲ್ಲಿ ವೃಕ್ಷವಡಗಿರುವಂತೆ ಆಧುನಿಕ ಕಲೆ, ವಿಜ್ಞಾನ ಹಾಗೂ ತಾಂತ್ರಿಕ ವಿಜ್ಞಾನಗಳಲ್ಲಿ ಜಾನಪದ ಚೈತನ್ಯ ಸುಪ್ತವಾಗಿರುತ್ತದೆ. ಒಮ್ಮೊಮ್ಮೆ ಲಾವಾರಸದಂತೆ ಹೊರಸಿಡಿಯುವುದೂ ಉಂಟು.

ಅದು ಆದಿಮಾನವನ ಅಥವಾ ಅನಾಗರಿಕ ಮಾನವನ ಸೃಷ್ಟಿಯೆಂಬ ಕಾರಣದಿಂದ ದೂಷ್ಯವಲ್ಲ. ಆಧುನಿಕ ಮಾನವನ ಮೂಲ ಪುರುಷನನ್ನು ಹಿಂದು ಹಿಂದಕ್ಕೆ ಹುಡುಕಿಕೊಂಡು ಹೋದದ್ದಾದರೆ ಕೊನೆಗೆ ದೃಷ್ಟಿ ಗೋಚರವಾಗುವವನು ಆದಿಮಾನವ. ಅಂತೆಯೇ ವೈಜ್ಞಾನಿಕ ನಾಗರಿಕತೆಯ ಹಾಗೂ ಅರ್ವಾಚೀನ ಕಲೆಗಳ ತಾಯಿಬೇರುಗಳನ್ನು ಪ್ರಾಚೀನ ಜಾನಪದದಲ್ಲಿ ಗುರುತಿಸಬಹುದು. ಮುತ್ತಜ್ಜನೆಂತು ಮುಮ್ಮಗನಿಗೆ ಪೂಜ್ಯನೋ ಅಂತೆಯೇ ಶಿಷ್ಟ ಪದಕ್ಕೆ ಜಾನಪದ ಆರಾಧ್ಯವಾಗುತ್ತದೆ. ಇಂದು ಮಾನವ ಜೀವನವನ್ನು ನಡೆಸುತ್ತಿರುವ ಚೈತನ್ಯವೇ ಅಂದು ನಡೆಯಿಸುತ್ತಿತ್ತು. ಜೀರ್ಣಗೊಂಡ ವೃಕ್ಷ ಮಣ್ಣು ಪಾಲಾದರೂ ಹೂವು ಧೂಳಿನಲ್ಲಿ ಧೂಳಾದರೂ ಅದರ ಬೀಜದಿಂದಲೇ ಮುಂದಿನ ಪೀಳಿಗೆ ಅಭಿವೃದ್ಧಿ ಹೊಂದಬೇಕಾಗಿದೆ. ಆದ್ದರಿಂದ ಜಾನಪದ ಶಿಷ್ಟ ಪದಗಳಿಗೆರಡಕ್ಕೂ ಸಮಾನ ಸ್ಥಾನಮಾನಗಳು ಸಲ್ಲಬೇಕಾಗುತ್ತದೆ.

ಹಳೆಯ ಬಿತ್ತನೆಗಳನ್ನು ನಾನಾ ಸಂಸ್ಕಾರಗಳಿಗೊಡ್ಡಿ ಹೊಸತಳಿಗೆಗಳನ್ನು ಸೃಷ್ಟಿಸಿ-ಕೊಳ್ಳುವಂತೆ ಜಾನಪದ ಸಂಸ್ಕಾರಗೊಂಡು ಶಿಷ್ಟಪದವಾಗುತ್ತದೆ. ಸಂಸ್ಕಾರವಶಾತ್ ಅವೆರಡೂ ಭಿನ್ನವಾಗುತ್ತದೆ. ಜಾನಪದ ಕಲೆಯಿಂದ ಪಿಕಾಸೋ ಅಂಥವರು, ಜಾನಪದ ಕಥೆಗಳಿಂದ ಪುಷ್ಕಿನ್ ಅಂಥವರು ಸ್ಫೂರ್ತಿ ಪಡೆಯುವುದಲ್ಲದೆ ಅವುಗಳಿಗೆ ಹೊಸ ರೂಪ ಕಲ್ಪಿಸಬಹುದು.

ಜಾನಪದ ಅಭಿವ್ಯಕ್ತಿಗೊಳ್ಳುವ ಎರಡು ಮುಖ್ಯ ಮಾಧ್ಯಮಗಳೆಂದರೆ ಮಾತು ಮತ್ತು ಕೃತಿ. ಪುರಾಣ ಐತಿಹ್ಯ ಕಥೆ, ಗೀತೆ, ಗಾದೆ, ಒಗಟು ಮೊದಲಾದ ಶಾಬ್ದಿಕ ಪ್ರಕಾರಗಳಿಗೆ ಮಾತು ಮಾಧ್ಯಮವಾದರೆ ನಂಬಿಕೆ ಸಂಪ್ರದಾಯ ಉಪಾಸನೆಗಳಿಗೆ ಶಿಲ್ಪ ವಾಸ್ತು ಶಿಲ್ಪ ಚಿತ್ರ ನರ್ತನ ಆಟಪಾಠ ಮೊದಲಾದ ಕೃತಿಗಳು ಮಾಧ್ಯಮವಾಗುತ್ತವೆ. ಕಂಬಳ, ಕೋಳಿಯಂಕ ಬೇಟೆ, ಹುತ್ತರಿ ಕುಣಿತ ಮೊದಲಾದವು ಮನರಂಜನೆಯ ಹವ್ಯಾಸಗಳಾಗಿ ವಿಕಾಸಗೊಳ್ಳುತ್ತವೆ. ಇಂಥವು ಅಸಂಖ್ಯಾ. ಜಾನಪದ ವಲಯದೊಳಗೆ ಸೇರದ ಜಾಗತಿಕ ಸಂಗತಿಗಳೇ ಇಲ್ಲವೆನ್ನಬಹುದು. ಈ ಎಲ್ಲ ಸಂಗತಿಗಳ ಮೊತ್ತವನ್ನು ಜಾನಪದ ಸಂಸ್ಕೃತಿಯೆಂದು ಕರೆಯುತ್ತೇವೆ.

ಇಷ್ಟು ವ್ಯಾಪಕವೂ, ಸಕಲಶಾಸ್ತ್ರ, ವಿದ್ಯೆಗಳಿಗೆ ಮಾತೃಪ್ರಾಯವೂ ಆದ ಜಾನಪದ ಇತ್ತೀಚಿನ ತನಕ ಶಾಲಾ ಕಾಲೇಜುಗಳಲ್ಲಿ ಅಧ್ಯಯನ ವಿಷಯವಾಗದಿದ್ದುದು ಶೈಕ್ಷಣಿಕ ವ್ಯವಸ್ಥೆಯಲ್ಲೊಂದು ಕೊರತೆಯೆಂದೇ ಹೇಳಬೇಕು.

ಜಾನಪದ ಸಂಗ್ರಹವೆಂದರೆ ಬರಿಯ ಸಾಹಿತ್ಯ ಸಂಗ್ರಹವಲ್ಲ; ಜಾನಪದ ಸಂಸ್ಕೃತಿಗೆ ಸಂಬಂಧಿಸಿದ ಸಕಲ ಸಾಮಗ್ರಿಗಳ ಸಂಗ್ರಹ. ಈ ದೃಷ್ಟಿಯಿಂದ ಭಾರತದಲ್ಲಿ ನೂರರಲ್ಲೊಂದು ಭಾಗವಷ್ಟಾದರೂ ಕೆಲಸವಾಗಿಲ್ಲವೆಂದು ಹೇಳಬಹುದು. ಮೀನುಗಾರರ, ಬೇಟೆಗಾರರ, ಇಂತೆಯೇ ವಿವಿಧ ವೃತ್ತಿ ಜೀವಿಗಳ ವೃತ್ತಿ ವಿಧಾನಗಳನ್ನಾಗಲೀ ಅವರ ಉಪಕರಣಗಳನ್ನಾಗಲೀ ಸಂಗ್ರಹಿಸಿದಂತೆ ಕಾಣುವುದಿಲ್ಲ ಎಂದು ದೇಜಗೌ ಅವರು ಅಭಿಪ್ರಾಯಪಟ್ಟಿದ್ದಾರೆ.

ಹೀಗೆ ಸರ್ವವ್ಯಾಪಕ ಕ್ಷೇತ್ರವಾಗಿರುವ ಜಾನಪದ ಜಗತ್ತಿನ ಪೂರ್ಣ ಪರಿಚಯವನ್ನು ಆಸಕ್ತರಿಗೆ ಮಾಡಿಕೊಡುವ ಉತ್ತಮ ಪ್ರಯತ್ನಗಳು ನಮ್ಮ ದೇಶದಲ್ಲಿ ಸರಿಯಾಗಿ ನಡೆದಿಲ್ಲದಿರುವುದರ ಬಗೆಗೆ ದೇಜಗೌ ವಿದ್ವಾಂಸರ ಗಮನ ಸೆಳೆದಿದ್ದಾರೆ. "ಕನ್ನಡ ಸಂಸ್ಕೃತಿಯ ಸ್ವರೂಪವನ್ನು ಅದರ ಹಿರಿಮೆಯನ್ನು ಅದರ ಆಳ ಹರಹುಗಳನ್ನೂ ಅರಿಯುವ ಕುತೂಹಲದಿಂದ ನನ್ನ ಗಮನ ಜಾನಪದದ ಕಡೆಗೆ ಹರಿಯಿತು. ನನಗೆ ನಿಜವಾದ ಭಾರತೀಯ ಸಂಸ್ಕೃತಿಯ ದರ್ಶನವಾದದ್ದೂ ಜಾನಪದದ ಮೂಲಕವಾಗಿಯೇ ಆದರೂ ಜಾನಪದದ ಸಮಗ್ರ ಚಿತ್ರವನ್ನು ಪರಿಚಯ ಮಾಡಿಕೊಡುವ ಗ್ರಂಥ ನನ್ನ ಕಣ್ಣಿಗೆ ಬಿದ್ದಿಲ್ಲ. ಎ.ಎಚ್. ಕ್ರಾಪೆಯವರ 'The Science of Folklore' ಎಂಬ ಗ್ರಂಥವನ್ನು ನೋಡಿದ ಮೇಲಂತೂ ಅಂಥದೊಂದು ಗ್ರಂಥವನ್ನು ರಚಿಸಬೇಕೆಂಬ ಆಸೆ ಹತ್ತುವರ್ಷಗಳ ಹಿಂದೆಯೇ ನನ್ನ ಮನಸ್ಸನ್ನಾವರಿಸಿಕೊಂಡಿತು. ಈ ನನ್ನ ಗ್ರಂಥ ದೋಷ ದೂರವಾದುದ್ದೆಂದು ಸರ್ವಸಮರ್ಪಕವೆಂದು ನಾನು ಹೇಳಲಾರೆ. ನನ್ನ ಹಿರಿಯಾಸೆಯೊಂದು ಕೈಗೂಡಿತೆಂಬ ಮುಂದಿನ ತೆರನ ಮತ್ತು ಇನ್ನೂ ಉತ್ತಮ ಗ್ರಂಥಗಳಿಗೆ ಇದು ನಾಂದಿಯಾದೀತೆಂಬ ತೃಪ್ತಿ ಮಾತ್ರ ನನಗಿದೆ. ಈ ಗ್ರಂಥ ಹಲವು ವಿದ್ವತ್ಕೃತಿಗಳಿಗೆ ಋಣಿಯಾಗಿದೆ ಎಂಬ ವಿಷಯವನ್ನೂ ನಾನು ಮರೆಯಲಾರೆ"[೧] ಎಂದಿರುವಲ್ಲಿ ಈ ಗ್ರಂಥದ ಸ್ವರೂಪ, ಉದ್ದೇಶ ಹಾಗು ವಿಷಯದ ಪರಿಕಲ್ಪನೆ ಏನೆಂಬುದು ಸ್ಪಷ್ಟವಾಗಿ ಸೂಚಿತವಾಗಿದೆ.

ಮೊದಲನೆಯ ಅಧ್ಯಾಯ 'ಜನಪದಗೀತೆ' ಎಂಬುದರಲ್ಲಿ ಪ್ರಾಚೀನ ಕಾಲದ ಮಾನವ ಸಮಾಜದಲ್ಲಿ ಬಳಕೆಯಲ್ಲಿದ್ದುದು ಜನಪದ ಸಾಹಿತ್ಯವೊಂದೇ. ಆಗಿನ ಯುಗಗಳಲ್ಲಿ ಈಗಿನಂತೆ ಸಮಾಜದಲ್ಲಿ ಹಾಗೂ ಸಾಹಿತ್ಯದಲ್ಲಿ ನಾಗರಿಕವಾದ ಶಿಷ್ಟ ಹಾಗೂ ಗ್ರಾಮೀಣ ಮೂಲದ ಜನಪದವೆಂಬ ಭೇದ ಕಂಡುಬರುತ್ತಿರಲಿಲ್ಲ. ಶಿಷ್ಟ

---

೧. ಜಾನಪದ ಮಹಾಸಂಪುಟ, ಲೇ. ದೇಜಗೌ, ಪು. ೧೮-೧೯

ಸಾಹಿತ್ಯವೆಂಬುದು ಜನಪದ ಸಾಹಿತ್ಯವನ್ನು ಪರಿಷ್ಕರಿಸಿಕೊಂಡುದರ ಫಲ. ಇವೆರಡೂ ಬಗೆಯ ಸಾಹಿತ್ಯ ರೂಪಗಳೂ "ಸಮಾನಾಂತರವಾಗಿ ಪರಸ್ಪರಾಶ್ರಯಾತ್ಮಕವಾಗಿ ಪರಸ್ಪರ ಪೂರಕವಾಗಿ ಬಹುಕಾಲ ಮುಂದುವರಿದ್ದುಂಟು. ಬರಬರುತ್ತ ಶಿಷ್ಟ ಸಾಹಿತ್ಯ ನಿರ್ಮಾಪಕರಾದ ಪಂಡಿತರು ಮತ್ತು ಅವರ ಹಿಂಬಾಲಕರು ಅಹಂಕಾರ ಪ್ರತಿಷ್ಠೆಗಳಿಗೆ ಬಲಿಯಾಗಿ ಜನಪದ ಸಾಹಿತ್ಯವನ್ನು ಮರೆತರು.... ಅಸ್ಪೃಶ್ಯವೆಂದು ತೆಗಳಿದರು." ಎಂಬುದಾಗಿ ಈ ಸಾಹಿತ್ಯ ಪ್ರಬೇಧಗಳಲ್ಲಾದ ವ್ಯತ್ಯಾಸಗಳ ಬಗೆಗಿನ ಅವುಗಳ ಧೋರಣೆಯ ಬಗೆಗೂ ದೇಜಗೌ ಪರಿಚಯ ಒದಗಿಸಿದ್ದಾರೆ.

ವಿಶ್ವದ ಅನೇಕ ಮಹಾಕವಿಗಳು ಹೇಗೆ ಜನಸಾಮಾನ್ಯರ ಸಾಹಿತ್ಯದಿಂದ ಪುಷ್ಟಿಗೊಂಡು ತಮ್ಮ ಕಾವ್ಯಗಳನ್ನು ಶ್ರೇಷ್ಠಗೊಳಿಸಿಕೊಂಡಿದ್ದಾರೆಂಬುದನ್ನು ಹೇಳಿದ್ದಾರೆ. ಶಿಷ್ಟ ಸಾಹಿತ್ಯವು ತನ್ನ ಸಂಕೀರ್ಣ ಗುಣಸ್ವಭಾವದಿಂದಾಗಿಯೇ ಸರ್ವರಸ್ವತ್ತಾಗದೆ ಕೆಲವೇ ಮಂದಿ ಅಕ್ಷರಸ್ಥ ಜನತೆಯನ್ನು ಮಾತ್ರ ತಲಪಿದರೆ ಬಹುಸಂಖ್ಯಾತರಾದ ಜನಸಾಮಾನ್ಯರ ಸಾಹಿತ್ಯವಾದರೆ ಜನತೆಗೆ ಬಲು ಹತ್ತಿರದ್ದಾಗಿ ಆಪ್ತವಾಗಿ ಅವರಲ್ಲೆಲ್ಲ ವ್ಯಾಪಿಸುತ್ತದೆ. ಇವೊತ್ತಿಗೂ ಬಹುಜನ ಪ್ರಿಯವಾಗಿರುವ ಸಾಹಿತ್ಯವೆಂದರೆ ಜನಪದ ಹಾಗೂ ಅದನ್ನು ಹೋಲುವಂತಿರುವ ಆಧುನಿಕ ಕವಿಗಳ ಕೆಲವು ಭಾವಗೀತೆಗಳು ಪಂಪರನ್ನರ ಕೃತಿಗಳು ಜನಸಾಮಾನ್ಯರನ್ನು ಎಂದು ಮುಟ್ಟಿರಲಿಲ್ಲ ಎಂದು ಸೂಚಿಸಿದ್ದಾರೆ.

ಜನಪದ ಸಾಹಿತ್ಯ ರಚನೆಗೆ ಪಾಂಡಿತ್ಯಕ್ಕಿಂತ ಮಿಗಿಲಾಗಿ ಭಾವಪೂರ್ಣತೆ, ಆವೇಶಗಳು ಮುಖ್ಯವಾಗುತ್ತವೆ. ಕೆಲವು ಕವಿಗಳ ರಚನೆಗಳಾದ ಜನಪ್ರಿಯ ಗೀತೆಗಳಿಗೂ ದಿಟವಾದ ಜನಪದ ಗೀತೆಗಳಿಗೂ ವ್ಯತ್ಯಾಸವಿದೆ. ಶಿಷ್ಟಕಾವ್ಯದ ವಿಷಯವೂ ಹೀಗೆಯೇ "ಯಾವಾಗ ಪಂಡಿತ ಕಾವ್ಯಗಳ ಬೆಲೆ ಇಳಿದು ಹೋಗುತ್ತದೆಯೋ ಮಾನವೀಯತಾ ದೃಷ್ಟಿಯುಳ್ಳ ಸಾಹಿತ್ಯಕ್ಕೆ ಕ್ಷಾಮ ಪ್ರಾಪ್ತವಾಗುತ್ತದೆಯೋ ಆಗ ಶಿವಶರಣರಂಥ ಕವಿಗಳು ಜಾನಪದ ಸಾಹಿತ್ಯವನ್ನು ಸೂರೆಗೊಂಡು, ಸಾಹಿತ್ಯ ಕ್ಷೇತ್ರದಲ್ಲಿ ಕ್ರಾಂತಿಗೆ ಕಾರಣವಾಗುತ್ತಾರೆ. ಅಂಥ ಸಮಯದಲ್ಲಿ ಮಾತ್ರ ಜನಪದ ಸಾಹಿತ್ಯದ ಬೆಳವಣಿಗೆಗೆ ತಾತ್ಕಾಲಿಕವಾಗಿ ನಿಲ್ಲಬಹುದು. ಶಿಷ್ಟ ಸಾಹಿತ್ಯ ಮತ್ತೆ ಪಂಡಿತ ಕವಿಗಳ ಕೈಗೆ ಸಿಕ್ಕಿಕೊಂಡು ಒರಲುವಾಗ ಜನಪದ ಸಾಹಿತ್ಯ ತಲೆಯೆತ್ತುತ್ತದೆ. ನಿರಕ್ಷರಕುಕ್ಷಿಗಳ ತವರಾದ ಭರತಖಂಡದಂಥ ರಾಷ್ಟ್ರಗಳಲ್ಲಿ ಜನಪದ ಸಾಹಿತ್ಯದ ಒರತೆ ಬಹುಕಾಲ ಬತ್ತುವಂತಿಲ್ಲ" ಎಂಬುದಾಗಿ ಈ ಸಾಹಿತ್ಯದ ಸತ್ವ ಸ್ವರೂಪ ಹಾಗೂ ಭವಿಷ್ಯಗಳ ಬಗೆಗೆ ನುಡಿದಿರುವುದು ಗಮನಾರ್ಹ. ಆದರೂ ನಾಗರಿಕತೆಯ ಪ್ರಭಾವದಿಂದಾಗಿ ಜಾನಪದರ ಬದುಕೂ ನವುರಾಗಿ ನಾಗರಿಕವಾದಂತೆಲ್ಲ ಜನಪದ ಸಾಹಿತ್ಯ ರಚನೆ, ಅನುಸರಣೆ,

ಪ್ರಸಾರಗಳು ಹಿಂದೆ ಬೀಳುತ್ತವೆ ಎಂಬ ಸತ್ಯಸಂಗತಿಯನ್ನು ಮರೆಯುವಂತಿಲ್ಲ. ನಾಗರಿಕತೆಯ ಔನ್ನತ್ಯ ತಲಪಿರುವ ಯೂರೋಪಿನ ಹಾಗೂ ಅಮೆರಿಕೆಯ ಹಲವು ಹಿಂದುಳಿದ ಪ್ರದೇಶಗಳಲ್ಲಿಯೂ ಜಾನಪದೀಯತೆಯು ನಾಗರಿಕತೆಗೆ ತೆರವು ಮಾಡಿಕೊಟ್ಟಿರುವುದನ್ನು ಆ ಪ್ರದೇಶಗಳಲ್ಲಿ ಜಾನಪದಾಧ್ಯಯನ ನಡೆಸಿರುವ ವಿದ್ವಾಂಸರು ಪ್ರಕಟಿಸಿದ್ದಾರೆ.

ಜನಪದ ಸಾಹಿತ್ಯದ ಮುಖ್ಯ ಲಕ್ಷಣವು ಭಾವಾತಿರೇಕದಿಂದ ಕೂಡಿರುವಂತೆ ತೋರಿದರೂ ಅದು ವಾಸ್ತವತೆಗೆ ಎರವಾಗಿಲ್ಲ. ಭಾವುಕತೆಯಿಂದ ಬದುಕು ಜಡ–ವಾದುದು. ಆದ್ದರಿಂದ ಈ ಲಕ್ಷಣ ಒಂದು ದೋಷವಾಗಲಾರದು ಎಂಬುದಾಗಿ ವಿವೇಚಿರುವ ಶ್ರೀಯುತರು ಜನಪದ ಸಾಹಿತ್ಯದ ಆಶುಕವಿತಾಗುಣ, ವಾಕ್ಸಂಪ್ರದಾಯ ಅನುಸಾರ ಹುಟ್ಟಿ ಪ್ರಸಾರ ಹೊಂದುವ ಬಗೆ, ಜನಪದ ಸಾಹಿತ್ಯದ ಭಾಷೆ ಗ್ರಾಮೀಣವಾಗಿದ್ದರೂ ಅನಾಗರಿಕವಾಗಿರದ ಈ ಸಾಹಿತ್ಯದ ಶೈಲಿ ಸರಳವೂ ಸಹಜವೂ ಆಗಿರುವ ರೀತಿ ಈ ಹಲವು ಸಂಗತಿಗಳನ್ನು ಒಂದೊಂದಾಗಿ ಒಂದೊಂದು ಪ್ಯಾರಾಗಳಲ್ಲಿ ಸಮರ್ಥವಾಗಿ ಪ್ರಸ್ತಾಪಿಸಿರುವ ಕ್ರಮ ಅವರ ವಿಚಾರ ಸರಣಿ ಆಕರ್ಷಕವಾಗಿದೆ.

ಜನಪದ ಸಾಹಿತ್ಯವು ತನ್ನ ಅಕರ್ತೃ ಗುಣದಿಂದಾಗಿ ಸಾರ್ವಜನಿಕರ ಸಾರಸ್ವತ ಸಂಪತ್ತಾಗಿ, ಲಾಲಿಸಿ ಪೋಷಿಸಿದವರ ಮುದ್ದು ಕಂದನಾಗಿ ಬೆಳೆಯುವಂಥದು. "ಪ್ರಾಮಾಣಿಕತೆ ಎಲ್ಲ ಜನಪದ ಕಾವ್ಯಗಳ ಪ್ರಧಾನ ಲಕ್ಷಣ" ಇದರ ಅಧ್ಯಯನದಿಂದ ಇಡೀ ಒಂದು ಜನಪದ ಸಮಾಜದ ಸಾಂಸ್ಕೃತಿಕ ದರ್ಶನ ಒದಗುತ್ತದೆ. ಇಂಥ ಸಾಹಿತ್ಯದಲ್ಲಿ ಇರುವುದೆಲ್ಲ ಶ್ರೇಷ್ಠವಾಗಿದೆ. ಇದರಲ್ಲಿ ಜಳ್ಳು ಸಾಧಾರಣವಾದುದು ಇಲ್ಲವೇ ಅಲ್ಲ ಎಂದಲ್ಲ. ಆದರೆ ಇರುವಷ್ಟು ಸರಕನ್ನು ಅದರ ಸಾಂಸ್ಕೃತಿಕ ಹಿನ್ನೆಲೆಯಿಂದ ಕಂಡು ಬೆಲೆಕಟ್ಟಬೇಕೇ ಹೊರತು ಜನಪದ ಬದುಕೆಂದಾಕ್ಷಣ ಮೂಗುಮುರಿದು ತಾತ್ಸಾರ ಮಾಡುವುದು ಅಪಚಾರವಾದೀತು ಎಂದು ಎಚ್ಚರಿಸಿಯೂ ಇದ್ದಾರೆ.

ಇಂಥ ಜನಪದ ಸಾಹಿತ್ಯವನ್ನು ಸರ್ವಸಮರ್ಪಕವಾಗಿ ವೈಜ್ಞಾನಿಕವಾಗಿ ವಿಂಗಡಿಸುವುದು ತುಂಬ ಕಷ್ಟದ ಕೆಲಸ. ಹಾಗೆ ವಿಂಗಡಿಸಿರುವ ದೇವುಡು, ಎಂ.ಜಿ.ಬಿರಾದಾರ, ಎನ್.ಆರ್.ನಾಯಕ್, ಕಲ್ಬುರ್ಗಿ, ಆರ್.ಎಸ್.ಬಾಗ್ಸ್.... ಮುಂತಾದ ವಿದ್ವಾಂಸರ ಪ್ರಯತ್ನ ಸರ್ವಜನ ಸಾಮಾನ್ಯವಾಗಿಲ್ಲ. ಆದರೂ ಸ್ಥೂಲವಾಗಿ ಜನಪದ ಸಾಹಿತ್ಯವನ್ನು ಜನಪದಗೀತೆ, ಜನಪದಕಥೆ, ಐತಿಹ್ಯ, ಪುರಾಣ ಇತ್ಯಾದಿಯಾಗಿ

ಸ್ಥೂಲವಾಗಿ ವಿಂಗಡಿಸಿಕೊಂಡು ವಿಶ್ಲೇಷಿಸುವುದು ಉತ್ತಮ ಎಂಬುದಾಗಿ ಪ್ರಸ್ತಾಪಿಸಿ ಈ ಒಂದೊಂದು ಮುಖ್ಯ ಪ್ರಕಾರದ ಒಳಗಡೆಯೂ ಇನ್ನಷ್ಟು ರೂಪಗಳಿರುತ್ತಿದ್ದು, ಅವನ್ನು ಕಡೆಗಣಿಸದೆಯೇ ಈ ಪ್ರಕಾರದ ಸಾಹಿತ್ಯವನ್ನು ಪರಿಚಯಿಸಿ ವಿಶ್ಲೇಷಿಸಿ ಅಲ್ಲಿ ಕಾಣಬರುವ ಸ್ವಾರಸ್ಯವನ್ನು ಎತ್ತಿ ಹೇಳುವ ರೀತಿ ಸ್ತುತ್ಯಾರ್ಹವಾದರೂ ಕಷ್ಟವಾದ ಕೆಲಸವನ್ನು ದೇಜಗೌ ಸಮರ್ಪಕವಾಗಿಯೇ ಮಾಡಿದ್ದಾರೆನ್ನಬಹುದು.

ಕೋಲಾಟವಾಗಲಿ ಪ್ರೇಮಗೀತೆಗಳಾಗಲಿ, ತಮ್ಮ ನೆಚ್ಚಿನ ಮೆಚ್ಚಿನ ದೇವಾನು-ದೇವತೆಗಳ ಮಹಿಮಾ ಗೀತೆಗಳಾಗಲೀ ತರ್ಕ, ವಾದ ಹಾಗೂ ವಿಚಾರವಂತಿಕೆಗೆ ಸವಾಲು ಹಾಕುವಂತಹ ಲಾವಣಿಗಳನ್ನಾಗಲಿ ಜಾನಪದರು ಅವರು ಕನ್ನಡಿಗರಾಗಿರಲಿ ಅಥವಾ ಭಾರತದ ಯಾವ ಪ್ರಾಂತದವರೇ ಆಗಿರಲಿ ಹೇಗೆ ಅಂಥ ಸಂದರ್ಭಗಳಿಗೆ ತಕ್ಕಂತಹ ಸಾಹಿತ್ಯವನ್ನು ಹಾಡಿ ಆಡಿ ಸಂತೋಷಪಡುತ್ತಾರೆ ಎಂಬುದನ್ನು ವಿವರಿಸ-ಲಾಗಿದೆ.

ಗೀತೆಗಳಲ್ಲೆಲ್ಲ ಕುಣಿತದ ಹಾಡೇ ಪ್ರಾಚೀನವಾದುದೆಂದು ತೋರುತ್ತದೆ. ಕಲೆಗಳೆಲ್ಲೆಲ್ಲ ನೃತ್ಯವೇ ಮೊದಲು ಹುಟ್ಟಿದ್ದಷ್ಟೆ ಭಾವಾಭಿವ್ಯಕ್ತಿಯ ಮೊದಲ ಮಾಧ್ಯಮವದು. ಕುಣಿತದೊಡನೆಯ ಉದ್ಗಾರಗಳೇ ಮಾತಾದವು. ಆ ಉದ್ಗಾರ ಭಾವನಾತ್ಮಕವಾದದ್ದು. ಕುಣಿತದ ಹಾಡುಗಳಲ್ಲೆಲ್ಲ ಕೋಲಾಟದ ಪದಗಳು ದಕ್ಷಿಣ ಭಾರತದಲ್ಲಿ ಬಹು ಜನಪ್ರಿಯವಾದವು.

ಈಗಿರುವಂತೆ ನಮ್ಮ ಜನಪದ ಸಾಹಿತ್ಯವಾಗಲೀ ಸಂಸ್ಕೃತಿಯಾಗಲೀ ಅದು ಸೂಚಿಸುವುದು ಪ್ರತಿಬಿಂಬಿಸುವುದು ಪ್ರಾಚೀನ ಎಂದರೆ ಮೊನ್ನಿನ ಸಂಗತಿಗಳನ್ನೇ ಹೊರತು ಇವೊತ್ತಿನದನ್ನಲ್ಲ; ಇಂದಿನದು ಆ ಹಿಂದಿನ ಬದುಕಿಗಿಂತ ಎಲ್ಲ ವಿಧದಲ್ಲಿಯೂ ವಿನೂತನವಾಗುತ್ತಲೇ ಸಾಗಿದೆ. ಹೀಗೆ ಪ್ರಾಚೀನ ವಿನೂತನತೆಗಳನ್ನು ಹೊಂದಿಸಿಕೊಂಡು, ಶತಮಾನಗಳಿಂದ ಮುಂದುವರಿದು ಬಂದಿರುವುದೇ ಜನಪದ ಸಮಾಜ, ಸಾಹಿತ್ಯ, ಸಂಸ್ಕೃತಿ.

ಜನಪದಗೀತೆ ಪ್ರಕಾರದ ಹಲವು ಅಂಶಗಳನ್ನು ಸಮೀಕ್ಷಿಸುತ್ತ ದೇಜಗೌ ಅವರು ಕನ್ನಡ ಜನಪದ ಸಾಹಿತ್ಯದಲ್ಲಿ ಸಿಂಹಪಾಲನ್ನು ಪಡೆದಿರುವ ಈ ಸಾಹಿತ್ಯಲದಲಿ ಕಿರೀಟಪ್ರಾಯವಾಗಿ ಗಾತ್ರ ಹಾಗೂ ಪಾತ್ರಗಳಲ್ಲಿ ಶೋಭಿಸುವ ಕನ್ನಡ ಜನಪದ ಗೀತೆಗಳ ಮರ್ಮವನ್ನು ಚೆನ್ನಾಗಿ ಅರಿತುಕೊಂಡು ಬೆಲೆಯುಳ್ಳ ನಿಲುವನ್ನು ತಳೆದಿದ್ದಾರೆ ಎಂದು ಹೇಳಬಹುದು. ಜನಪದ ಕವಿಗಳು ತಾವು ಕವಿಗಳೆಂಬ ಅರಿವಿಲ್ಲದೆ ಆ ಪ್ರತಿಷ್ಠೆಯ ಗತ್ತು ಗೈರತ್ತುಗಳಿಲ್ಲದೆ ತಮ್ಮ ಅನುಭವಕ್ಕೆ ಭಾವಕೋಶಕ್ಕೆ ಅರಿವಿಗೆ ಬಂದ ಭಾವನೆಗಳನ್ನು

ಸಹಜವಾಗಿ ತೋಡಿಕೊಂಡಿರುವುದರಲ್ಲಿ ಅಲ್ಲಲ್ಲಿ ಉತ್ತಮ ಸಾಹಿತ್ಯಾಂಶಗಳು ಮಿಂಚು ಹೊಳೆಯುತ್ತದೆ. ಅವರ ಬದುಕಿನ ಒಲವು ನಿಲವುಗಳ ಸ್ವರೂಪದ ಪರಿಚಯ ತೆರದ ಪುಸ್ತಕದಂತೆ ಆಗುತ್ತದೆ. ಹೀಗಾದರೂ ಅವರ ಬದುಕನ್ನು ಸರಿಯಾಗಿ ಅರಿತು–ಕೊಳ್ಳಬೇಕಾದರೆ ಆ ಜೀವನದ ನೇರ ನಿಕಟ ಪರಿಚಯ ಸಹೃದಯರಾದ ನಮಗೂ ತಕ್ಕಮಟ್ಟಿಗೆ ಇರಬೇಕಾಗುತ್ತದೆ. ಇಲ್ಲದೆ ಹೋದರೆ ಆ ಸಾಹಿತ್ಯದ ಬದುಕಿನ ಎಲ್ಲೋ ಕೆಲವು ಮಾತ್ರ ಆಕರ್ಷಕವಾದ ಒಳ್ಳೆಯ ಅಂಶಗಳೂ ಮಾತ್ರ ನಮಗೆ ಅರಿವಾಗಿ ಅರ್ಥವಾಗಿ ಅದಷ್ಟೇ ಅವರ ಬದುಕು, ಸಾಹಿತ್ಯ, ಸಂಸ್ಕೃತಿಯೆಂಬ ತಪ್ಪು ಕಲ್ಪನೆಗೆ ಕಾರಣವಾಗುತ್ತದೆ. ಈ ಎಚ್ಚರದಿಂದಲೇ ಯಾವುದೇ ಸಂಸ್ಕೃತಿಯನ್ನು ಅರಿತು ಅರ್ಥೈಸಬೇಕಾದುದು ಸಾಹಿತಿಗಳ ಸಮಾಜ ವಿಜ್ಞಾನಿಗಳ ಆದ್ಯ ಕರ್ತವ್ಯ. ಜನಪದ ಸಾಹಿತ್ಯವೆಂದಾಕ್ಷಣ ಅದು ಪ್ರಾಚೀನವೆಂಬ ಪಾರಂಪರಿಕ ಸಾಂಸ್ಕೃತಿಕ ಸ್ವತ್ತೆಂಬ ಕಾರಣಕ್ಕಾಗಿ ಕಣ್ಣು ಮುಚ್ಚಿಕೊಂಡು ಹೊಗಳುವುದಾಗಲೀ ಅದು ನಿಸ್ಸತ್ವವೆಂದು ಪೂರ್ತಿ ಕಡೆಗಣಿಸುವುದಾಗಲಿ ಸಲ್ಲದು. ಈ ಅಂಶವನ್ನು ದೇಜಗೌ ಅವರ ಕೃತಿಯುದ್ದಕ್ಕೂ ಸ್ಪಷ್ಟವಾಗಿ ಸೂಚಿಸಿದ್ದಾರೆ.

'ಜಾನಪದ ಅಧ್ಯಯನ' ಗ್ರಂಥದ ಎರಡನೇ ಅಧ್ಯಾಯದಲ್ಲಿ ಜನಪದ ಕಥೆಗಳ ಸ್ವರೂಪ ಸೂತ್ರ ಹಾಗೂ ಸ್ವಾರಸ್ಯಗಳನ್ನು ದೇಜಗೌ ಅವರು ನಿದರ್ಶನಪೂರ್ವಕವಾಗಿ ವಿವೇಚಿಸಿದ್ದಾರೆ. ಮಕ್ಕಳಿಂದ ಹಿಡಿದು ಮುದುಕರವರೆಗೂ ಕಥೆಯನ್ನು ಕೇಳುವ ಕುತೂಹಲ ಸಹಜವಾಗಿರುವ ಸಂಗತಿಯನ್ನು ತಿಳಿಸಿ ಈ ಕಥಾ ಸಾಹಿತ್ಯಕ್ಕೆ ವಿಶ್ವವ್ಯಾಪಕವಾದ ಪ್ರಾಚೀನ ಹಿನ್ನಲೆ ಪರಂಪರೆಗಳಿರುವುದರತ್ತ ಓದುಗರ ಗಮನ ಸೆಳೆದಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಕಥೆಗಳನ್ನು ಕಿನ್ನರಕಥೆ, ಐತಿಹ್ಯ ಕಥೆಯೇ ಆದಿಯಾದ ಹಲವು ವಿಧದಲ್ಲಿ ವಿಂಗಡಿಸಿ ತೋರುವ ಪ್ರಯತ್ನ ಮಾಡಿರುವುದನ್ನು ಸರಳ ಹಾಗೂ ಸಂಕೀರ್ಣ ಕಥೆಗಳು ರೂಢಿಯಲ್ಲಿರುವ ಬಗೆಗೂ ವಿವರಿಸಿದ್ದಾರೆ. ಜನಪದ ಕಥೆಗಳನ್ನು ಕಟ್ಟುನಿಟ್ಟಾಗಿ ಶುದ್ಧವಾಗಿ ವರ್ಗೀಕರಿಸುವುದು ಕಷ್ಟಸಾಧ್ಯವಾಗಿದ್ದು, ಇದರಲ್ಲಿ ಮತಭೇದಗಳು ಅನಿವಾರ್ಯವಾಗಿ ಉಳಿದುಬಿಡುತ್ತವೆ ಎಂದು ಸರಿಯಾಗಿಯೇ ಹೇಳಿದ್ದಾರೆ.

ದೇಜಗೌ ಅವರು ಕಥಾಸಕ್ತಿಯ ಮಹತ್ವವನ್ನು ಕುರಿತು ಕಣ್ಣಿಗೆ ನಿದ್ದೆ ಹತ್ತದಿರುವ ದೇಹಾಲಸ್ಯದಿಂದ ನರಳುವ ಮಗುವಿಗೆ ಕಥೆ ಸಮ್ಮೋಹನಾಂಜನವಾಗುತ್ತದೆ. ಕಥಾಶ್ರವಣ ರೋಗಿಗೆ ವೈದ್ಯವಾಗುತ್ತದೆ. ದಡ್ಡನಿಗೆ ವಿದ್ಯೆಯಾಗುತ್ತದೆ. ದುಡಿಮೆಗಾರನಿಗೆ ಚೇತೋಹಾರಿಯಾಗುತ್ತದೆ. ದುಷ್ಟನಿಗೆ ಶಿವಶಕ್ತಿಯಾಗುತ್ತದೆ. ಸೋಮಾರಿಗೆ ಚೈತನ್ಯದಾಯಿ–ಯಾಗುತ್ತದೆ. ರಸಿಕನಿಗೆ ರಸಾಯನವಾಗುತ್ತದೆ ಎಂದು ವಿವರಿಸಿದ್ದಾರೆ.

ಜನಪದ ಕಥೆ ಕೇಳುಗನಿಗೆ ಕೇಳುವ ಕುತೂಹಲವಿರುವಂತೆಯೇ ಹೇಳುವವನಿಗೆ ಹೇಳುವ ಹವ್ಯಾಸ, ಕೇಳುಗನ ಆಸಕ್ತಿ ಹೇಳುಗನ ಸೃಜನಶೀಲ ಶಕ್ತಿಯನ್ನೂ ಕೆರಳಿಸುತ್ತದೆ. ಒಬ್ಬನ ಮೆಚ್ಚುಗೆ ಮತ್ತೊಬ್ಬನ ಹುಚ್ಚಿಗೆ ನಿಮಿತ್ತವಾಗುತ್ತದೆ. ಹೇಳೋಣ ಕೇಳೋಣ– ವೆರಡೂ ಒಂದೇ ಸೃಜನ ಸಾಮರ್ಥ್ಯದ ಎರಡು ಮುಖಗಳು. ಆದ್ದರಿಂದ ಮಾನವ ಸಹಜವಾದ ಕ್ರಿಯೆಗಳು. ಕಥೆಗಾರ ಜಾಣನಾದದ್ದರಿಂದ ಅವನಿಗೆ ಶ್ರೋತೃಗಳ ಅಭಿರುಚಿ ಮನೋಧರ್ಮಗಳ ಪರಿಚಯವಿದೆ. ಅವರ ಎದೆಯ ದನಿ ಅವನೆದೆಯಲ್ಲಿ ಮಾರ್ದನಿಸುತ್ತದೆ. ಸಮಾಜದ ಮಿಡಿತ ಅವನೆದೆಗಿವಿಗೆ ಕೇಳಿಸುತ್ತದೆ. ಒಂದು ರೀತಿಯಲ್ಲಿ ಕಥೆ ಪ್ರಾಚೀನ ಮಾನವನ ಜ್ಞಾನ ಸಂಗ್ರಹಾಲವೂ ಅಹುದು, ಸಾಂಸ್ಕೃತಿ ವಸ್ತುಸಂಗ್ರಹಾಲಯವೂ ಅಹುದು.

ಈ ಕಥೆಗಳನ್ನು ಒಂದೊಂದು ದೇಶದಲ್ಲಿ ಒಂದೊಂದು ಹೆಸರಿನಿಂದ ಕರೆಯುತ್ತಾರೆ. ಆ ಕಥೆಗಳ ಗುಣಲಕ್ಷಣಗಳನ್ನು ಪ್ರತಿಬಿಂಬಿಸುವ ಒಂದು ಹೆಸರು ಯಾವ ಭಾಷೆಯಲ್ಲಿಯೂ ಇಲ್ಲ. ಜರ್ಮನ್ ಭಾಷೆಯ 'ಮಾರ್ಷೆನ್'(Marchen) ಇದ್ದದ್ದರಲ್ಲಿ ತೃಪ್ತಿಕರವಾದ ಪದವೆಂದು ಹೇಳಲಾಗಿದೆ. ಅದನ್ನು ಆಂಗ್ಲಭಾಷೆಯಲ್ಲಿ ಕಿನ್ನರ ಕಥೆ (Fairy tale)ಅಥವಾ 'ಮನೆಗತೆ' ಎಂದು ಕರೆಯುತ್ತಾರೆ. ವಿಶಾಲಾರ್ಥ ಹೊಂದಿರುವ ಜಗತ್ತಿನ ಜನಪದರ ಹಾಗೂ ಶಿಷ್ಟಪದ ಕಥೆಗಳನ್ನೆಲ್ಲ ಒಳಗೊಳ್ಳುವಂಥ ಪದ ಮನೆಗತೆ, ಸೀಮಿತಾರ್ಥವುಳ್ಳ ಕೇವಲ ಮೌಖಿಕ ಸಂಪ್ರದಾಯದ ಕಾಲ್ಪನಿಕ ಕಥೆಗಳಿಗೆ ಈ ಮಾತಿನ ಅನ್ವಯ ಉಚಿತವಾಗಲಾರದು. ಆಶಯ ಅಥವಾ ಘಟನೆಗಳ ಪರಂಪರೆಯಿಂದ ಕೂಡಿದ ಸುಮಾರು ಉದ್ದದ ಕಥೆಯನ್ನು 'ಮಾರ್ಷೆನ್' ಎಂದು ಕರೆಯುತ್ತಾರೆ.

ಮಾರ್ಷೆನ್ ಸಂವಾದಿಯಾಗಿ 'ಕಿಮೀರತ್' ಎಂಬ ಪದ ಬಳಸಬಹುದೆಂದು "ಸ್ಟಿತ್‌ಥಾಂಪ್ಸನ್' ಅಭಿಪ್ರಾಯಪಡುತ್ತಾರೆ. ಕಿಮೀರ (chimera) ಎಂದರೆ ಸಿಂಹದ ತಲೆಯೂ ಆಡಿನ ಹೊಟ್ಟೆಯೂ ಹಾವಿನ ಬಾಲವೂ ಉಳ್ಳ ಒಂದು ರಾಕ್ಷಸಾಕಾರದ ಪ್ರಾಣಿ. ವಿಚಿತ್ರ ಕಥೆಗೆ ವಿಚಿತ್ರ ಪ್ರಾಣಿಯ ಹೆಸರು ಸೂಕ್ತವೆಂದು ಅವರಿಗನಿಸಿರಬಹುದು. ಅಂಥ ಕಥೆಗಳನ್ನು ಕನ್ನಡದಲ್ಲಿ 'ವಿಚಿತ್ರಕಥೆ' ಅಥವಾ 'ಕಷ್ಟಕಥೆ'ಯೆಂದು ಕರೆಯ–ಬಹುದು."[೧] ನಾವು ಐತಿಹ್ಯಗಳೆಂದು ಕರೆಯುವ ಕಥೆಗಳನ್ನು ಜರ್ಮನ್ ಭಾಷೆಯಲ್ಲಿ ಸಾಗೆ (Sage)ಗಳೆಂದೂ ಆಂಗ್ಲ ಭಾಷೆಯಲ್ಲಿ ಲೆಜೆಂಡ್ (Legend) ಗಳೆಂದೂ ಕರೆಯುವುದುಂಟು. ಸಾಗಾ'ಗಳೆಂದು ಹೆಸರುವಾಸಿಯಾದ ಕಥೆಗಳು ಐರ್ಲೆಂಡ್, ನಾರ್ವೆ

೧. ಜಾನಪದ ಮಹಾಸಂಪುಟ, ಲೇ. ದೇಜಗೌ, ಪು. ೬೨

ಮೊದಲಾದ ಕೆಲವು ದೇಶಗಳಲ್ಲಿ ಮಾತ್ರ ಚಾಲ್ತಿಯಲ್ಲಿವೆ. ಅವು ಮುಖ್ಯವಾಗಿ ಕೌಟುಂಬಿಕ ಕಥೆಗಳು.

ಕಥೆಗಳ ವಿಂಗಡಣೆ ಸುಲಭ ಕಾರ್ಯವಲ್ಲ. ಯಾವ ರೀತಿ ವಿಂಗಡಿಸಿದರೂ ಒಂದರ ಗಡಿ ಮತ್ತೊಂದರ ಗಡಿಯೊಳಗೆ ಮೈಗರೆದಿರುತ್ತದೆ. ಬ್ರಿಟನ್ನಿನ ವಿಶ್ವಕೋಶ, ಕ್ರಾಪೆ, ಸ್ಟಿಪ್ ಥಾಂಪ್ಸನ್, ದೇವುಡು, ಜೀಶಂಪ ಹಾಗೂ ರಾಗೌ ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲ ಕಥೆಗಳನ್ನು ಕಾಲ್ಪನಿಕ, ವೈನೋದಿಕ, ಪ್ರಾಣ್ಯಾತ್ಮನ, ಗಾದೆ ಸಂಬಂಧಿ, ಒಗಟು ಸಂಬಂಧಿ, ಮತ್ತು ಕಾನೂನು ಸಂಬಂಧಿಗಳಾಗಿ ದೇಜಗೌ ಅವರು ವಿಭಜಿಸಬಹುದೆಂದು ತೋರುತ್ತದೆ ಎಂದಿದ್ದಾರೆ.

ಕಥೆಗಳ ಉಗಮ ವಿಕಾಸ, ಪ್ರಸಾರಗಳನ್ನು ಕುರಿತು ಖಚಿತವಾಗಿ ತೀರ್ಪು ನೀಡುವುದು ಕಷ್ಟವಾಗುತ್ತದೆ. ಆ ಬಗ್ಗೆ ಮೊಟ್ಟಮೊದಲು ವಿಚಾರ ಮಾಡಿ ಅಭಿಪ್ರಾಯ ಸೂಚಿಸಿದವರು 'ಗ್ರಿಮ್ ಸಹೋದರರು' ಸಮೀಪದ ಕತೆಗಳಿರಲಿ ದೂರದೇಶಗಳ ಕತೆಗಳಲ್ಲಿ ತಾವು ಕಂಡ ಅಪಾರ ಸಂಖ್ಯೆಯ ಸಾದೃಶ್ಯಗಳಿಂದ ಅವರು ಚಕಿತರಾದರು. ಭಿನ್ನ ವಿಚ್ಛಿನ್ನ ಪುರಾಣಗಳೇ ಕಥೆಗಳು, ಅವು ಇಂಡೋ-ಯೂರೋಪಿಯ ಮೂಲವಾದವು ಎಂಬ ಸಿದ್ಧಾಂತಗಳನ್ನು ೧೮೫೬ರಲ್ಲಿ ವಿಲ್‌ಹೆಲ್ಮ್‌ಗ್ರಿಮ್ ಮಂಡಿಸಿದ ನಂತರ ಆ ವಿಷಯದ ಮೇಲೆ ವಾದವಿವಾದಗಳು ಪ್ರಾರಂಭವಾದುವು. ಗ್ರಿಮ್ಮನ ಇಂಡೋ ಯೂರೋಪಿಯ ಸಿದ್ಧಾಂತಕ್ಕೆ ಭಾಷಾವಿಜ್ಞಾನ ಕ್ಷೇತ್ರದ ಅಮೂಲ್ಯ ಸಂಶೋಧನೆಗಳು ನೆರವಾಗುತ್ತವೆ. ತೌಲನಿಕ ಭಾಷಾವಿಜ್ಞಾನದ ಪಿತಾಮಹನೆನಿಸಿ-ಕೊಂಡಿರುವ 'ಫ್ರಾಂಜ್‌ಬಾಪ್' ಸಂಸ್ಕೃತ ಹಾಗೂ ಯೂರೋಪಿನ ಭಾಷೆಗಳ ಅಧ್ಯಯನದ ಫಲವಾಗಿ ಅವುಗಳ ಬಾಂಧವ್ಯವನ್ನು ಸ್ಪಷ್ಟಪಡಿಸಿರುವ ಬಗ್ಗೆ ದೇಜಗೌ ಬೆಳಕು ಚೆಲ್ಲಿದ್ದಾರೆ.

ತೌಲನಿಕ ಪುರಾಣಶಾಸ್ತ್ರಕ್ಕೆ ಭದ್ರಬುನಾದಿ ಹಾಕಿದವರಾದ ಮ್ಯಾಕ್ಸ್‌ಮುಲ್ಲರ್, ಆಂಜಿಲೋಡಿ ಗೂಬರ್‌ನೇಟಿಸ್, ಜಾನ್ನೆಸ್ಕೆ, ಜಾರ್ಜ್‌ಕಾಕ್ಸ್ ಅಲ್ಲದೆ ಪಂಚತಂತ್ರಕ್ಕೆ ಮುನ್ನುಡಿ ಬರೆಯುವುದರ ಜೊತೆಗೆ ೧೮೫೯ರಲ್ಲಿ ಥಿಯೋಡರ್ ಬೆನ್‌ಫಿ(Theodere Benfey) ಭಾರತೀಯ ಮಹಾ ಸಿದ್ಧಾಂತವನ್ನು ಖಂಡಿಸಿ ಬಹುಮೂಲ ಸಿದ್ಧಾಂತವನ್ನು ಮಂಡಿಸಿದ್ದೂ... ಹೀಗೆ ದೇಜಗೌ ವಿದೇಶಿ ವಿದ್ವಾಂಸರ ಬಗೆಗಿನ ಆಳವಾದ ಅಧ್ಯಯನದಿಂದ ನೂತನ ಜಾನಪದ ಸಾಹಿತ್ಯ ಕೃತಿಯೊಂದರ ನಿರ್ಮಾಣಕ್ಕೆ ರಹದಾರಿಯಾದವು.

ಕಾಲ್ಪನಿಕ ಕಥೆಗಳು, ವಿನೋದ ಕಥೆಗಳು, ಪ್ರಾಣಿ ಮತ್ತು ನೀತಿಕಥೆಗಳು, ಇತರ ಕಥೆಗಳು ಎಂಬ ಶೀರ್ಷಿಕೆಗಳಲ್ಲಿ ನಮ್ಮ ದೇಶದಲ್ಲಿ ಹಾಗೂ ಯೂರೋಪಿನ ಹಲವು

ದೇಶಗಳಲ್ಲಿ ಪ್ರಸಿದ್ಧವಾಗಿರುವ ಕೆಲವು ಜನಪದ ಕಥೆಗಳ ನಿದರ್ಶನಗಳಿಂದ ಈ ಪ್ರಕಾರದ ಸ್ವರೂಪ ಹಾಗೂ ಸ್ವಾರಸ್ಯಗಳ ಬಗೆಗೆ ವಿವೇಚಿಸಿದ್ದಾರೆ.

ಮೂರನೆಯ ಅಧ್ಯಾಯವಾದ 'ಜನಪದ ಕಥನ ಕಾವ್ಯ' ಎಂಬುದು ಹಲವು ದೃಷ್ಟಿಕೋನದಿಂದ ಗಮನಾರ್ಹವಾಗಿದೆ. ವಾಸ್ತವವಾಗಿ, ಕಥನಕಾವ್ಯ ಎಂಬ ಹೆಸರೇ ಸೂಚಿಸುವಂತೆ ಇದರಲ್ಲಿಯೂ ಕಥೆಗೆ ಪ್ರಾಧಾನ್ಯತೆ. ಆದರೂ ಒಂದು ಕಥೆಯನ್ನು ಜನಪದ ಕಥೆಯಲ್ಲಿನಂತೆ ಗದ್ಯದಲ್ಲಿ ಸರಳವಾಗಿ ನೇರವಾಗಿ ಹೇಳದೆ ಕಥೆಗೆ ಕಾವ್ಯಕಲೆಯ ಮೆರಗು ಕೊಟ್ಟು ಬಣ್ಣಗೂಡಿಸಿ, ಕಥೆಯೊಳಗೆ ಹಲವು ಉಪಕಥೆಗಳನ್ನು ಬೇಕಿದ್ದರೆ ಸೇರಿಸಿ, ತುಂಬ ದೊಡ್ಡಕಥೆಯನ್ನಾಗಿ ಹೆಣೆದು ರಸವತ್ತಾಗಿ ನಿರೂಪಣೆ ಮಾಡುವ ಕಲೆ ಕಥನ ಕಾವ್ಯವೆನ್ನಿಸುತ್ತದೆ. ಇಂಥ ಕಥನದೊಂದಿಗೆ ರಂಗಸಜ್ಜಿಕೆ, ವೇಷಭೂಷಣಗಳುಳ್ಳ ಹಲವು ಪಾತ್ರಗಳ ಗೀತ ಹಾಗೂ ಮಾತುಗಾರಿಕೆ ಹಾಗೂ ನಾಟಕ ತಂತ್ರಗಳನ್ನು ಬಳಸಿಕೊಂಡು ಆಡಿದರೆ ಯಕ್ಷಗಾನ ಬಯಲು ನಾಟಕವಾಗುತ್ತದೆ. ಅದೇನೂ ಇರದೆ ಒಬ್ಬಿಬ್ಬರು ತಾಳಲಯ ವಾದ್ಯವುಳ್ಳ ಸಹಾಯಕರ ನೆರವಿನಿಂದ ಮುಖ್ಯ ಭಾಗವತ ಅಥವಾ ಹರಿಕಥೆಯ ದಾಸರಂಥ ಒಬ್ಬ ನಿರೂಪಕನು ಅದೇ ಕಥೆಯನ್ನು ಹಾವಭಾವಗಳಿಂದ ಕೂಡಿದ ಹಾಡು ಹಾಗೂ ಸಂಭಾಷಣೆಗಳಿಂದ ರಂಜಕವಾಗಿ ಏಕಪಾತ್ರಾಭಿನಯಕಾರನಂತೆ ತಕ್ಕಷ್ಟು ನಟನೆ ಹಾಗೂ ನಿರೂಪಣೆಗಳಿಂದ ಸಭಿಕರ ಮನಮುಟ್ಟುವಂತೆ ನಿರ್ವಹಿಸಿದನಾದರೆ ಅದು ಹರಿಕಥೆಯೋ ಕರಪಾಲ ಮೇಳವೋ ಆಗುತ್ತದೆ.

ಹೀಗೆ ವಿಶಿಷ್ಟವಾಗಿರುವ ಜನಪದ ಕಥನಕಾವ್ಯದ ಸ್ವರೂಪ ಲಕ್ಷಣಾದಿಗಳನ್ನು ದೇಜಗೌ ಅವರು ವಿವರವಾಗಿ ಪರಿಚಯಿಸಿದ್ದಾರೆ.

"ವಯೋಮಾನದ ದೃಷ್ಟಿಯಿಂದ ಮೊದಲು ಕಥೆ, ಆಮೇಲೆ ಕಥನಕಾವ್ಯ ಹುಟ್ಟಿರಬೇಕೆಂದು ತೋರುತ್ತದೆ. ಭಾವಗೀತೆಯಂತು ಕಥೆಗಿಂತ ಮೊದಲೇ ಇತ್ತು. ನಾಟಕವೂ ಪ್ರಾಯಶಃ ಕತೆಗಿಂತ ಮೊದಲೋ ಅಥವಾ ಅದರ ಜತೆಗೋ ಅವತರಿಸಿಬೇಕೆಂದು ಊಹಿಸಬಹುದಾಗಿದೆ. ಈ ಮೂರು ಪ್ರಕಾರಗಳ ಕೆಲಕೆಲವು ಅಂಶಗಳನ್ನು ಮೈಗೂಡಿಸಿಕೊಂಡು ಕಥನಕಾವ್ಯ ಆವಿರ್ಭವಿಸಿರಬೇಕು...." ಎಂಬುದಾಗಿ ಸೂಚಿಸಿರುವ ದೇಜಗೌ ಅವರ ವಿವೇಚನೆ ಅರ್ಥವತ್ತಾಗಿದೆ. ಕಥನ ಕಾವ್ಯದ ಹುಟ್ಟು ಹಾಗೂ ಬೆಳವಣಿಗೆಗೆ ಸಹಾಯಕವಾಗುವ ಅಂಶಗಳಾವುವೆಂಬುದನ್ನು ಅವರು ಸರಿಯಾಗಿಯೇ ಸೂಚಿಸಿದ್ದಾರೆ. ಈ ಕಥನ ಕಾವ್ಯಗಳನ್ನು ಹಲವು ವಿಧವಾಗಿ ಭಾರತೀಯ ಹಾಗೂ ಪಾಶ್ಚಾತ್ಯ ವಿದ್ವಾಂಸರು ವರ್ಗೀಕರಿಸುವ ಪ್ರಯತ್ನ ಮಾಡಿರು-

ವುದರತ್ತ ನಮ್ಮ ಗಮನ ಸೆಳೆದಿದ್ದಾರೆ. ಕೊನೆಗೆ "ಗಾತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಥನಕಾವ್ಯವನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದೆಂದು ತೋರುತ್ತದೆ. ಲಾವಣಿ ಕಥನಗೀತೆ ಅಥವಾ ನೀಳ್ಗವನ, ಖಂಡಕಾವ್ಯ ಮತ್ತು ಮಹಾಕಾವ್ಯ ಇವುಗಳ ಚೌಕಟ್ಟಿನಲ್ಲಿ ಎಲ್ಲ ಕಥನಕಾವ್ಯಗಳನ್ನು ಅಳವಡಿಸುವುದು ಸಾಧ್ಯವಾಗುತ್ತದೆ. ಹಿಂದಿ ಭಾಷೆಯಲ್ಲಿ ಕಥನಕಾವ್ಯ ಅಥವಾ ಬ್ಯಾಲೆಡ್ಡುಗಳಿಗೆ ಸಂವಾದಿಯಾಗಿ "ಲೋಕಗಾಥಾ" ಎಂಬ ಪದವನ್ನು ಬಳಸುತ್ತಾರೆ ಎಂದಿದ್ದಾರೆ.

ಅನಂತರ 'ಬ್ಯಾಲೆಡ್ಡು' ಎಂಬ ಉಪಶೀರ್ಷಿಕೆಯಲ್ಲಿ ಇಂಗ್ಲಿಷಿನ ಬ್ಯಾಲಡ್ ಹಾಗೂ ನಮ್ಮಲ್ಲಿ ರೂಢಿಗೆ ಬಂದಿರುವ ಲಾವಣಿಗೀತ ಪ್ರಕಾರಗಳಿಗಿರುವ ಸಾಮ್ಯ ವೈಷಮ್ಯಗಳನ್ನು ತೂಗಿ ನೋಡುವ ಪ್ರಯತ್ನ ಮಾಡಿದ್ದಾರೆ. "ಮಹಾರಾಷ್ಟ್ರದಲ್ಲಿ ಉತ್ತರ ಪೇಶಭಾಯಿ ಕಾಲದಲ್ಲಿ ಮೊಟ್ಟಮೊದಲಿಗೆ ಬಳಕೆಯಲ್ಲಿ ಬಂದ ಪದ 'ಲಾವಣಿ' ಶೃಂಗಾರ ಪ್ರಧಾನವಾದದ್ದು 'ಲಾವಣಿ' ಎಂದೂ ವೀರರಸ ಪ್ರಧಾನವಾದದ್ದು ಪೋವಾಡಾ(ಪವಾಡ) ಎಂದೂ ಅಲ್ಲಿ ರೂಢಿ. ಲಾವಣಿಗೀತ ಪ್ರಕಾರವು ಮರಾಠಿ ಲಾವಣಿ ಸಂಪ್ರದಾಯಾನುಸಾರಿಯಾಗಿ ಮೊದಲು ಉತ್ತರ ಕರ್ನಾಟಕ ಭಾಗದಲ್ಲಿ ಪ್ರಸಿದ್ಧಿಹೊಂದಿ, ಅನಂತರ ದಕ್ಷಿಣದ ಭಾಗಗಳನ್ನು ತಲುಪಿದೆ.

ಉತ್ತರ ಕರ್ನಾಟಕದಲ್ಲಿ ಸಂವಾದ ಪ್ರಧಾನವಾದ ತುರಾಕಲ್ಗಿ ಲಾವಣಿಗಳು ಪ್ರಸಿದ್ಧವಾಗಿವೆ ಎಂಬ ಸಂಗತಿಯನ್ನು ನೆನಪಿಸಿಕೊಂಡು ತುರಾಕಲ್ಗಿ ಸಂಪ್ರದಾಯವನ್ನು ಹರದೇಶಿ ನಾಗೇಶಿ ಎಂಬ ಹೆಸರಿನಿಂದ ಕರೆಯುವುದೂ ಉಂಟು. ಕೆಲವು ಕಥನ ಗೀತ ಪ್ರಕಾರಗಳನ್ನು 'ಲಾವಣಿ' ಎಂಬ ಹೆಸರಿನಿಂದ ಕರೆಯಬಹುದಾದರೂ ಮತ್ತೆ ಕೆಲವನ್ನು ನಿದರ್ಶನಕ್ಕೆ ಮಲೇಮಾದೇಶ್ವರ ಕಾವ್ಯ, ಗುಣಸಾಗರಿಕಥೆ ಇಂಥವನ್ನು ಲಾವಣಿ–ಗಳೆನ್ನಲಾಗದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಬ್ಯಾಲೆಡ್ ಎಂಬುದರ ಸ್ವರೂಪವನ್ನು ವಿವಿಧ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳನ್ನಾಧರಿಸಿ ತಿಳಿಯುವ ಪ್ರಯತ್ನ ಮಾಡಿ ಬ್ಯಾಲೆಡ್‌ಗಳಿಗೂ ಜನಪದ ಮಹಾಕಾವ್ಯಗಳಿಗೂ ಇರುವ ನಿಕಟ ಸಂಬಂಧವನ್ನು ಎತ್ತಿ ಹೇಳಿದ್ದಾರೆ. ಈ ಬ್ಯಾಲೆಡ್ ಕಾವ್ಯ ಪರಂಪರೆ ಪಾಶ್ಚಾತ್ಯ ದೇಶಗಳಲ್ಲಿ ಲ್ಯಾಟಿನ್, ಇಟಾಲಿಯನ್, ಜರ್ಮನ್ ಭಾಷೆಗಳಲ್ಲಿ ಹೇಗೆ ಮುಂದುವರಿದು ಬಂದೆತೆಂಬುದನ್ನೂ ಅವರು ಗುರುತಿಸಿದ್ದಾರೆ. ಅನಂತರ ನಮ್ಮ ದೇಶದಲ್ಲಿ ಪ್ರಚಲಿತವಿರುವ ಲಾವಣಿ ಸಾಹಿತ್ಯದ ಹಿನ್ನೆಲೆಯನ್ನು ಬೆದಕುತ್ತ ಹೋಗಿ ಸಂಸ್ಕೃತದ ಗಾಥಾಗೀತಗಳು ಲಾವಣಿಸಾಹಿತ್ಯದ ಪ್ರಾಚೀನ ಮಾದರಿಗಳಾಗಿದ್ದು ಅವುಗಳನ್ನು ಅಥರ್ವ ವೇದದಲ್ಲಿಯೂ ಗುರುತಿಸಬಹುದುದೆಂದೂ

ಸೂಚಿಸಿರುವುದರತ್ತ ನಮ್ಮ ಗಮನಸೆಳೆದಿದ್ದಾರೆ. ಬ್ಯಾಲೆಡ್ ಮತ್ತು ಲಾವಣಿಗಳು ಬೇರೆಯೇ ಆದ ಗೀತ ಪ್ರಕಾರಗಳು ಎಂಬುದು ತಮ್ಮ ಸ್ಪಷ್ಟ ನಿಲುವೆಂಬುದನ್ನು ಸೂಚಿಸಿದ್ದಾರೆ. ವಿಸ್ತಾರವಾದ ಕನ್ನಡ ನಾಡಿನಲ್ಲಿ ಹರಡಿರುವ ಲಾವಣಿಗಳನ್ನು ಕುರಿತು ಪ್ರಸ್ತಾಪಿಸಿದ ದೇಜಗೌ ಅವರು ಕಾಳೇಗೌಡ ನಾಗವಾರ ಅವರು ಸಂಗ್ರಹಿಸಿರುವ "ಬಯಲುಸೀಮೆಯ ಲಾವಣಿಗಳು" ಹೆಚ್ಚು ಕಡಿಮೆ ಪಾಶ್ಚಾತ್ಯ ಮಾದರಿಯನ್ನು ಹೋಲುತ್ತವೆಂದು ಹೇಳಿದ್ದಾರೆ. ಇಲ್ಲಿ ಬರುವ ಕೆಂಡದರಾಯ ಬಿಲ್ಲಾಳರಾಯ, ತಬ್ಬಲಿರಾಯ, ಕರಿರಾಯಬಂಟ, ವಡ್ಡಗೆರೆ ನಾಗಮ್ಮ, ಬಂಜೆ ಹೊನ್ನಮ್ಮ ಜಾಗಾಲೆ, ಮುತ್ತಿನಶೆಟ್ಟಿ, ಜಿಪುಣತನಕ್ಕೆ ಹೆಸರಾದ ಕೋಣವೇಗೌಡ, ಕೃಷ್ಣಕೊರವಂಜಿ, ಮಳೆರಾಯ ಮೊದಲಾದ ಹದಿನಾಲ್ಕು ಹದಿನೈದು ಲಾವಣಿಗಳ ಸಂಕ್ಷಿಪ್ತ ವಿಷಯ ವಿಶ್ಲೇಷಣೆ ಮಾಡಿದ್ದಾರೆ.

ಕನ್ನಡದಲ್ಲಿ ಪ್ರಸಿದ್ಧವಾಗಿರುವ ಕೆಲವು ಕಥನಗೀತಗಳನ್ನು ವಿಶ್ಲೇಷಿಸಿ ಕೊನೆಗೆ ಹೀಗೆ ಹೇಳಿದ್ದಾರೆ.

"ಕನ್ನಡದ ಲಾವಣಿಗಳನ್ನು ಒಟ್ಟಾರೆ ನೋಡಿದಾಗ ಕೆಲವು ವಿಶಿಷ್ಟ ಲಕ್ಷಣಗಳು ಉಬ್ಬಿ ಕಾಣುತ್ತವೆ. ಬ್ಯಾಲೆಡ್ಡುಗಳಂತೆ ಇಲ್ಲಿ ಕುಣಿತ ಕಡ್ಡಾಯವಲ್ಲ. ಗೇಯತೆ ಅನಿವಾರ್ಯ ಛಂದೋ ವೈವಿಧ್ಯತೆ ಇಲ್ಲಿಯ ಹೆಚ್ಚುಗಾರಿಕೆ..... ಕಥೆ ಹಠಾತ್ತನೆ ಪ್ರಾರಂಭವಾಗುತ್ತದೆ. ವರ್ಣನೆಗಳ ಭಾರವಿಲ್ಲ ಸಾರಸಂಗ್ರಹಣ ಮತ್ತು ಸಂಕ್ಷಿಪ್ತತೆ ಸಾಮಾನ್ಯ ನಿಮಯಗಳ ಶೃಂಗಾರ ವೀರ ಅದ್ಭುತ ಇಲ್ಲಿ ಪ್ರಧಾನರಸಗಳು... ಭಾಷೆ ಸಾಮಾನ್ಯವಾಗಿ ದೇಶಿ ಲಘುಲಾವಣಿಗಳಲ್ಲಿ ಕಥಾಂಶವೂ ಕಡಿಮೆ....."

ಮುಂದಿನ ಘಟ್ಟದಲ್ಲಿ ದೇಜಗೌ ಅವರು ನೀಳ್ಗವನ ಖಂಡಕಾವ್ಯಗಳ ಸ್ವರೂಪ ವೈಶಿಷ್ಟ್ಯಗಳನ್ನು ಪರಿಚಯಾತ್ಮಕವಾಗಿ ವಿವರಿಸಿದ್ದಾರೆ. ಜಾನಪದೀಯ ಧಾಟಿಯಲ್ಲಿ ಮೂಡಿಬಂದಿರುವ ವಿಶಿಷ್ಟ ಜಾತಿಯ ಜಾನಪದಗಳನ್ನು "ನೀಳ್ಗವನಗಳೆಂದೂ ಕಥನ ಕವನಗಳೆಂದೂ" ಕರೆಯಬಹುದು. ಜನಪದ ಸಾಹಿತ್ಯದಲ್ಲಿ ಕಥನ ಕವನಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ..... ನೇರವಾಗಿ ಕಥೆ ಹೇಳುತ್ತ ಹೋಗುವುದೇ ಇವುಗಳನ್ನು ರಚಿಸಿದ ಕವಿಗಳ ಗುರಿಯಾಗಿದೆ. ಎಂಬ ಡಾ. ಎಂ.ಎಸ್.ಸುಂಕಾಪುರ ಅವರ ಅಭಿಪ್ರಾಯ ಗಮನಾರ್ಹವಾದದ್ದು ಎಂದಿದ್ದಾರೆ ದೇಜಗೌ.

ಹಬ್ಬ ಹರಿದಿನಗಳಲ್ಲಿ ಬೇಸಗೆಯ ಸಮಯದಲ್ಲಿ ವಿರಾಮವಾಗಿ ಬೇಸರವಿಲ್ಲದೆ ಕಾಲ ಕಳೆಯಬೇಕಾದಾಗ, ಕಥಾಕಾಲಕ್ಷೇಪ ಅನಿವಾರ್ಯವಾದಾಗ ನೀಳ್ಗವನವಾಗಲಿ, ಲಾವಣಿಯಾಗಲಿ, ಸಾಕಾಗುವುದಿಲ್ಲ. ಒಂದು ರಾತ್ರಿಯಲ್ಲ, ನಾಲ್ಕಾರು ರಾತ್ರಿಗಳ ತನಕ

ಕಥೆ ಹರಿದರೂ ಸಮನೆ ಸಾಮಾನ್ಯರಿಗೆ ನೀತಿ ಧರ್ಮ ತತ್ತ್ವ ಬೋಧೆ ಸೊಗಸು ಕಥೆ ಚಮತ್ಕಾರವಾಗಿದ್ದರೆ ಅದ್ಭುತಗಳಿಂದ ಕೂಡಿದ್ದರೆ ವೀರರೌದ್ರ ಕರುಣಾರಸಗಳಿಂದ ತುಂಬಿದ್ದರೆ ಅವರು ನಾಲಿಗೆ ಚಪ್ಪರಿಸುತ್ತಾರೆ. ಆಖ್ಯಾನ ಉಪಖ್ಯಾನಗಳಿದ್ದರಂತು ಅವರು ರೋಮಾಂಚನಗೊಳ್ಳುತ್ತಾರೆ. ಅಂಥ ದೀರ್ಘವಾದ ರಚನೆಗಳನ್ನು 'ಖಂಡಕಾವ್ಯ'ಗಳೆಂದು ಕರೆಯಬಹುದು ಎಂದಿದ್ದಾರೆ.

ಅನೇಕ ಗಾಯಕರು ಹಿಮ್ಮೇಳ ಮುಮ್ಮೇಳ ಹಾಗೂ ವಾದ್ಯ ವೃಂದದೊಡನೆ ಅನೇಕ ರಾತ್ರಿ ಹಾಡಿ, ಕುಣಿದು ಜನಮನವನ್ನು ತಣಿಸುವುದುಂಟು. 'ಇಂಥ ಸುವಿಸ್ತಾರ ರಚನೆಗಳನ್ನು ಜನಪದ ಕಾವ್ಯಗಳೆಂದೂ ಖಂಡಕಾವ್ಯಗಳೆಂದೂ ಹೆಸರಿಸಬಹುದೆಂದು ಜೀಶಂಪ ಅವರು ನುಡಿದಿದ್ದಾರೆ. ಆದರೆ ಉತ್ತರದೇವಿ, ಈರೋಬಿ, ನಾಗವ್ವ ಹುಳಿಯಾರು ಕೆಂಚಮ್ಮ, ಹೊನ್ನಮ್ಮ, ಸಂಪನ್ನೆ, ಚಿಕ್ಕೋಳು ಹಿರಿದಿಮ್ಮವ್ವ ಕೊಂತಮ್ಮ – ಕೃತಿಗಳ ಸಂಕಲನವನ್ನು ಜಾನಪದ ಖಂಡಕಾವ್ಯಗಳ ಎಂದು ಕರೆದಿರುವುದು ಸಮಂಜಸವಾಗಿ ತೋರುವುದಿಲ್ಲ ಎಂದು ದೇಜಗೌ ಅಭಿಪ್ರಾಯಪಟ್ಟಿದ್ದಾರೆ. ಡಾ.ರಾಗೌ ಅವರು ಜನಪದ ರಾಮಾಯಣವನ್ನು 'ಲಾವಣಿ ಮಹಾಕಾವ್ಯ' ಎಂದು ಕರೆದಿದ್ದಾರೆ.

ಜನಪದ ಮಹಾಕಾವ್ಯದ ಲಕ್ಷಣಗಳನ್ನು ಗುರುತಿಸುವ ದೇಜಗೌ "ಮಲೇಮಾದೇಶ್ವರ ಹಾಗೂ ಮಂಟೇಸ್ವಾಮಿಗಳನ್ನು ಕುರಿತ ಜನಪದ ಪದ್ಯ ಗದ್ಯ ಕಥನಕಾವ್ಯ ಪ್ರಸಿದ್ಧವಾಗಿವೆ. ಇವುಗಳನ್ನು ಲಾವಣಿಗಳೆಂದೋ ಕಥನಗೀತೆಯೆಂದೋ ಕರೆಯುವುದು ಅನುಚಿತಕಾರ್ಯ. ಬದಲಿಗೆ ಅವನ್ನು ಧೈರ್ಯವಾಗಿ ಜನಪದ ಮಹಾಕಾವ್ಯಗಳೆನ್ನಬಹುದು" ಎಂದಿದ್ದಾರೆ. ಸಾಂಪ್ರದಾಯಕ ಮತ್ತು ಆಲಂಕಾರಿಕ ಭಾಷೆಯಲ್ಲಿ ಅಸಾಧಾರಣ ವ್ಯಕ್ತಿಗಳ ಸಾಹಸ ಕೃತ್ಯಗಳನ್ನು ಕಥನರೂಪದಲ್ಲಿ ವರ್ಣಿಸಿದಾಗ "ಜಾನಪದಮಹಾಕಾವ್ಯ"ವಾಗುತ್ತದೆ.

ಕೆಲವು ಪುರಾಣಕಥೆಗಳ ಮತ್ತು ವೃತ್ತಿಗಾಯಕರು ಎಂಬ ಉಪಶೀರ್ಷಿಕೆಗಳ ಅಡಿಯಲ್ಲಿಯೂ ಕನ್ನಡ ಕೆಲವು ಪ್ರಸಿದ್ಧ ಕಥನ ಗೀತಗಳನ್ನು ನಿದರ್ಶನವಾಗಿ ಕೊಟ್ಟಿದ್ದಾರೆ.

ಭರತಖಂಡದಲ್ಲಿ ರಾಜಸ್ಥಾನದ ಬೋಪರು, ಪಂಜಾಬಿನ ಭಟ್ಟರು ಮತ್ತು ಥಾದಿಗಳು, ಮಧ್ಯಪ್ರದೇಶದ ಗೊಂಡರು, ಒರಿಸ್ಸಾದ ಯೋಗಿಗಳು, ಬಂಗಾಳದ ಬಾಉಲರು, ಕಥಕರು, ವಾಚಕರು, ಕಬಿವಾಲರು, ಉತ್ತರಪ್ರದೇಶದ ರಾಮರು, ಮಹಾರಾಷ್ಟ್ರದ ಗೊಂದಲಿಗರು, ವಾಸುದೇವ ವಗ್ಗಯ್ಯಗಳು, ಅಸ್ಸಾಮಿನ ಬರಾಗಿಗಳು, ಆಂಧ್ರಪ್ರದೇಶದ ಬುಕ್ರ ಕಥಾಕಾರರು ಕೇರಳದ ಪೂರಕ್ಕಳಿಗಳು, ಕರ್ನಾಟಕದ ಹೆಳವರು,

ದೊಂಬಿದಾಸರು, ಗೊಂದಲಿಗರು, ನೀಲಗಾರರು ಮೊದಲಾದವರು[೧] ಜನಪದ ಕಥನಕಾವ್ಯಗಳ ಹುಲುಸಿಗೂ ವ್ಯಾಪಕತೆಗೂ ಕಾರಣರಾಗಿದ್ದಾರೆ.

ದಕ್ಷಿಣ ಕರ್ನಾಟಕದ ವೃತ್ತಿಗಾಯಕರನ್ನು ಸ್ಥೂಲವಾಗಿ ಧಾರ್ಮಿಕ ಮತ್ತು ಲೌಕಿಕ ಕಥೋಪಜೀವಿಗಳೆಂದು ಜೀಶಂಪ ಅವರೇ ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ತಮ್ಮ ಸಂಪ್ರದಾಯದಲ್ಲಿ ಕುಲಕ್ರಮಾಗತವಾಗಿ ಬಂದಿರುವ ಆರಾಧ್ಯ ದೇವತೆಗಳ ಮೇಲಣಗೀತೆಗಳನ್ನು ಗಾನಿಸುತ್ತಾರೆ. ಆಯಾಯ ದೇವತೆಗಳ ಒಕ್ಕಲು ಜನ ಅವರ ಜೀವನೋಪಾಯಕ್ಕೆ ದಾರಿ ಮಾಡುತ್ತಾರೆ. ಕಂಸಾಳೆಯವರು ಅಥವಾ ಮಾದಯ್ಯನ ಗುಡ್ಡರು ಮಾದೇಶ್ವರರನ್ನು ಕುರಿತು ಹಾಡಿದರೆ ನೀಲಗಾರರು ಮಂಟೇಸ್ವಾಮಿಯನ್ನೂ, ಚೌಡಿಕೆಯವರು ಮತ್ತು ಗೊಂದಲಿಗರು ಎಲ್ಲಮ್ಮನನ್ನೂ, ಗೊರವರು ಅಥವಾ ಗಡಬಯ್ಯಗಳು ಮೈಲಾರಲಿಂಗನನ್ನು, ಗಣೆಯವರು ಜುಂಜಪ್ಪನನ್ನು ಕುರಿತು ಸಂಗೀತ ಕೃಷಿಯಲ್ಲಿ ತೊಡಗುತ್ತಾರೆ.[೨]

ಐತಿಹ್ಯ-ಪುರಾಣಗಳು ಎಂಬುದು ಮುಂದಿನ ಅಧ್ಯಾಯ ಇದರ ಸ್ವರೂಪವನ್ನು ಹದಿನೈದು ಇಪ್ಪತ್ತು ಪುಟಗಳಷ್ಟು ಪರಿಮಿತಿಯಲ್ಲಿ ಮುಗಿಸಿ ಐದನೆಯ ಅಧ್ಯಾಯದಲ್ಲಿ 'ಕುಣಿತ' ಮತ್ತು 'ಬಯಲಾಟ'ಗಳ ಸರಳವಾಗಿಯೂ, ಧಾಟಿಗಳಲ್ಲಿ ಏಕತೆಯನ್ನು ಪಡೆದೂ ಪ್ರಚಾರ ಇರುವುದರ ಬಗೆಗೆ ದೇಜಗೌ ಹೇಳಿದ್ದಾರೆ. ಉತ್ತರ ಭಾರತದ ವಿವಿಧ ಪ್ರಾಂತಗಳಲ್ಲಿ ರೂಢಿಯಲ್ಲಿರುವ ಹಲವು ಬಗೆಯ ನೃತ್ಯ ಪ್ರಕಾರಗಳನ್ನು ಅವರು ಪರಿಚಯಿಸಿದ್ದಾರೆ. ಅವುಗಳನ್ನು 'ಮಣಿಪುರ ನೃತ್ಯ' ಜಗದ್ವಿಖ್ಯಾತವಾಗಿದೆ. ರಾಸಲೀಲ ಮತ್ತು ಲಾಯಿಹರೋಬ ಬಹುಜನಪ್ರಿಯವಾದ ನೃತ್ಯಗಳು.

ದೇಜಗೌ ಅವರು ತಮ್ಮ ಸುಧೀರ್ಘ ಜಾನಪದ ಪರಿವೀಕ್ಷಣತೆ ವ್ಯಾಪ್ತಿಯಲ್ಲಿ ಭಾರತದಾದ್ಯಂತ ಪ್ರಾದೇಶಿಕವಾಗಿ ಖ್ಯಾತಿ ಪಡೆದಿರುವ ಸಾಂಪ್ರದಾಯಿಕ ನೃತ್ಯ ಕಲೆಗಳ ಬಗ್ಗೆ ಚರ್ಚಿಸಿದ್ದಾರೆ. ಜನಪದ ಸಾಹಿತ್ಯ ಮನುಷ್ಯನ ಮನಸ್ಸಿನ ವಿಭಿನ್ನತೆಯಂತೆಯೇ ಭಿನ್ನ ರೀತಿಯಲ್ಲಿ ಪ್ರಪಂಚದಾದ್ಯಂತ ಹರಡಿವೆ. ಭಾರತ ದೇಶವು ಹಲವು ಸಂಸ್ಕೃತಿ, ಸಂಪ್ರದಾಯಕ ತವರೂರು. ಇಲ್ಲಿನ ಉಡುಗೆ - ತೊಡುಗೆ, ರೀತಿ-ನೀತಿ ಗಳಂತೆಯೇ ಪ್ರತಿಯೊಂದು ಭಾಷಾಪ್ರಾಂತ್ಯವು ತನ್ನದೇ ಆದ ಸ್ವಂತಿಕೆಯ ಜಾನಪದ ನೃತ್ಯ ಕಲೆಗಳಿಗೆ ಹೆಸರುವಾಸಿಯಾಗಿವೆ. ದೇಜಗೌ ಅವರು ಭಾರತದಲ್ಲಿನ ಪ್ರಮುಖ ಜಾನಪದ ನೃತ್ಯಗಳನ್ನು ಪರಿಚಯಿಸುವಂತೆಯೇ ಅವುಗಳ ಹಾವಭಾವ, ವೇಷಭೂಷಣಗಳನ್ನು

---

೧. ಜೀಶಂಪ ಅವರ ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು ಗ್ರಂಥದಲ್ಲಿ ಪು. ೧೨೨ ರಿಂದ ೧೨೪ರವರೆಗೆ

೨. ಜಾನಪದ ಮಹಾಸಂಪುಟ, ಲೇ. ದೇಜಗೌ, ಪು. ೧೭೪-೧೭೫

ಇತರ ಜನಪದ ಕಲೆಗಳಿಗೆ ತುಲನೆ ಮಾಡುವುದರ ಮೂಲಕ ಅವುಗಳ ಸ್ಥಾನಮಾನವನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಅಸ್ಸಾಮಿನ ಖಾಸಿ ಬೆಟ್ಟಗಳಲ್ಲಿ ನೋಂಗ್ ಕ್ರೆಮ್, ಸುರ್ಮಾ ಕಣಿವೆಯಲ್ಲಿ ನಾವೆನೃತ್ಯ, ಕುಕ್ರಿ ಅಥವಾ ವರಸೆ ಅಪಾಯಕಾರಿಯಾದ ಕುಣಿತ. ಹೆಚ್ಚುಕಡಿಮೆ ನಮ್ಮಲ್ಲಿಯ ಕತ್ತಿವರಸೆಯನ್ನು ನೆನಪಿಗೆ ತರುತ್ತದೆ.

'ಖ್ವರಿಂಗ್' ಎಂಬ ಭೂತ ಉಚ್ಚಾಟನೆಗಾಗಿ ಅಸ್ತಿತ್ವಕ್ಕೆ ಬಂದದ್ದು ಮಿಝೋರಾಮಿನ 'ಚೆರಾವ್ ನೃತ್ಯ'. ಅಸ್ಸಾಮಿನ 'ಬಿಹುಕುಣಿತ' ನಾನಾ ಬಗೆಯಾದದ್ದು. ಬೊಹಾಗ್ ಮಾಘ್ ಮತ್ತು ಕತಿ ಎಂಬ ಹೆಸರುಗಳಿಂದ ಬಹು ಹಬ್ಬ ವರ್ಷದಲ್ಲಿ ಮೂರು ಸಾರಿ ನಡೆಯುತ್ತದೆ.

ಬಂಗಾಳದಲ್ಲಿ ಪ್ರಖ್ಯಾತವಾಗಿರುವ ನೃತ್ಯಗಳು 'ಮೈಮೆನ್‌ಸಿಂಗ್' ಪ್ರದೇಶದಲ್ಲಿ ರೂಢಿಯಲ್ಲಿವೆ. ವಿನೋಧಾತ್ಮಕವಾದ ಬುರಾಬುರಿ (ಮುದುಕ-ಮುದುಕಿ), ರಾಧಾಕೃಷ್ಣ, ಹರಪಾರ್ವತಿ, ಗಂಗಾ ಮೊದಲಾದ ನೃತ್ಯಗಳು ಜನಮನ್ನಣೆಗೆ ಪಾತ್ರವಾಗಿವೆ. ಜೆಸ್ಸೂರ್ ಜಿಲ್ಲೆಯ ರಾಜಘಾಟ್ ಹಳ್ಳಿಯಲ್ಲಿ ಹೆಂಗಸರು ವ್ರತನೃತ್ಯ ನಟಿಸುತ್ತಾರೆ. 'ಬಾವುಲ್' ಎಂಬ ಗೀತನೃತ್ಯ ಯಾವೊಂದು ಋತುವಿಗೂ ಸೀಮಿತವಾಗದೆ ಎಂದಾದರೂ ಅಭಿನಯಿಸಬಹುದಾದ್ದು. ಹಿಂದುಳಿದ ಜನರಲ್ಲಿ ಬಳಕೆಯಲ್ಲಿರುವ 'ರೈಬೇಷೆ' ಎಂಬ ನೃತ್ಯವನ್ನು ವೀರಗುಣಿತವೆಂದು ಕರೆಯಬಹುದು. ಜೆಸ್ಸೂರು ಮತ್ತು ಖುಲ್ನ ಪ್ರದೇಶದ 'ಧಾಲಿ' ಎಂಬ ಖಡ್ಗ ನೃತ್ಯವೂ ಅಂಥದೇ. ಮಹಮ್ಮದೀಯರಲ್ಲಿ ರೂಢಿಯಲ್ಲಿರುವ 'ಮೊಹರಂ' ಮತ್ತು ಕರ್ಬಲಾ ನೃತ್ಯಗಳೂ ಉಲ್ಲೇಖನೀಯವಾಗಿವೆ.

ಉತ್ತರ ಪ್ರದೇಶದಲ್ಲಿ ಸಾರ್ವತ್ರಿಕವಾಗಿ ಜನಪ್ರಿಯತೆಯನ್ನು ಸಂಪಾದಿಸಿರುವ ರಾಸಲೀಲೆ 'ಕಥಕ್' ಶೈಲಿಯನ್ನನುಸರಿಸುತ್ತದೆ. 'ಕಥಕ್' ಎಂದರೆ ಕಥೆ ಹೇಳುವವನು. ಪಿಚಕಾರಿಯನ್ನು ಹಿಡಿದುಕೊಂಡು ಆಡುವ ಹೋರಿ ನೃತ್ಯದಲ್ಲಿ ಹೆಂಗಸರಿಗೆ ಪ್ರಮುಖಸ್ಥಾನ. ವರ್ಷಕಾಲದ ಪ್ರಾರಂಭದಲ್ಲಿ, ನಾನಾ ನೇತ್ರಗಳಿಗೆ ಹಬ್ಬವನ್ನುಂಟು- ಮಾಡುವ ಮಳೆ ಸುರಿದು ಬಿಸಿಲುಜಾರಿ, ಹೊಸಬಾಲು ತಲೆದೋರುವಾಗ ಜೂಲಾ ಗೀತಗಳೊಂದಿಗೆ ಕಜ್ರಿನೃತ್ಯ ಪ್ರಾರಂಭವಾಗುತ್ತದೆ. ಇಲ್ಲಿ ಪಾತ್ರವಹಿಸುವವರು ದೇವದಾಸಿಯರು. ಊರ ಹೊರಗೆ ವಾಸಿಸುವ ಬಂಜಾರರು ರಾತ್ರಿ ವೇಳೆಯಲ್ಲಿ ಬೆಂಕಿ ಹಾಕಿಕೊಂಡು 'ಬಂಜಾರನೃತ್ಯ'ವನ್ನು ಕುಣಿಯುತ್ತಾರೆ.

ಸ್ಥಿರ ನಿಯಮಗಳಿಲ್ಲದಿರುವುದು ಪಂಜಾಬಿನೃತ್ಯಗಳ ಹಿರಿಯ ಲಕ್ಷಣ. ವೀರ ಪೌರುಷ ಉತ್ಸಾಹಗಳು ಎಲ್ಲ ಪಂಜಾಬಿ ನೃತ್ಯಗಳನ್ನು, ಸ್ಫುರಿಸುವ ಸಂಗತಿಗಳು. ಭಂಗ್ರಾ ಗಂಡಸರ ಕುಣಿತವಾದರೆ 'ಗಿದ್ಧ' ಹೆಂಗಸರ ನೃತ್ಯ. ಜ್ಹುಮಾರ್ ಮತ್ತು ಸಮ್ಮಿ

ನೃತ್ಯಗಳಲ್ಲಿ ಹೆಂಗಸರು ಗಂಡಸರು ಕೂಡಿ ಭಾಗವಹಿಸುತ್ತಾರೆ. 'ಕಿಕ್ಲಿ' ಎನ್ನುವುದೊಂದು ಹೆಣ್ಣುಮಕ್ಕಳ ಆಟ. ಪಂಚನದಿಗಳ ಉಗಮಸ್ಥಾನವಾದ 'ಕುಲುಕಣಿವೆ'ಯಲ್ಲಿ ಬೇಸಿಗೆ ಕಾಲ ಬಂತೆಂದರೆ ಎಲ್ಲೆಲ್ಲೂ ಸಂತೆ ಜಾತ್ರೆಗಳ ಸಡಗರ.

'ಗಾರ್ಭಾ' ಗುಜರಾತಿನ ರಾಷ್ಟ್ರೀಯ ನೃತ್ಯವೆಂದು ಕರೆಯಲಾಗಿದೆ. ಗಾರ್ಭಾ ಎನ್ನುವುದು ಹಿನ್ನೆಲೆಯ ಸಂಗೀತಕ್ಕೆ ಹೆಸರು. ಗಡಿಗೆಗೆ 'ಗರ್ಬಿ' ಎಂದು ಗುಜರಾತಿನಲ್ಲಿ ಹೆಸರು. 'ದಾಂಧರ್' ರಾಜಾಸ್ತಾನದಲ್ಲಿ ದಿವಾಳಿ ಹಬ್ಬದಲ್ಲಿ ನಡೆಯುವ ಕುಣಿತ. ಒರಿಸ್ಸಾದ ಪ್ರಸಿದ್ಧ ನೃತ್ಯ 'ಚೌ', ಸೆರೈಕಲಾ ಎಂಬ ಪ್ರಾಂತ್ಯದಲ್ಲಿ ವಸಂತೋತ್ಸವ ಸಮಯದಲ್ಲಿ ನಡೆಯುವ ನೃತ್ಯ; ಶೈವ ಸಂಪ್ರದಾಯಕ್ಕೆ ಸೇರಿದ್ದು. 'ಚೌ' ಎಂದರೆ ಮುಖವಾಡ. ತಾಂಡವ, ಮಯೂರ, ಧಿಬರ (ಮೀನುಗಾರರ ನೃತ್ಯ), ಕುರಂಗ, ಶಬರ ಮೊದಲಾದ ನೃತ್ಯಗಳು ವೈಯಕ್ತಿಕವಾದುವು. ಇಬ್ಬರೆ ನರ್ತಿಸುವ ಅಸ್ತ್ರದ್ವಂದ್ವ, ಚಂದ್ರಭಾಗಾ, ವಾಸುಕಿ, ಗರುಡ, ರಾಧಾಕೃಷ್ಣ ಎಂಬ ನೃತ್ಯಗಳು ಇವೆ; 'ಸತ್ತವರ ಎಲುಬುಗಳನ್ನು ಹೂಳುವಾಗ ನಡೆಸುವ 'ಹಾರ್‌ಬೋರಿ' ನೃತ್ಯಗಳು ಇವೆ. ಕೃಷಿ ವ್ಯಾಪಾರಗಳಿಗೆ ಸಂಬಂಧಪಟ್ಟ 'ಕರಮ್' ನೃತ್ಯಗಳು ಚಾಲ್ತಿಯಲ್ಲಿವೆ.

ಮಧ್ಯಪ್ರದೇಶದ ದಕ್ಷಿಣ ಬಸ್ತಾರಿನ ಸಿಂಗ್‌ಮರಿಯರೆಂಬ ಬುಡಕಟ್ಟಿನಲ್ಲಿ 'ಗೌರ್' ಎಂಬ ನೃತ್ಯ ಪ್ರಸಿದ್ಧವಾಗಿದೆ. ಗೌರ್ ಎಂದರೆ ಕಾಡೆಮ್ಮೆ. ಹುಲ್ಕಿ, ಕರ್ಷಣ್ ಮತ್ತು ಮಂದ್ರಿ ಅವರಲ್ಲಿ ಚಾಲ್ತಿಯಲ್ಲಿರುವ ಇತರ ನೃತ್ಯಗಳು. ದ್ರಾವಿಡ ಜನಾಂಗಕ್ಕೆ ಸೇರಿದವರಾದ ಗೋಂಡಿಗಳಲ್ಲಿ 'ಕರ್ಮ' ನೃತ್ಯ ಮನ್ನಣೆ ಪಡೆದಿದೆ. ಚತೀಸ್‌ಘರ್ ವಿಭಾಗದಲ್ಲಿ ಹೆಂಗಸರೇ ಅಭಿನಯಿಸುವ ನೃತ್ಯಕ್ಕೆ 'ಸೂಆ ಅಥವಾ ಸುಗ್ಗ' ಎಂದು ಹೆಸರು. ಸೂಆ ಎಂದರೆ ಗಿಣಿ.

ವಿಂಧ್ಯಪ್ರದೇಶದ ಪುರುಷ ಭಿಲ್ಲರಲ್ಲಿ 'ಭಗೋರಿಯಾ' 'ಗವಾರ್‌ಗೇರ್' ಕುಣಿತಗಳೂ, ಸ್ತ್ರೀಭಿಲ್ಲವರಲ್ಲಿ 'ಲೂರ್' ಮತ್ತು ಪಾಳಿ' ನೃತ್ಯಗಳು ರೂಢಿಯಲ್ಲಿವೆ.

ಅಸ್ಸಾಮಿನ ಬಿಹೂ ಕುಣಿತ, ಮಝೋರಾಮಿನ 'ಚೆರಾನ್‌ನೃತ್ಯ', ಬಂಗಾಲದ ಬುರಾಬುರಿ, ಬಾವುಲ್, ರೈಬೇಷೆ, ಥಾಲಿ, ನೃತ್ಯಗಳೂ ಉತ್ತರಪ್ರದೇಶದ 'ರಾಸಲೀಲೆ' 'ಕಥಕ್' ಶೈಲಿಯನ್ನು ಅನುಸರಿಸುವ ರೀತಿ, ಪಂಜಾಬಿನಲ್ಲಿ 'ಭಾಂಗ್ರಾ' ಗಂಡಸರ ನೃತ್ಯ ಗಿಡ್ಡ ಹೆಂಗಸರ ನೃತ್ಯವೆಂದು ವಿಭಾಗಿಸಿ ಅವುಗಳ ವಿಶಿಷ್ಟತೆ ಗುರುತಿಸಿರುವಂತೆಯೇ ಗುಜರಾತಿನ 'ಗಾರ್ಭಾ', ರಾಜಾಸ್ಥಾನದ 'ದಾಂಧರ್', ಒರಿಸ್ಸಾದ 'ಚೌ', ಮಧ್ಯಪ್ರದೇಶದಲ್ಲಿನ 'ಗೌರ್' ನೃತ್ಯ, ಮಹಾರಾಷ್ಟ್ರದ ಪುಗಡಿ'....... ಎಂಬ ಹಲವು ಜಾನಪದ ನೃತ್ಯಗಳ ಬಗ್ಗೆ ಪ್ರಸ್ತಾಪಿಸಿ ಜನಸಾಮಾನ್ಯರ ನಡುವೆ ಅವುಗಳ ಜೀವಂತ

ಪ್ರದರ್ಶನವನ್ನು ವಿವರಿಸಿದ್ದಾರೆ. ಒಂದು ಭಾಷೆ, ಪ್ರಾಂತ್ಯವು ತನ್ನದೇ ಆದ ಸ್ವಂತಿಕೆಯ ಅಂಶಗಳನ್ನು ಒಳಗೊಂಡಿರುವಂತೆಯೇ ಅವು ಇತರ ರಾಜ್ಯ ಪರಿಸರಗಳಿಗಿಂತ ಭಿನ್ನವಾಗಿರುತ್ತವೆ. ಅಂತೆಯೇ ಅವುಗಳ ಜಾನಪದೀಯ ಸೊಗಡುಗಳು ಸಹ ಜನಮನದಲ್ಲಿ ಶಾಶ್ವತ ಸ್ಥಾನಮಾನ ಪಡೆದಿರುತ್ತವೆ.

ಉತ್ತರ ಭಾರತವು ಪ್ರಧಾನವಾಗಿ ಆರ್ಯ ಸಂಸ್ಕೃತಿಯಿಂದ ಕೇಂದ್ರೀಕೃತ-ವಾದರೂ ದಕ್ಷಿಣ ಭಾರತವು ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಶಿಷ್ಟ ಸ್ಥಾನಮಾನ ಪಡೆದಿರುವಂಥದ್ದು. ಭಾಷೆ, ಸಂಸ್ಕೃತಿ, ಪರಿಸರ, ಜನರ ರೀತಿನೀತಿಗಳಲ್ಲಿ ಹೋಲಿಕೆಗಳಿದ್ದರೂ ಜಾನಪದ ಹಿನ್ನಲೆಯಲ್ಲಿ ತನ್ನದೇ ಆದ ಜಾನಪದ ನೃತ್ಯಕಲೆಗಳಿಂದ ಪ್ರಸಿದ್ಧಿ ಪಡೆದಿವೆ. ದ್ರಾವಿಡರು ಸಂಪ್ರದಾಯಸ್ಥರಾದ್ದರಿಂದ ಅನೇಕ ಹೊಸ ಶೈಲಿಯ ನೃತ್ಯಗಳಿಗೆ ಕಾರಣಕರ್ತರಾಗಿದ್ದಾರೆ.

ಆಂಧ್ರಪ್ರದೇಶದ 'ಕೂಚಿಪುಡಿ' ರಾಷ್ಟ್ರೀಯ ನೃತ್ಯವೆಂದು ಗಣನೆಗೊಂಡಿದೆ. ಅದು ಮೂಲತಃ ಜಾನಪದ ನೃತ್ಯವಾದರೂ ಭರತನಾಟ್ಯದ ಸಂಪರ್ಕದಿಂದ ಪರಿಷ್ಕಾರಗೊಂಡಿದೆ. ಕೇರಳದ ಮೋಹಿನಿಅಟ್ಟಂ, ಕಥಕ್ಕಳಿ, ಕೇರಳದ ಕೀಲಾಟ್ಟಮ್, ಕರ್ನಾಟಕದ ಯಕ್ಷಗಾನ..... ಮುಂತಾದ ನೃತ್ಯಕಲೆಗಳ ಬಗೆಗೆ ಚರ್ಚೆಮಾಡಿ ಕಥಕ್ಕಳಿಗೂ ಯಕ್ಷಗಾನಕ್ಕೂ ಸಂಬಂಧವಿದೆಯೇ? ಎಂದು ಪ್ರಶ್ನಿಸಿ ನೃತ್ಯ ಅಭಿನಯ, ಕಥೆ ರಂಗಸಜ್ಜಿಕೆ ಪಾತ್ರಧಾರಿಗಳು ವೇಷಭೂಷಣಗಳು ಪ್ರತಿಯೊಂದು ಅಂಶದಲ್ಲಿಯೂ ಸಾಮ್ಯವಿದೆ ಎಂದು ಪರಾಮರ್ಶಿಸಿದ್ದಾರೆ. ಎರಡು ಸಾಹಿತ್ಯ ಕೃತಿಗಳ ಪರಸ್ಪರ ಹೋಲಿಕೆಯಿಂದ ಅವುಗಳ ಸ್ಥಾನಮಾನ ತಿಳಿಯುವಂತೆ ಜನಪದ ಕಲೆಗಳ ತುಲನೆಯಿಂದ ಮೂಲ ಜಾನಪದ ಕಲೆಯ ಮೇಲೂ ಬೆಳಕು ಚೆಲ್ಲಬಹುದಾಗಿದೆ. ದೇಜಗೌ ಅವರು ಭಾರತದಲ್ಲಿನ ಅನೇಕ ಜಾನಪದ ನೃತ್ಯಕಲೆಗಳ ಬಗ್ಗೆ ಚರ್ಚಿಸಿದರೂ ಕೂಡ 'ಭರತನಾಟ್ಯ' ನೃತ್ಯಕಲೆಯ ಬಗ್ಗೆ ಮೌನತಾಳಿದ್ದಾರೆ. ಕರ್ನಾಟಕ, ತಮಿಳುನಾಡು ರಾಜ್ಯಗಳಲ್ಲಿ ಭರತನಾಟ್ಯ ಕಲೆಯೂ ಪ್ರಸಿದ್ಧಿ ಪಡೆದಿರುವಂತೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಇಂದು ತನ್ನ ಪ್ರಖ್ಯಾತಿಯನ್ನು ಜನಮನ್ನಣೆಯನ್ನೂ ಪಡೆದಿರುವ ವಿಶಿಷ್ಟ ನೃತ್ಯ ಕಲೆಯಾಗಿದೆ.

ಕರ್ನಾಟಕ ರಾಜ್ಯವು ಪ್ರಾಕೃತಿಕವಾಗಿ ಶ್ರೀಮಂತಿಕೆಯನ್ನು ಪಡೆದಿರುವಂತೆಯೇ ಜಾನಪದ ನೃತ್ಯಕಲೆಗಳ ತವರೂರೆ ಆಗಿದೆ. ಉತ್ತರಕರ್ನಾಟಕ, ದಕ್ಷಿಣಕರ್ನಾಟಕ-ದಾದ್ಯಂತ ಅಗಾಧವಾದ ಜನಪದ ನೃತ್ಯಕಲೆಗಳು ಜೀವಂತಿಕೆ ಹೊಂದಿವೆ. ರಂಗದ ಕುಣಿತ, ಕೀಲುಕುದುರೆ, ನಂದಿಕೋಲು ಕುಣಿತ, ಸೋಮನಕುಣಿತ, ಕರಪಾಲಮೇಳ,

ಭಾಗವಂತಿಕೆಮೇಳ, ಕರಗದ ಕುಣಿತ, ವೀರಭದ್ರಕುಣಿತ, ವೀರಮುಖಿ, ಡೊಳ್ಳುಕುಣಿತ, ಗೊಂದಲಿಗರ ಮೇಳಗಳೂ ನಾಗಾನೃತ್ಯ, ಸಿಂಹನೃತ್ಯ, ಕೊಡಗಿನ ಹುತ್ತರಿ ಕುಣಿತ, ಬೊಳಕಾಟ (ಯುದ್ಧನೃತ್ಯ) ಪರೆಯತಳಿ..... ಇನ್ನೂ ಮುಂತಾದ ಜಾನಪದ ನೃತ್ಯಕಲೆಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನದ ಜೀವಂತ ಭಾಗವಾಗಿರುವ 'ಭೂತಾರಾಧನೆ'ಯಲ್ಲಿ ಕುಣಿತಕ್ಕೆ ವಿಶೇಷ ಪ್ರಾಶಸ್ತ್ಯವಿದೆ. ಶಿವರಾಮಕಾರಂತರು 'ಯಕ್ಷಗಾನ ಕುಣಿತವನ್ನು ಶೃಂಗಾರ ಅಥವಾ ಲಾಸ್ಯ ಲಘುಭಾವ ಅಥವಾ ಹಾಸ್ಯ, ವೀರ ಇಲ್ಲವೆ ರೌದ್ರ ಎಂದು ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ.

ಜನಪದ ಸಾಹಿತ್ಯದ ಮತ್ತೆರಡು ಪ್ರಕಾರಗಳಾದ ಗಾದೆ ಹಾಗೂ ಒಗಟುಗಳ ಬಗೆಗೆ ಕನ್ನಡದಲ್ಲಿ ಹಲವಾರು ಜನ ವಿದ್ವಾಂಸರು ಪರಿಶೀಲನೆ ನಡೆಸಿದ್ದಾರೆ. ಸಂಕ್ಷಿಪ್ತತೆ, ಸಾರಗ್ರಾಗ್ಯತೆ, ತೀಕ್ಷ್ಣತೆ ಮತ್ತು ಜನಪ್ರಿಯತೆ. ಈ ನಾಲ್ಕು ಗಾದೆಯ ಪ್ರಮುಖ ಲಕ್ಷಣಗಳೆಂದು 'ಜೇಮ್ಸ್.ಎ. ಕೆಲ್ಲೋ ಹೇಳಿದ್ದಾರೆ.[೧] ಒಂದು ರಾಷ್ಟ್ರದ ಪ್ರತಿಭೆ, ಬುದ್ಧಿ ಚಮತ್ಕಾರ ಮತ್ತು ಸತ್ವಗಳನ್ನು ಅದರ ಗಾದೆಗಳಲ್ಲಿ ಕಾಣಬಹುದು ಎಂದು ಬೇಕನ್ ಹೇಳಿದ ಮಾತು ಉತ್ಪ್ರೇಕ್ಷೆಯಲ್ಲ. ಗಾದೆಗಳ ಕರ್ತೃತ್ವ ಅಜ್ಞಾತವಾಗಿರುವಂತೆ ಅವುಗಳ ಜನ್ಮ ಕಾಲ ಮತ್ತು ಸ್ಥಳಗಳೂ ಅಜ್ಞಾತವೆಂಬುದು ಸುಸ್ಪಷ್ಟ. "ಕುಜಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಎಂದು ಕವಿರಾಜಮಾರ್ಗ ಕನ್ನಡಿಗರನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದಾನೆ.

ಗಾದೆ ಒಗಟುಗಳು ಒಂದು ಜೀವಂತ ಸಮಾಜದ ಹಾಗೂ ಜನಜೀವನದ ಸ್ಪಷ್ಟ ಪ್ರತಿರೂಪಗಳು, ಸಂಸ್ಕೃತದ ಗಾಥಾ ಶಬ್ದ ಪ್ರಾಕೃತದ ಮೂಲಕ ಕನ್ನಡಕ್ಕೆ ಬಂದಿದೆ. ಇಡೀ ಜಗತ್ತೇ ಗಾದೆಗಳ ವಸ್ತುವಾದ್ದರಿಂದ ಅವುಗಳಿಗೊದಗಿದ ವಸ್ತುವಿಲ್ಲವಾದ್ದರಿಂದ ಗಾದೆಗಳ ವರ್ಗೀಕರಣ ಕಷ್ಟ. ಹಬ್ಬಹರಿದನಗಳಲ್ಲಿ ಬಿಡುಬೀಸಾಗಿ ಬಾಹ್ಯ ಪ್ರಪಂಚವನ್ನು ಮರೆತು ಕುಳಿತು ಹರಟೆ ಹೊಡೆಯುವಾಗ, ಹೊಲಗದ್ದೆಗಳಲ್ಲಿ ನಾಟಿಹಾಕುವಾಗ ಅಳಿಯ ಮಾವನ ಮನೆಗೆ ಬಂದಾಗ, ಬೆಳದಿಂಗಳ ರಾತ್ರಿ ಕಣ ಕಾಯುವಾಗ ಸವಾಲುಗಳಿಗೆ ಜವಾಬು ನೀಡುವಾಗ ಒಗಟುಗಳು ಸರಾಗವಾಗಿ ಜನರ ಬಾಯಲ್ಲಿ ಹರಿದಾಡುತ್ತದೆ.

ಯಾವ ಮಟ್ಟದ ಸಾಹಿತ್ಯವೇ ಆಗಲಿ ಮೂಲತಃ ಸಮಷ್ಟಿ ಸೃಷ್ಟಿ. ಹತ್ತುಜನರ ಚಿಂತನ, ನೂರು ಜನದ ಮಂಥನ, ಸಾವಿರ ಜನರ ಕಲ್ಪನೆ, ಒಬ್ಬನ ಪ್ರತಿಭಾ ಮೂಷೆಯಲ್ಲಿ ಪಾಕಗೊಂಡ ಅನುಭವವಾಗಿ ಸಾಹಿತ್ಯರೂಪದಲ್ಲಿ ಪ್ರಕಟಗೊಳ್ಳುತ್ತದೆ. 'ಕವಿಯ ಹೃದಯವೊಂದು ವೀಣೆ, ಲೋಕವದನು ಮಿಡಿವುದು" ಎಂಬ ಮಹಾಕವಿ

೧. ಜಾನಪದ ಮಹಾಸಂಪುಟ ಲೇ. ದೇಜಗೌ, ಪು. ೨೫೪-೨೫೫

ಸುಭಾಷಿತ ಸಹ ಮೇಲಿನ ಮಾತಿಗೆ ಬೆಂಬಲವಾಗಿದೆ. ಜಾನಪದ ಸೃಷ್ಟಿಗೂ ಈ ತತ್ವವೇ ಅನ್ವಯಿಸುತ್ತದೆ.

ಭಾವ ಹೆಪ್ಪುಗಟ್ಟಿ ಗೀತೆಯಾಗುವಂತೆ, ಭಾವಬುದ್ಧಿಗಳ ರಸಾಯನದಿಂದ ಗಾದೆಯಾಗುವಂತೆ, ಬುದ್ಧಿ ಹರಳುಗೊಂಡು ಒಗಟಾಗುತ್ತದೆ. ಜಾನಪದ ಸಾಹಿತ್ಯ ಪ್ರಕಾರಗಳಲ್ಲಿ ಮೊದಲು ಹುಟ್ಟಿದ್ದು ಗೀತೆ, ಅನಂತರ ಕಥೆ, ಗಾದೆಗೀತೆಗಳ ಕತೆಗಳ ಜತೆಜತೆಗೆ ಹುಟ್ಟಿರಬಹುದಾದರೂ ಒಗಟಂತೂ ಅವುಗಳಷ್ಟು ಪ್ರಾಚೀನವಲ್ಲ. ಅಂತೆಯೇ ಅವುಗಳಷ್ಟು ಸರ್ವವ್ಯಾಪ್ತಿಯಲ್ಲ, ಪ್ರಾಚೀನ ರೂಪಗಳೆಲ್ಲ ಒಗಟುಗಳು; ಅವು ಸಂಕೇತಾತ್ಮಕವಾದುವು. ಗಾದೆ ಬಳಸದ ಜನರಿಲ್ಲ; ಒಗಟು ಎಲ್ಲರಿಗೂ ಎಟುಕು-ವಂಥದಲ್ಲ. ಆದರೆ ಅದನ್ನು ಕುತೂಹಲದಿಂದ ಕೇಳುವ ಮಂದಿ ಇಲ್ಲದಿಲ್ಲ. ಗಾದೆಯ ಭಾಷೆ ಸ್ಫಟಿಕ ನಿರ್ಮಲ; ಒಗಟಿನ ಭಾಷೆ ಸಾಂಕೇತಿಕ, ರಹಸ್ಯಾತ್ಮಕ ಒಗಟುಗಳೆಲ್ಲ ಸವಾಲಿನ ಮತ್ತು ಪ್ರಶ್ನೆಯ ರೂಪದಲ್ಲಿರುತ್ತವೆ. ಪ್ರಶ್ನೆ ಸ್ಪಷ್ಟವಾಗಿರಬಹುದು ಅಥವಾ ಗೂಢವಾಗಿರಬಹುದು. ಇತರ ಜನಪದ ಸಾಹಿತ್ಯ ಪ್ರಕಾರಗಳಂತಲ್ಲದೆ ಒಗಟು ಒಂದು ರೀತಿಯಲ್ಲಿ ಪ್ರಯತ್ನ ಪೂರ್ವಕವಾದ ಸೃಷ್ಟಿಯೆಂದು ಹೇಳಬೇಕಾಗುತ್ತದೆ.

ಕೆಲವು ಕಡೆ ಜನಪ್ರಿಯ ಗೀತೆಗಳು ಒಗಟುಗಳ ರೂಪದಲ್ಲಿರುತ್ತದೆ. ಅವು ಹೆಣ್ಣಿನ ಅಥವಾ ಗಂಡಿನ ಬುದ್ಧಿ ಶಕ್ತಿಯನ್ನು ಒರೆನೋಡುವ ಸಾಧನಗಳಾಗಿವೆ. ಅನೇಕ ಬುಡಕಟ್ಟು ಜನರ ವಿವಾಹಗಳಲ್ಲಿ ಇವುಗಳಿಗೆ ವಿಶೇಷ ಸ್ಥಾನವುಂಟು. ಹೆಣ್ಣು ಕರೆತರುವ ಸಲುವಾಗಿ ಗಂಡಿನ ಪ್ರತಿನಿಧಿ ಅವಳ ಮನೆಗೆ ಹೋದಾಗ ಅವಳ ಕಡೆಯವರು ಒಗಟುಗಳನ್ನೊಡ್ಡುವ ಪದ್ಧತಿ 'ಗೋಂಡಿ' ಜನರಲ್ಲಿದೆ. ಅದನ್ನು ಬಿಡಿಸದೇ ಅವನು ಹೆಣ್ಣನ್ನೊಯ್ಯಲಾರ.

ಶಿಷ್ಟಪದ ಒಗಟುಗಳು ಜಾನಪದ ಒಗಟುಗಳಷ್ಟು ಜನಪ್ರಿಯವಾದುದವಲ್ಲ. ಅವುಗಳು ಅನುಭವದ ಆಳದಿಂದ ಬಂದವಾಗಿದ್ದು ರಹಸ್ಯಜ್ಞಾನವನ್ನು ಒಳಗೊಂಡಿರುತ್ತವೆ. ಅಲ್ಲಮ ಅಕ್ಕಮಹಾದೇವಿ ಸರ್ವಜ್ಞ ಮೊದಲಾದ ಅನೇಕ ಶರಣರು ಇಂಥ ಅನೇಕ ವಚನಗಳನ್ನು ರಚಿಸಿದ್ದಾರೆ. ಅಂತೆಯೇ 'ಕಂತಿಹಂಪನ ಸಮಸ್ಯೆಗಳು, ಹರಿಹರನ 'ಮುಡಿಗೆಯ ಅಷ್ಟಕ' ಮತ್ತು 'ಕನಕನ ಮುಂಡಿಗೆಗಳು' ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಾಗಿವೆ. ಸಮಸ್ಯಾಪೂರಣದ ಸವಾಲು ಕಂತಿ ಪಂಪನ ಸಮಸ್ಯೆಗಳಲ್ಲಿ ಪ್ರಕಟಗೊಂಡಿವೆ.

ಅಭಿನವ ಪಂಪ: 'ದನವಂ ಕಡಿಕಡಿದು ಬಸದಿಗೆಜೆಯುತ್ತಿರ್ದರ್' ಎಂಬ ಒಗಟಿನ ಪ್ರಶ್ನೆಗೆ ಕಂತಿ ಸಮರ್ಥವಾಗಿಯೇ ಉತ್ತರವೀಯುತ್ತಾಳೆ.

ಒಗಟು ಇಷ್ಟು ಜನಪ್ರಿಯವಾದರೂ ಅದರ ನಿಷ್ಪತ್ತಿ ಮಾತ್ರ ಸ್ಪಷ್ಟವಾಗಿಲ್ಲ. ಸಂಸ್ಕೃತದಲ್ಲಿ ಅದಕ್ಕೆ ಸಂವಾದಿಯಾಗಿ ಬ್ರಹ್ಮೋದಯ, ಪ್ರಶ್ನೆ ಅಥವಾ ಪ್ರಶ್ನೋತ್ತರ, ಕೂಟ, ಪ್ರವಾಹ್ಲಿಕಾ ಅಥವಾ ಪ್ರಹೇರಿಕಾ, ವಿವಾದ, ಸಮಸ್ಯಾ, ಗೂಢ, ಹೃದಯಾಲಿಕಾ ಎಂಬ ಮಾತುಗಳಿವೆ. ಮರಾಠಿಯ ಕಲ್ಗಿ-ತುರಾ ಮತ್ತು ಕರ್ನಾಟಕದ ಹರದೇಶಿ-ನಾಗೇಶಿ ಲಾವಣಿಗಳು ಪ್ರಶ್ನೋತ್ತರಗಳಿಗೆ ಸಮನಾದುವು. ಪ್ರಾಕೃತದಲ್ಲಿ ಪ್ರಹೇಲಿಕಾ ಪಹೇಲೀ ಆಗುತ್ತದೆ. ಸಂಸ್ಕೃತದ 'ಬೃಹತ್ಕಥಾ' ಪ್ರಾಕೃತದಲ್ಲಿ 'ವಡ್ಡಕಥಾ ಆಗಿ, ಅನಂತರ ದಕ್ಷಿಣ ಭಾರತದ ಭಾಷೆಗಳಲ್ಲಿ ಒಡಕಥೆ ಅಥವಾ ಒಗಟು, ವಿದಿಕಥಾ, ವಿದಿಕಾದಾಯ್ ಆಗಿ ರೂಪಾಂತರ ಹೊಂದಿರಬೇಕೆಂದು ದುರ್ಗಾಭಾಗವತರು ಸಾಧಿಸಿದ್ದಾರೆ.[೧]

'ಒಗಟು' ಎಂಬ ಪದ ಪ್ರಾಚೀನ ಕಾಲದಿಂದ ಒಗಟೆ, ಒಗಂಟೆ, ಒಗಂಟು, ಒಗಟು ಎಂಬ ಪಾಠಾಂತರಗಳನ್ನು ಹೊಂದಿ ಪ್ರಸಿದ್ಧವಾಗಿದೆ, ಲೋಕಮಾನ್ಯವಾಗಿದೆ. ಇವುಗಳಲ್ಲಿ 'ಒಗಂಟು' ಎನ್ನುವ ಪದವೇ ಅತ್ಯಂತ ಹಳೆಯದು. ನಾಗವರ್ಮನ ಕಾವ್ಯಾವಲೋಕನ (೯೯ನೆಯ ಪದ್ಯ)ದಲ್ಲಿ ಈ ಪದ ಬಂದಿದೆ. 'ಒಗಟೆ' ಮೊತ್ತಮೊದಲಿಗೆ ಹದಿಮೂರನೆಯ ಶತಮಾನದ 'ದಶಕುಮಾರ ಚರಿತೆ'ಯಲ್ಲಿ ಬರುತ್ತದೆ ಎಂದು ದೇಜಗೌ ಗುರುತಿಸಿದ್ದಾರೆ.

ದೇಜಗೌ 'ಮಾಟ-ಮಂತ್ರ' ಎಂಬ ಲೇಖನದಲ್ಲಿ ಮಾಟಕ್ಕೆ ಸಂಬಂಧಿಸಿದ ಆಲೋಚನಾ ಸಮುದಾಯವನ್ನೂ, ತರ್ಕವನ್ನೂ ವಿಶ್ಲೇಷಿಸಿ ಅದರ ತತ್ವಗಳನ್ನು ವಿಶದಪಡಿಸಿದ್ದಾರೆ. ಮಾಟದಲ್ಲಿರುವ ಸಕಾರಾತ್ಮಕ ಆಚರಣೆಗಳನ್ನು, ನಕಾರಾತ್ಮಕ ಆಚರಣೆಗಳನ್ನೂ ವಿವರಿಸಿದ್ದಾರೆ. 'ಮಂತ್ರವಿದ್ಯೆಯಾದರೂ ಜಡವಸ್ತುವಲ್ಲ, ನಿಂತ ಮಡುವಲ್ಲ, ಹರಿಯುವ ನದಿ' ಎಂಬುದು ಜನಪದ ಸಂಸ್ಕೃತಿಯ ವಿಷಯದಲ್ಲಿ ಸತ್ಯವೆಂದೇ ಹೇಳಬಹುದು. 'ಮಂತ್ರ ವಿದ್ಯಾತಜ್ಞರೆಲ್ಲರೂ ಸಾಮಾನ್ಯವಾಗಿ ಮೇಧಾವಿ-ಗಳು, ಪ್ರತಿಭಾವಂತರು, ಕಲ್ಪನಾ ಸಮರ್ಥರೆಂಬುದನ್ನು ಮಾತ್ರ ಎಷ್ಟರಮಟ್ಟಿಗೆ ಒಪ್ಪಬಹುದೆಂಬುದು ಚಿಂತನೀಯ. ಮಂತ್ರಗಾರಿಕೆ ಮತಗಳ ಉದಯಕ್ಕೂ ಬುನಾದಿ-ಯಾಯಿತೆಂಬ ಶ್ರೀ ದೇಜಗೌ ಅವರ ಮಾತಿನಲ್ಲಿ ನಿಜವಿದೆ.

ಪುರಾತನ ಪರ್ಷಿಯಾದ ಪುರೋಹಿರನಿಗೆ 'ಮಾಗಿ' ಎಂದು ಹೆಸರು. ಅವನಲ್ಲಿ ಅದ್ಭುತವಾದ ಮಂತ್ರಶಕ್ತಿ ಇತ್ತೆಂದು ಹೇಳಲಾಗಿದೆ. ಆಂಗ್ಲ ಭಾಷೆಯ ಮ್ಯಾಜಿಕ್ ಎನ್ನುವ ಮಾತು 'ಮಾಗಿ' ಎಂಬ ಪದದಿಂದ ಬಂದಿದೆ. ಪ್ರಕೃತಿಯನ್ನೂ ಭೂತಪ್ರೇತಾದಿಗಳನ್ನೂ ರಹಸ್ಯ ರೀತಿಯಲ್ಲಿ ಅಧೀನದಲ್ಲಿಟ್ಟುಕೊಂಡು ಘಟನೆಗಳ

---

೧. ಜಾನಪದ ಮಹಾಸಂಪುಟ, ಲೇ. ದೇಜಗೌ, ಪು. ೨೭೬

ಗತಿಯನ್ನು ಮಾರ್ಪಡಿಸಲಾಗುವುದೆಂಬ ಮಿಥ್ಯಾಭಿಪ್ರಾಯವುಳ್ಳ ವಿದ್ಯೆಯೇ ಮ್ಯಾಜಿಕ್ ಎಂದು ಅದರ ಅರ್ಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ - ಕನ್ನಡ ನಿಘಂಟು ವಿವರಿಸಿದೆ. ಮಂತ್ರ, ವಿದ್ಯೆ, ಮೋಡಿ, ಮಾಟ, ಇಂದ್ರಜಾಲ, ಯಕ್ಷಿಣಿ, ಕಣ್ಕಟ್ಟು, ಗಾರುಡಿವಿದ್ಯೆ, ಅಭಿಚಾರ, ಬೇಳುವೆ ಇವೆಲ್ಲ ಸಂವಾದಿ ಪದಗಳೆಂದು ಆ ನಿಘಂಟು ಸೂಚಿಸಿದೆ.

ಭಾರತ ದೇಶದಾದ್ಯಂತ ಹರಡಿಕೊಂಡಿರುವ ಹಬ್ಬಗಳನ್ನು ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಗ್ರಾಮೀಣ ಹಬ್ಬಗಳೆಂದು ಮೂರು ಬಗೆಗಳಾಗಿ ವಿಂಗಡಿಸಬಹುದು. ದೀಪಾವಳಿ, ಸ್ವಾತಂತ್ರ್ಯೋತ್ಸವ, ನವರಾತ್ರಿ, ಗಾಂಧಿಜಯಂತಿ ಮೊದಲಾದವು ರಾಷ್ಟ್ರೀಯ ಹಬ್ಬಗಳು; ಕೇರಳದ ಓಣಂ, ತಮಿಳುನಾಡಿನ ಪೊಂಗಲ್, ಕರ್ನಾಟಕದ ಬಸವಜಯಂತಿ ಮುಂತಾದವು ಪ್ರಾದೇಶಿಕ ಹಬ್ಬಗಳು; ಗ್ರಾಮದೇವತೆಗಳ ಹಬ್ಬಗಳೆಲ್ಲ ಗ್ರಾಮೀಣ ಹಬ್ಬಗಳು ಪಂಜಾಬಿನ ಟಿಕ್ಕಾ, ಲೋರಿ, ವೈಶಾಖೀ ಹಬ್ಬಗಳಿರುವಂತೆ ಒಂದೊಂದು ರಾಜ್ಯದಲ್ಲಿಯೂ ನಾಲ್ಕಾರು ಪ್ರಾದೇಶಿಕ ಹಬ್ಬಗಳಿರಬಹುದು. ನಂಬಿಕೆ ಮತ್ತು ಸಂಪ್ರದಾಯಗಳು ದೇಶದಿಂದ ದೇಶಕ್ಕೆ ಪ್ರಸರಣಗೊಳ್ಳಬಹುದಾದರೂ ಹಬ್ಬ-ಹರಿದಿನಗಳು ದೂರದೇಶಗಳಿಗೆ ಪಯಣಿಸುವುದಿಲ್ಲ. ಅವು ಜನ್ಮತಾಳಿದ ದೇಶ-ಗಳಲ್ಲಿಯೇ ಉಳಿಯುತ್ತವೆ, ಇಲ್ಲವೆ ಅಳಿಯುತ್ತವೆ.

'ಜಾನಪದ ಅಧ್ಯಯನದಲ್ಲಿ ಆಸಕ್ತರ ಗಮನವನ್ನು ಸೆಳೆಯುವ ಮುಖ್ಯ ಅಧ್ಯಾಯಗಳು 'ಸಸ್ಯ ಜಾನಪದ' ಹಾಗೂ 'ಪ್ರಾಣಿಜನಪದ', ಮಾನವ ನಿಸರ್ಗ ವನ್ನೊಲಿಸಿಕೊಂಡು ಅದರ ಪ್ರಯೋಜನವನ್ನು ಪಡೆದು ಸುಖವಾಗಿ ಬಾಳುವುದರಲ್ಲಿ ಸಸ್ಯ ಜಾನಪದದ ಪ್ರಮುಖ ಪಾತ್ರವಿದೆ. ವೈಜ್ಞಾನಿಕ ಯುಗದ ಮಾನವನೂ ತನ್ನ ಕ್ಷೇಮ ಸೌಕರ್ಯಗಳಿಗಾಗಿ ಸಸ್ಯ ಸಂಪತ್ತನ್ನು ಅವಲಂಬಿಸುತ್ತಿದ್ದಾನೆ. ಆದರೆ ವೈಜ್ಞಾನಿಕ ಯುಗದ ಮಾನವನು ಪಡೆಯುವ ಆಶ್ರಯಕ್ಕೂ, ಜನಪದರು ಬಯಸುವ ಆಶ್ರಯಕ್ಕೂ ವ್ಯತ್ಯಾಸವಿದೆ. ತನ್ನ ಬದುಕಿಗೆ ಆಧಾರಭೂತವಾಗಿರುವ ಅನಿವಾರ್ಯ ವಾಗಿರುವ ಸಸ್ಯಗಳ ಬಗ್ಗೆ ಆದಿಮಾನವನು ಗೌರವ, ವಾತ್ಸಲ್ಯ, ಭಯಾಶ್ಚರ್ಯಗಳನ್ನು ಹೊಂದಿದ್ದ ಸಸ್ಯಗಳ ಬಗೆಗಿನ ಮನುಷ್ಯನ ನಂಬಿಕೆಗಳು ಸಸ್ಯಗಳಿಗೆ ಮಾಡುವ ಪೂಜೆಗಳು ಮಾನವನ ಧರ್ಮಕರ್ಮಗಳಿಗೆ ಮರವನ್ನು ಕೇಂದ್ರವಾಗಿ ಮಾಡಿಕೊಂಡ ವಿಷಯಗಳನ್ನು ಕುರಿತು ಪ್ರೊ. ದೇಜಗೌ ಆಸಕ್ತಿಯನ್ನು ಕೆರಳಿಸುವಂತೆ ಬರೆದಿದ್ದಾರೆ.

ದೇಜಗೌ ಅವರು ಸಸ್ಯಗಳ ಬಗೆಗೆ ಮಾನವ ಸಮುದಾಯ ಹೊಂದಿದ ಪೂಜ್ಯ ಭಾವನೆಗಳು, ನಂಬಿಕೆಗಳನ್ನೂ ವಿವರಿಸಿದ್ದಾರೆ. ಉತ್ತರ ಅಮೆರಿಕೆಯ ಕೆಲವು

ಇಂಡಿಯನ್ನರು ಪ್ರತಿಯೊಂದು ನೈಸರ್ಗಿಕ ವಸ್ತುವಿನಲ್ಲಿಯೂ ಚೈತನ್ಯ ಅಥವಾ ಛಾಯೆಯಿಂದ ಎಂದು ನಂಬಿದ್ದಾರೆ. ಮುಗ್ಧ ಜನರ ತೋಳು ಕತ್ತರಿಸುವುದೆಷ್ಟು ಪಾಪಕರವೋ ಮರಗಳ ಕೊಂಬೆ ಕಡಿಯುವುದೂ ಅಷ್ಟೇ ದೂಷ್ಯವೆಂದು ಸಯಾಮಿನ ಸನ್ಯಾಸಿಗಳು ತಿಳಿದಿದ್ದಾರೆ. ಮರ ಕಡಿದವನ ಸುಳಿಯೇ ಸತ್ತು ಹೋಗುತ್ತದೆಂಬ ನಂಬಿಕೆ ಇಂದಿಗೂ ಹಳ್ಳಿಗಾಡಿನ ಜನರಲ್ಲಿದೆ. ಜತೆಗೂಡಿ ಬೆಳೆದ ಆಲ ಮತ್ತು ಅರಳಿ ಮರಗಳಿಗೆ ಸೂಕ್ತ ಸಮಯದಲ್ಲಿ ವಿವಾಹ ಮಾಡುವುದು ಒರಿಸ್ಸಾ ಪ್ರಾಂತ್ಯದ ಪದ್ಧತಿ. ಅರಳಿ ಮತ್ತು ಬೇವಿನ ಮರಗಳನ್ನು ಒಂದೇ ಕಡೆ ಬೆಳಸಿ ಅವುಗಳಿಗೆ ಮದುವೆ ಮಾಡುವ ಪರಿಪಾಠ ಕರ್ನಾಟಕದ್ದು. ಅಂತೆಯೇ ವಿಧವೆಯನ್ನು ಮದುವೆಯಾಗಲಿರುವ ಮುಂಬಯಿ ಪ್ರಾಂತ್ಯದ ಆದಿವಾಸಿ ಜನಾಂಗದ ಬ್ರಹ್ಮಚಾರಿ ಮೊದಲು ಶಮಿ ಅಥವಾ ರೂಯಿ ಮರವನ್ನು ಮದುವೆಯಾಗಬೇಕು. ನಿಜವಾದ ಮದುವೆಗೆ ಮುಂಚೆ ಮುಂಡ ಹೆಣ್ಣನ್ನು ಮಹುವಾಮರಕ್ಕೂ, ಗಂಡನ್ನು ಮಾವಿನ ಮರಕ್ಕೂ ಮದುವೆ ಮಾಡಿಸಬೇಕು. ಇದೊಂದು ವಿವಾಹ ಶಾಸ್ತ್ರ. ದುಷ್ಟ ಶಕ್ತಿಗಳ ಚೇಷ್ಟೆಯಿಂದ ಪಾರಾಗುವುದೇ ಇಂಥ ಅಣುಕು ಮದುವೆಯ ಉದ್ದೇಶವಿದ್ದಂತೆ ತೋರುತ್ತದೆ. ಮಕ್ಕಳು ಹುಟ್ಟಿದಾಗ ಮರ ನೆಡುವುದೂ ಮರದ ಬೆಳವಣಿಗೆಯ ಆಧಾರದಿಂದ ಮಗುವಿನ ಭವಿಷ್ಯವನ್ನು ನಿರ್ಧರಿಸುವುದೂ ರೋಮನ್‌ರಲ್ಲಿದ್ದ ಪದ್ಧತಿ.ಪವಿತ್ರಾರಣ್ಯದಲ್ಲಿ ಒಂದು ಮರ ಕಡಿದರೂ ವನದೇವತೆಗಳು ಕೋಪಗೊಂಡು ಮಳೆ ತಡೆಯುತ್ತಾರೆಂಬ ಭಾವನೆ ಅಸ್ಸಾಮಿನ ಮುಂಡಾರಿ ಜನಾಂಗದಲ್ಲಿದೆ.

ಮತದ ಇತಿಹಾಸದಲ್ಲಿ ವೃಕ್ಷಪೂಜೆಯೊಂದು ಮೈಲಿಗಲ್ಲು. ಅದು ಚಾಲ್ತಿಯಲ್ಲಿಲ್ಲದ ದೇಶವಿಲ್ಲ. ಪ್ರಾಚೀನ ಕಾಲದಿಂದ ರೋಮನ್ನರು 'ಆಲಿವ್ ಮರವನ್ನು, ಗ್ರೀಕರು ಸೀಡರ್ ಹೆಸರಿನ ದೇವದಾರು ವೃಕ್ಷವನ್ನೂ, ಐಗುಪ್ತರು ತಮರಿಸ್ಕ್ ಎನ್ನುವ ಮರವನ್ನೂ ಪೂಜಿಸುವುದು ರೂಢಿಯಲ್ಲಿದೆ. ಅವರ ದೃಷ್ಟಿಯಲ್ಲಿ ಮರ ದೇವರ ಸಂಕೇತ. ಇಂದಿಗೂ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವೃಕ್ಷೋತ್ಸವ ಅದ್ದೂರಿಯಿಂದ ನಡೆಯುತ್ತದೆ.

ಸಸ್ಯ ಸಮಾಜವನ್ನು ಕುರಿತ ನಂಬಿಕೆಗಳನ್ನು ಕುರಿತ ಅಧ್ಯಯನ ನಡೆಸು-ವುದಾದರೆ ಅನೇಕ ನೂತನ ಸತ್ಯಾಂಶಗಳು ಹೊರಬೀಳುವ ಸಂಭವವಿದೆ ಎಂಬುದು ಸತ್ಯ. ಪ್ರೊ.ದೇಜಗೌ ಹೇಳಿದಂತೆ "ಜಾನಪದವೆಲ್ಲ ಅನಾಗರಿಕವಾದದ್ದು, ಮೌಢ್ಯ ಮೂಲವಾದದ್ದು ಎನ್ನುವ ತಿಳಿವಳಿಕೆಯೇ ಅನಾಗರಿಕವಾಗುತ್ತದೆ, ಮೌಢ್ಯವಾಗುತ್ತದೆ."[೧]

---

೧. ರಸಷಷ್ಟಿ, ಸಂ. ಕೆ.ಸಚ್ಚಿದಾನಂದಯ್ಯ, ಪು. ೪೯೪.

ಸಸ್ಯ ಜಾನಪದದಂತೆಯೇ ಪ್ರಾಣಿ ಜಾನಪದವೂ ಜಾನಪದ ವಿದ್ವಾಂಸರು ಅಧ್ಯಯನ ಮಾಡಬೇಕಾದ ಪ್ರಮುಖ ವಿಭಾಗವಾಗಿದೆ. ಮಾನವ ಕಾಡಿನಲ್ಲಿ ಪ್ರಾಣಿಗಳ ಜತೆಯಲ್ಲಿ ವಾಸಮಾಡುತ್ತಿದ್ದ ಕಾಲವಿತ್ತು. ಇಂದಿಗೂ ಮಾನವ ಜೀವನದಲ್ಲಿ ಪ್ರಾಣಿಗಳ ಪಾತ್ರ ಅತ್ಯಂತ ಮಹತ್ತ್ವದ್ದು. ಆದಿಮಾನವ ಮುಗ್ಧ ಮನಸ್ಸು ಭಯ ವಿಸ್ಮಯಗಳಿಂದ ಕೂಡಿತ್ತು. ಹಾವು, ಹುಲಿ, ಸಿಂಹ, ಚಿರತೆ ಮುಂತಾದ ಕ್ರೂರ ಪ್ರಾಣಿಗಳನ್ನು ಕಂಡಾಗ ಅವುಗಳ ಬಗೆಗೆ ಅವನು ಚಿತ್ರ ವಿಚಿತ್ರವಾದ ಅಭಿಪ್ರಾಯಗಳನ್ನು ತಳೆದು ಅನೇಕಾನೇಕ ಕಥೆಗಳು ರೂಪುಗೊಂಡಿರಬೇಕು.

ಅಂದಿನ ಅನಾಗರಿಕರಿರಲಿ, ಇಂದಿನ ಸಾಮಾನ್ಯ ಮಾನವ ಸಹ ಪ್ರಾಣಿವರ್ಗ ಮತ್ತು ಮನುಷ್ಯ ವರ್ಗಗಳಲ್ಲಿ ಹೆಚ್ಚು ವ್ಯತ್ಯಾಸವನ್ನು ಕಂಡಿಲ್ಲ. ಹಸು, ಕರು, ಕುರಿಗಳಿಗೆ ತನ್ನ ಮಾತು ತಿಳಿಯುತ್ತದೆಂದು ಅವನು ಊಹಿಸಿಕೊಂಡಿದ್ದಾನೆ. 'ಮನುಷ್ಯನಂತೆಯೇ ಪ್ರಾಣಿಗಳಲ್ಲಿಯೂ ಭಾವಕೋಶವಿದೆ. ಅವನೊಡನಾಡಿಗಳಾಗಿ ಬೆಳೆದ ಪ್ರಾಣಿಗಳಲ್ಲಿ ವಾತ್ಸಲ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆಗಳು ತನ್ನಲ್ಲಿರುವುದಕ್ಕಿಂತ ಅಧಿಕ ಪ್ರಮಾಣದಲ್ಲಿವೆ ಎನ್ನುವ ವಿಷಯ ಬಹು ಹಿಂದೆಯೇ ಅವನಿಗರಿವಾಗಿರಬೇಕು. ದನಕರುಗಳಿಗೆ ಸಾಕಿದವನ ದನಿ ಮಾತ್ರವಲ್ಲ, ಬೆವರಿನ ವಾಸನೆಯೂ ತಿಳಿಯುತ್ತದೆ. ಅವನ ಆಜ್ಞೆಯಂತೆ ಅವು ವರ್ತಿಸುತ್ತವೆ[೧] ಎಂದು ಸರಾಗವಾಗಿ ಗ್ರಾಮೀಣ ಪರಿಸರವನ್ನು ತಳಸ್ಪರ್ಶಿಯಾಗಿ ಚಿತ್ರಿಸುವ ದೇಜಗೌ ಅವರಿಗೆ ಅವುಗಳಲ್ಲಿ ಗಾಢವಾದ ಅನುಭವ-ವಿದ್ದದ್ದನ್ನು ನಾವು ಮನಗಾಣ ಬಹುದಾಗಿದೆ.

ಪ್ರಾಣಿಗಳಿಗೆ ಸಂಬಂಧಿಸಿದ ನಂಬಿಕೆಗಳು ಒಂದೊಂದು ಪ್ರದೇಶದಲ್ಲಿಯೂ ಅಪಾರವಾಗಿದೆ. ಭೌಗೋಳಿಕ ಸಂಗತಿಗಳು, ಆರ್ಥಿಕ ಕಾರಣಗಳು ಹಾಗೂ ಅಲ್ಲಲ್ಲಿಯ ಜನರ ಮನೋಧರ್ಮ ಸಂಸ್ಕಾರಗಳು ನಂಬಿಕೆಗಳ ಉಗಮವನ್ನು ನಿರ್ಧರಿಸುತ್ತವೆ. ಯೂರೋಪಿನಲ್ಲಿ 'ನವಿಲುಗರಿ ದುರದೃಷ್ಟದ ಸಂಕೇತ. ದನಕರುಗಳನ್ನು ಹಾವೋ, ಚೇಳೋ ಕಡಿದರೆ 'ಸತ್ತೆ ಅಥವಾ 'ಬಳ್ಳಿ' ಮುಟ್ಟಿತೆನ್ನುತ್ತಾರೆ. ಮಧ್ಯ ಯೂರೋಪು ಮತ್ತು ಸ್ಕಾಂಡಿನೇವಿಯಾ ದೇಶಗಳಲ್ಲಿ ತೋಳವನ್ನು 'ತೋಳ' ಎಂದು ಕರೆಯದೇ 'ಮೌನಿ' ಎಂದೋ 'ಕಾಡೋಡಿ' (Wood-runner) ಎಂದೋ ಸಂಬೋಧಿಸುತ್ತಾರೆ. ರಷ್ಯನ್ ಭಾಷೆಯಲ್ಲಿ ಕರಡಿ ಎನ್ನುವುದಕ್ಕೆ ಸಂವಾದಿ ಪದ' ಚೇಗ್ಡಿನಿ (Honey-eater) ಎಂದು.[೨]

---

೧. ಜಾನಪದ ಮಹಾಸಂಪುಟ, ಲೇ. ದೇಜಗೌ, ಪು. ೩೯೦

೨. ಅದೇ, ಪು. ೩೯೧

ಭಾರತೀಯರು ಗೋವನ್ನು ತಿನ್ನುವುದಿಲ್ಲ. ಆದರೆ ಅದರಿಂದ ಬಹುವಿಧದ ಪ್ರಯೋಜನ ಅವರಿಗಿದೆ. ಆದ್ದರಿಂದ ಅದು ಅವರಿಗೆ ಪವಿತ್ರ ವಸ್ತುವಾಗಿದೆ. ಉತ್ತರ ಅಮೆರಿಕೆಯ ಇಂಡಿಯನ್ನರು ಕುಲಲಾಂಛನ ಪ್ರಾಯದ ಪ್ರಾಣಿಗಳನ್ನು ಕೊಲ್ಲುವುದಿಲ್ಲ ಗೌರವಿಸುತ್ತಾರೆ. ಮುಸ್ಲಿಮರು ಬಿಸ್ಮಿಲ್ಲ ಮಾಡದೆ ಅಂದರೆ ವಿಧ್ಯುಕ್ತವಾಗಿ ಕೊಲ್ಲದೆ ಪ್ರಾಣಿ ಮಾಂಸವನ್ನು ತಿನ್ನುವುದಿಲ್ಲ ಎಂಬ ಸಂಗತಿ ಅವರ ಪವಿತ್ರ ಭಾವನೆಯಾಗಿದೆ. ಏಸುವನ್ನು ಹೊತ್ತುದ್ದರಿಂದ ಕತ್ತೆ ಪವಿತ್ರ ಪ್ರಾಣಿ ಎಂದು ಕೆಲವರ ಭಾವನೆ. ನೇಪಾಳದಲ್ಲಿ 'ಬಾಘ್' ಜಾತ್ರೆ ಎಂಬ ಹೆಸರಿನಿಂದ ಹುಲಿಯ ಗೌರವಾರ್ಥವಾಗಿ ಪ್ರತಿವರ್ಷ ತಪ್ಪದೇ ಒಂದು ಹಬ್ಬ ನಡೆಸುತ್ತಾರೆ. ಆ ದಿನ ವ್ಯಾಘ್ರಾರಾಧಕರು ಹುಲಿಯ ವೇಷ ಹಾಕಿಕೊಂಡು ಕುಣಿಯುತ್ತಾರೆ.

'ಪ್ರಾಯಶಃ ಮಾನವನ ಪ್ರಪ್ರಥಮ ಪ್ರಾಣಿ ಮಿತ್ರರಲ್ಲಿ 'ನಾಯಿ'ಗೆ ಅಗ್ರಸ್ಥಾನ ಸಲ್ಲಬೇಕೆಂದು ತೋರುತ್ತದೆ. ಭೈರವನ ಮತ್ತೊಂದಂಶವಾದ 'ಭೈರಾನನಿಗೆ ನಾಯಿ ತುಂಬ ಪವಿತ್ರವಾದ ಪ್ರಾಣಿ. 'ಕಾಶಿ'ಯಲ್ಲಿ ನಾಯಿಗಳಿಗೆ ಪ್ರವೇಶಾರ್ಹತೆಯಿರುವ ದೇವಾಲಯ ಅದೊಂದೇ. ತನಗೆ ಮಾರ್ಗದರ್ಶನ ಮಾಡಿದ ನಾಯಿ ಸಹ ಸ್ವರ್ಗಕ್ಕೆ ಬರಬೇಕೆಂದು ಧರ್ಮರಾಯ ಹಠಹಿಡಿದದ್ದು ಮಹಾಭಾರತದಲ್ಲಿ ಬರುತ್ತದೆ. ಶಿವನ ಅವತಾರವೆನ್ನುವ 'ಖಂಡೋಬ' ಮರಾಟರ ದೇವರು. ಪಂಜಾಬಿನ 'ಲೋಹಾರು' ಊರಿನಲ್ಲಿರುವ ಸಮಾಧಿಯೊಂದು ಹಿಂದುಗಳಿಗೆ ಪವಿತ್ರ ಸ್ಥಾನವಾಗಿದೆ. ಯುದ್ಧದಲ್ಲಿ ನಾನಾ ರೀತಿಯಲ್ಲಿ ಸಹಾಯ ಮಾಡಿದ ನಾಯಿಗಳನ್ನು ವಿಜಯಶಾಲಿಗಳಾದ ಥಾಕೂರರು ಅಲ್ಲಿ ಸಮಾಧಿ ಮಾಡಿದ್ದಾರಂತೆ. ಈ ಸಂದರ್ಭದಲ್ಲಿ ಮದ್ದೂರು ತಾಲ್ಲೂಕಿನ ನಾಯಿಯ ಹೆಸರಿನ 'ಆತಕೂರು' ಶಾಸನವನ್ನು ನೆನೆಯಬಹುದು. ನೇಪಾಳದ ಕಿಚಾ ಪೂಜೆಯಲ್ಲಿ ಪ್ರತಿಯೊಂದು ನಾಯಿಯ ಕೊರಳಿಗೂ ಹೂಮಾಲೆ ಹಾಕಿ ಪೂಜಿಸುತ್ತಾರಂತೆ;[೧] ಹೀಗೆ ನಾಯಿಯ ವಿಶಿಷ್ಟತೆಯನ್ನು ಮಾನವನ ಮೇಲಿನ ಅದರ ಅತೀವ ಪ್ರೀತಿಯನ್ನು ದೇಜಗೌ ವಿವರಿಸಿದ್ದಾರೆ.

ಭಾರತೀಯರಲ್ಲಿ ಪ್ರಾಣಿಗಳ ಬಗೆಗೆ ಅನೇಕ ನಂಬಿಕೆಗಳಿವೆ. ಕೆಲವು ಪ್ರಾಣಿಗಳು ಇಷ್ಟ ದೇವತೆಗಳ ವಾಹನಗಳಾಗಿ ಪೂಜನೀಯವಾಗುತ್ತವೆ. ಆದಿ ಮಾನವನ ಕಾಲದಿಂದಲೂ 'ನಾಯಿ' ಮಿತ್ರ ಸ್ಥಾನವನ್ನು ಪಡೆದಿರುತ್ತದೆ. ಸಿಂಹ, ಮೇಕೆ, ಕುದುರೆ, ಕತ್ತೆ, ಗೋವು.... ಮುಂತಾದವು ಜಾನಪದದಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿವೆ. ಭಾರತೀಯ ಸಮಾಜದಲ್ಲಿ ಹಸುವಿಗಿರುವ ಸ್ಥಾನ ಎಲ್ಲರಿಗೂ ತಿಳಿದದ್ದೇ.

---

೧. ಜಾನಪದ ಮಹಾಸಂಪುಟ, ಲೇ. ದೇಜಗೌ, ಪು. ೩೯೪

ಜನಪದ ಸಮಾಜದಲ್ಲಿ ಹಾವಿಗೂ ಒಂದು ಪ್ರತ್ಯೇಕ ಸ್ಥಾನವಿದೆ. ನಮ್ಮ ಸಂಸ್ಕೃತಿಯ ಪ್ರಧಾನಾಂಗವಾಗಿ ಒಂದು ನಾಗ ಸಂಪ್ರದಾಯವೇ ಬೆಳೆದು ಬಂದಿದೆ. ಪ್ರಕೃತಿಯಲ್ಲಿ ಒಬ್ಬನಾಗಿ ಬಾಳು ನಡೆಸಿದ ಆದಿಮಾನವ ಪ್ರಕೃತಿಯ ಸಚೇತನ ಅಂಗಗಳಾದ ಸಸ್ಯಗಳಿಗೂ, ಪ್ರಾಣಿಗಳಿಗೂ ತನ್ನ ಜಾನಪದದಲ್ಲಿ ಪ್ರಮುಖ ಸ್ಥಾನವನ್ನು ಕೊಟ್ಟಿದ್ದು ಆಶ್ಚರ್ಯವೇನಲ್ಲ. ಫ್ರಾನ್ಸ್, ಜರ್ಮನಿ, ಸ್ಲಾವನ್ ... ಮುಂತಾದ ದೇಶಗಳಲ್ಲಿರುವ ಪ್ರಾಣಿಗಳನ್ನು ಕುರಿತ ನಂಬಿಕೆಗಳನ್ನು ಶ್ರೀ ದೇಜಗೌ ಅವರು ಪ್ರಸ್ತಾಪಿಸಿದ್ದಾರೆ.

ದೇಜಗೌ ಅವರ 'ಪರಿಸರ ಜಾನಪದ' ಲೇಖನವು ಕರ್ನಾಟಕ ಜಾನಪದ ಅಕಾಡೆಮಿ ಸಕಲೇಶಪುರದಲ್ಲಿ ನಡೆಸಿದ ವಿಚಾರಗೋಷ್ಠಿಯ ಅಧ್ಯಕ್ಷ ಭಾಷಣವಾಗಿದೆ. ಪ್ರಾಣಿ ಮಾನವ ಸಮೂಹಗಳಿಗಿಂತ ಮೊದಲೇ ಹುಟ್ಟಿದ್ದು ಸಸ್ಯ ಸಮೂಹ. ಪರಿಸರ ನಮ್ಮ ದಿನನಿತ್ಯದ ಕೆಲಸಕಾರ್ಯಗಳ ಏರುಪೇರಿನಿಂದ ಕಲುಷಿತಗೊಳ್ಳುತ್ತಿದೆ. ಪರಿಸರ ಸಮತೋಲನದಿಂದ ಕೂಡಿರದಿದ್ದರೆ ಆಮ್ಲಜನಕದ ಪ್ರಮಾಣ ಕಡಿಮೆಯಾಗಿ, ಇಂಗಾಲದ ಡೈಆಕ್ಸೈಡ್‌ನ ಪ್ರಮಾಣ ಹೆಚ್ಚಾದಾಗ ಓಜೋನ್ ಪದರದ ಬಿರುಕು ಅಗಲವಾಗಿ ಜಗತ್ತು ಅಪಾಯದಂಚನ್ನು ಮುಟ್ಟುತ್ತದೆಂದು ಗಾಬರಿ ವ್ಯಕ್ತಪಡಿಸಿದ್ದಾರೆ.

ನಮ್ಮ ವಿಜ್ಞಾನಿಗಳು ಹೊಸ ಹೊಸ ಆವಿಷ್ಕಾರಗಳಿಗೆ ತೊಡಗಿಸಿಕೊಳ್ಳಬೇಕು. ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಪದಾರ್ಥಗಳ ಪೂರೈಕೆಗೆ ಸಂಶೋಧನೆ ಅವಶ್ಯಕವಾಗಿದೆ. ದೇಜಗೌ ಅವರು ನಮಗೆ ನೀಡಿದ ಸಂದರ್ಶನದಲ್ಲಿ ಕೆಲವು ಹೊಸ ಅಂಶಗಳ ಮೇಲೆ ಸಂಶೋಧನೆ ಅಗತ್ಯ ಎಂದಿದ್ದಾರೆ. ಹಿಂದಿನ ಕಾಲದಲ್ಲಿ ಕ್ಷಾಮ ಬಂದಾಗ ಜನರು ಭೂತಾಳೆ ಗೆಡ್ಡೆ ತಿನ್ನುತ್ತಿದ್ದರೆಂತಲೂ, ಹಾಗೂ ತಾನೇ ಸ್ವತಃ ಪಾಪಾಸುಕಳ್ಳಿಯ ಹಣ್ಣನ್ನು ತಿಂದದ್ದುಂಟು. ಹುಣಸೇಬೀಜದಿಂದ ಹೊಸ ಖಾದ್ಯ ತಯಾರಿಸಬಹುದಾಗಿದೆ. ಗುಣದಲ್ಲಿ ರಾಗಿಯಷ್ಟೇ ಶ್ರೇಷ್ಠವಾದ, ತಂಪಾದ 'ಹಾರಕ' ಆಹಾರದ ಬಗೆಗೂ ಇತ್ತೀಚೆಗೆ ಸಂಶೋಧನೆಗಳು ನಡೆಯಬೇಕಾಗಿದೆ ಎಂದಿದ್ದಾರೆ.

ಅವಶ್ಯಕತೆಗಳನ್ನು ಕನಿಷ್ಠಗೊಳಿಸುವ ಮೂಲಕ ನಾನು ಶ್ರೀಮಂತನಾಗುತ್ತೇನೆಂದ ಥೋರೋನ ಬಗೆಗೂ ಸಣ್ಣದೇ ಸುಂದರವೆಂದು ಹೇಳಿ ಷುಮೇಕರನ ಬಗೆಗೂ ಇವರೀರ್ವರ ಹೇಳಿದನ್ನು ನೈಜ ಜೀವನದಲ್ಲಿ ಸಾಧಿಸಿ ತೋರಿಸಿದ ಗಾಂದೀಜಿಯವರ ಬಗ್ಗೆಯೂ ದೇಜಗೌ ಮಾತನ್ನಾಡಿದ್ದಾರೆ. ಬೀಸುಕಲ್ಲು, ಒನಕೆ, ರುಬ್ಬುಗುಂಡು, ಕುಟ್ಟಾಣಿ, ನಾಡಹೆಂಚು, ಒಡ್ಡರಬಂಡಿ, ಮಣ್ಣಿನ ಮಡಿಕೆ ಕುಡಿಕೆಗಳು ಮತ್ತೆ ಮಾನವನ ಸೇವೆಗೊದಗುವುದುಂಟೆ ಎಂಬ ಪ್ರಶ್ನೆಯನ್ನೆತ್ತಿದ್ದಾರೆ. ಹಾಗೆಯೇ ಮನುಷ್ಯ ಪ್ರಕೃತಿ ಜೊತೆಗೆ ಆರೋಗ್ಯಕರವಾಗಿ ಬದುಕಬೇಕಾದರೆ ಕಡೆಯ ಪಕ್ಷ ಭೂಮಿಯ ಮೂರರಲ್ಲೊಂದು ಪಾಲಾದರೂ ಅರಣ್ಯವಿರಬೇಕು ಎಂದು ಆಶಿಸಿದ್ದಾರೆ.

೨) ಜಾನಪದ ವಾಹಿನಿ

'ಜಾನಪದ ವಾಹಿನಿ' ಗ್ರಂಥವು ಸುಮಾರು ಹದಿನೈದು ಲೇಖನಗಳ ಸಂಕಲನ ಗ್ರಂಥ. ಜನಪದರಲ್ಲಿ ಹಾಸುಹೊಕ್ಕಾಗಿದ್ದ ಅನೇಕ ಜನಪದ ವಿಶಿಷ್ಟ ಲಕ್ಷಣಗಳನ್ನು, ವಿಶೇಷತೆಗಳನ್ನು ಲೇಖನಗಳ ಮೂಲಕ ಅಭಿವ್ಯಕ್ತಿಸಿರುವುದೇ ಆಗಿದೆ. ಜನರಲ್ಲಿ ಪ್ರತಿನಿತ್ಯ ರೂಢಿಯಲ್ಲಿದ್ದ ನಾಟಿವೈದ್ಯ, ಜನಪದರ ಕಾನೂನು, ಜಾನಪದ ಕ್ರೀಡೆ – ಇಂತಹ ಅಂಶಗಳ ಮೇಲೆ ಬೆಳಕು ಚೆಲ್ಲುವಂತಹ ಪ್ರಯತ್ನ ಅನೇಕ ಲೇಖನಗಳ ಮೂಲಕ ಆರಂಭವಾಯಿತು. ಗ್ರಾಮೀಣ ಪರಿಸರದಲ್ಲಿ ಜೀವಂತವಾಗಿರುವ ಅನೇಕ ಕ್ರೀಡೆಗಳು ಬಹುಪ್ರಾಚೀನತಮವಾದ ಇತಿಹಾಸವನ್ನು ಹೊಂದಿವೆ. ಕ್ರೀಡೆ ಮನುಷ್ಯನ ಚೈತನ್ಯವನ್ನು ಉದ್ದೀಪಿಸುವಂತಹ ಪ್ರಕೃತಿದತ್ತವಾದ ವರದಾನವಾಗಿದೆ.

ಪ್ರಾಣಿಗಳಲ್ಲಿ ಸರ್ವಸಾಧಾರಣವಾದ ಸಹಜ ಕ್ರಿಯೆಯೆಂದರೆ ಆಟ. 'ಜಾನಪದ ಕ್ರೀಡೆಗಳು' ಎಂಬ ಶೀರ್ಷಿಕೆಯೇ ವಿಸ್ತಾರವಾದ ವ್ಯಾಪ್ತಿಯನ್ನೊಂದಿದೆ. ಭೂಮಿಯ ಮೇಲೆ ಜನಿಸಿದ ಪ್ರತಿಯೊಂದು ಪ್ರಾಣಿ, ಪಕ್ಷಿಗಳಲ್ಲಿ ಕ್ರೀಡೆಯೆಂಬುದು ಅಂತರ್ಯದಲ್ಲೇ ಸುಪ್ತವಾಗಿದ್ದು ಯಾವ ಕ್ಷಣದಲ್ಲಾದರೂ ಓಯಸಿಸ್ಸಿನಂತೆ ಚಿಮ್ಮುವಂಥದ್ದು. ಕ್ರೀಡೆ ಮಾನಸಿಕ ಸಮತೋಲನವನ್ನುಂಟು ಮಾಡುವಂಥ ಸಿದ್ಧೌಷಧಿ. ಕ್ರೀಡೆ ವ್ಯಾಯಾಮ ಮಾಧ್ಯಮಗಳಲ್ಲ, ಮನರಂಜನೆಯ ಸಾಧನಗಳಲ್ಲ; ಜೀವನದ ಸ್ವಾಭಾವಿಕ ವ್ಯಾಪಾರಗಳು, ಚೈತನ್ಯದ ಕುರುಹುಗಳಾಗಿವೆ.

ಆದಿಮಾನವನ ಆಟಗಳು ಅತ್ಯಂತ ಸರಳವಾಗಿ ವೈವಿಧ್ಯರಹಿತವಾಗಿದ್ದಿರಬೇಕು. ಮರಕೋತಿಯಾಟ, ಕಣ್ಣಾಮುಚ್ಚಾಲೆಯಾಟ, ಕುಸ್ತಿ ಕೋಲಾಟ, ಕತ್ತಿವರಸೆ, ಚೆಂಡಾಟ ಇವೇ ಮೊದಲಾದವು ಪರಿಷ್ಕಾರಗೊಂಡು ಯುದ್ಧ ಕಲೆಯ ಅವಿಭಾಜ್ಯ ಅಂಗ-ಗಳಾಗುತ್ತವೆ. ಮೊದಮೊದಲು ಆಟಗಳು ಬಾಳಿನ ಬೋಳುತನವನ್ನು ಬಗೆಹರಿಸುವ ಮನರಂಜನೆಯ ಸಾಧನಗಳಾಗಿಯೂ ಜತೆಗೆ ಬೌದ್ಧಿಕ ಮತ್ತು ದೈಹಿಕ ಶಕ್ತಿ ಕೌಶಲಗಳನ್ನು ಪರೀಕ್ಷಿಸುವ ಮಾನದಂಡಗಳಾಗಿಯೂ, ಬಳಕೆಯಾಗುತ್ತಿದ್ದಿರಬೇಕು. ಅಷ್ಟೇ ಅಲ್ಲ, ಲೆಕ್ಕದ ಆಟ ಬೌದ್ಧಿಕ ಶಕ್ತಿ ಪರೀಕ್ಷೆಗೂ, ಹುರಿಕುಣಿಕೆಯ ಆಟ ಕೌಶಲ ಪರೀಕ್ಷೆಗೂ, ಗುಂಡೆತ್ತುವ ಆಟ ದೈಹಿಕ ಶಕ್ತಿ ಪರೀಕ್ಷೆಗೂ ಅನುವಾಗಿದ್ದಿರಬೇಕು.

ಪ್ರಾಣಿವಂಶದ ಉಗಮದಷ್ಟೇ ಆಟಗಳು ಪ್ರಾಚೀನವಾಗಿರಬೇಕೆಂಬುದಂತೂ ಸತ್ಯ. ಜೀವ ವಿಕಾಸವಾದಂತೆಲ್ಲ. ಅವು ಮಾರ್ಪಾಟು ಹೊಂದಿರಬೇಕು. ಪ್ರಪಂಚದಲ್ಲಿಯೇ ಪ್ರಾಚೀನ ಲಿಖಿತವೆನಿಸಿಕೊಂಡಿರುವ ವೇದಗಳಲ್ಲಿ ಆಟಗಳ ಪ್ರಸ್ತಾಪಬರುತ್ತವೆ. ಚತುಷಷ್ಟಿ ಕಲೆಗಳಲ್ಲಿ ಜಲಕ್ರೀಡೆ, ವೈದಾಳಿ, ಮಲ್ಲಯುದ್ಧ, ಮೃಗಯಾವಿಹಾರ, ಪಗಡೆ, ನೃತ್ಯ

ಮೊದಲಾದವು ಸೇರ್ಪಡೆಗೊಂಡಿವೆ. ರಾಮಾಯಣ ಮಹಾಭಾರತಗಳಲ್ಲಿ, ಕಾಳಿದಾಸಾದಿ ಕವಿಗಳ ಕೃತಿಗಳಲ್ಲಿ ಕಂದುಕ ಕ್ರೀಡೆಯೇ ಮೊದಲಾದ ಚೆಂಡಾಟಗಳ ವರ್ಣನೆಗಳಿವೆ. ಪಂಪ, ಕುಮಾರವ್ಯಾಸರ ಕೃತಿಗಳಲ್ಲಿ ಮರಕೋತಿಯಾಟ, ಚಿಣ್ಣಿದಾಂಡು ಮೊದಲಾದ ಕ್ರೀಡೆಗಳ ಉಲ್ಲೇಖವಿದೆ. ಇಂದಿಗೂ ಅರೆ ಜೀವದಿಂದುಳಿದಿರುವ, ಗರಡಿಮನೆಗಳೂ ಎಂದೋ ಒಮ್ಮೆ ನಡೆಯುವ ಕುಸ್ತಿ ಪಂದ್ಯಗಳೂ ಗತವೈಭವಕ್ಕೆ ಸಾಕ್ಷಿಯಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕಂಬಳವೂ ಸಹ ಇಂಥದ್ದೆ.

ದೇಜಗೌ ಅವರ ಮಾತಿನಲ್ಲಿ ಗಾಂಭಿರ್ಯವಿದೆ, ಅವರ ವಿಷಯದ ಆಯ್ಕೆ ಆಲೋಚನೆಯಿಂದ ಕೂಡಿರುವಂಥದ್ದು. ಪ್ರಸ್ತುತ 'ಕ್ರೀಡೆ' ಎಂಬ ಪದ ಸಾರ್ವಕಾಲಿಕ–ವಾಗಿದ್ದು ಸಮಾಜದ ಸಂಚಲನಕ್ಕೆ ಕಾರಣವಾಗಿದೆ. ಇಂದು ನಮ್ಮ ನಡುವೆ ಇರುವ ಎಷ್ಟೋ ಕ್ರೀಡೆಗಳು ನಮ್ಮ ನೆನಪಿನಲ್ಲಿದ್ದರೂ ಅವುಗಳನ್ನು ನಿಗದಿತವಾದ ಯಾವ ಹೆಸರುಗಳಿಂದ ಕರೆಯುತ್ತಿದ್ದರೂ ಎಂಬ ಗೊಂದಲಗಳಿವೆ. ಇಂಥ ನೂರಾರು ಕ್ರೀಡೆಗಳ ಸಂಗ್ರಹ ಹಿರಿಯ ಚೇತನಗಳಿಂದ ಪ್ರಾರಂಭವಾಗಿ ಕಿರಿಯ ತಲೆಮಾರಿನ ಜನಪದರಿಗೆ ಪ್ರೇರಣೆಯಾಗುತ್ತದೆ.

ಪ್ರಾಚೀನ ಕಾಲದಿಂದಲೂ ಮಾನವನು ಹೊಸತನಕೆ ತನ್ನನು ಬೇಗ ತೆರೆದುಕೊಳ್ಳುವಂತಹ ಪ್ರವೃತ್ತಿಯವನು. ಪ್ರಾಣಿಪಕ್ಷಿಗಳಿಗೆ ನೈಸರ್ಗಿಕವಾಗಿ ದೇಹದಲ್ಲಾದ ರೋಗರುಜಿನಗಳಿಗೆ ತನ್ನ ಸುತ್ತಮುತ್ತಲಿನ ಪರಿಸರದಿಂದಲೇ ಸರ್ವಕಾಲದಲ್ಲೂ ತಾನೇ ಔಷಧಿಯನ್ನು ಸಜ್ಜುಗೊಳಿಸಿಕೊಳ್ಳುತ್ತಿದ್ದನು. ಕ್ರಮೇಣ ಪ್ರತಿ ಹಳ್ಳಿಗಳಲ್ಲೂ 'ನಾಟಿ' ವೈದ್ಯರೆಂಬ ಹಿರಿಯ ವ್ಯಕ್ತಿ ರೋಗಕ್ಕೆ ಮದ್ದನ್ನು ನೀಡಿ ವಾಸಿಮಾಡುತ್ತಿದ್ದನು. ದೇಜಗೌ ಅವರ 'ವೈದ್ಯ ಜಾನಪದ' ಎಂಬ ಶೀರ್ಷಿಕೆ ಇಂಥಹ ವಿಷಯಗಳ ಮೇಲೆಯೇ ಬೆಳಕು ಚೆಲ್ಲುವಂತಹ ವಿಷಯವಾಗಿದೆ.

ಜೀವಿಗಳ ಪೋಷಣೆಗೆ ಮತ್ತು ರಕ್ಷಣೆಗೆ ಬೇಕಾದ ವಸ್ತುಗಳು ಅವುಗಳ ಜನ್ಮ ಪರಿಸರದಲ್ಲಿಯೇ ದೊರಕುತ್ತವೆಂಬುದು ಪ್ರಾಚೀನ ಜಾನಪದ ಕಲ್ಪನೆ' (ಪುಟ ೪೨೧). ಸಸ್ಯಹಾರಿ ಪ್ರಾಣಿಗಳು ತಿನ್ನುವ ಬಗೆಬಗೆಯ ಸೊಪ್ಪುಗಳಲ್ಲಿ ರೋಗನಿರೋಧಕ ಶಕ್ತಿಯಿದೆಯೆಂಬುದು ಗ್ರಾಮೀಣ ಜನರ ತಿಳಿವಳಿಕೆ. ಅಜೀರ್ಣವಾದ ನಾಯಿಗಳು ಗರುಕೆಹುಲ್ಲು ತಿಂದು ಕರುಳನ್ನು ಸ್ವಚ್ಛಮಾಡಿಕೊಳ್ಳುತ್ತವೆಂಬ ಪ್ರತೀತಿಯೂ ಉಂಟು (ಪುಟ. ೪೨೧). ಮನುಷ್ಯರಿಗಾದರೂ ಅಷ್ಟೇ ರೋಗಾಪಹಾರಕ ಔಷಧಿಗಳು ಪರಿಸರದ ಬೇರುಬಳ್ಳಿಗಳಿಂದೊದಗುತ್ತದೆಂಬುದು ಇತ್ತೀಚಿನವರೆವಿಗೂ ಸಾಮಾನ್ಯ ಮನುಷ್ಯನ ತಿಳಿವಳಿಕೆ. ಬಾಚಿ ಕೊಡಲಿಗಳ ಗಾಯವಾದರೆ ಬಾಚಿಸೊಪ್ಪೋ

ಸ್ವಮೂತ್ರವೋ ಸಾಕು. ಗಂಟಲು ನೋವಾದರೆ ಆಲೆಯ ಹಾಲುಬೇಕು; ಇಂತಯೇ ತುಲಸಿ, ಹೊನೆಗೊನೆ, ತುಂಬೆ, ಒಂದೆಲಗ, ದಾಳಿಂಬೆ, ವಿಷ್ಣುಕಾಂತಿ, ತೊಂಡೆ ಮೊದಲಾದ ಸೊಪ್ಪು ಹೂಗಳಿವೆ, ಮೂಲಿಕೆಗಳಿವೆ. ರೈತರ ದನಗಳಿಗೆ ಸೆರೆಯಾದರೆ ನತ್ತೂರಿ ಬೇರನ್ನು ತಿನ್ನಿಸುವಂತಹ ಪ್ರತೀತಿ ಈಗಲೂ ಉಳಿದುಕೊಂಡಿದೆ.

ಜಾನಪದ ವೈದ್ಯವನ್ನು ಸಹಜ ಜಾನಪದ ವೈದ್ಯ ಮತ್ತು ಮಂತ್ರತಂತ್ರ ಜಾನಪದ ವೈದ್ಯವೆಂದು ಎರಡು ವಿಭಾಗಗಳಾಗಿ ದೇಜಗೌ ವಿಗೂಡಿಸಿದ್ದಾರೆ. ಗಿಡಮೂಲಿಕೆ ಲೋಹ ಮತ್ತು ಪ್ರಾಣಿವಸ್ತುಗಳನ್ನು ಬಳಸಿಕೊಳ್ಳುವ ಮೊದಲನೆಯ ವಿಭಾಗವೇ ಸಹಜವೈದ್ಯ. ಅದೇ ಅತ್ಯಂತ ಪ್ರಾಚೀನ ಮಾಟಮಂತ್ರಗಳನ್ನು ಮತೀಯ ನಂಬಿಕೆಗಳನ್ನೂ ಆಧರಿಸಿರುವ ಎರಡನೆಯ ವಿಭಾಗವನ್ನು 'ಯಕ್ಷಿಣೀವೈದ್ಯ'ವೆಂದು ಕರೆದಿದ್ದಾರೆ. ಸೀಮೆವೈದ್ಯಕ್ಕಿಂತ ಮಿಗಿಲಾಗಿ ನಾಟಿವೈದ್ಯದಲ್ಲಿ ನಂಬಿಕೆಯಿಟ್ಟಿರುವ ಆಧುನಿಕರು ಎಲ್ಲೆಲ್ಲಿಯೂ ಇದ್ದಾರೆ. ರೋಗ ನಿವಾರಕ ಮತ್ತು ನಿರೋಧಕ ಶಕ್ತಿಯುಳ್ಳ ಜಾನಪದ ವೈದ್ಯ ಒಂದು ರೀತಿಯಲ್ಲಿ ಇಂದಿಗೂ ವೈಜ್ಞಾನಿಕ ವೈದ್ಯಕ್ಕೆ ಸವಾಲಾಗಿ ನಿಂತಿದೆ.

ಸ್ಥಳೀಯ ಪ್ರಾಕೃತಿಕ ಪರಿಸರ ಮತ್ತು ಸಂಪ್ರದಾಯಗಳಿಗನುಗುಣವಾಗಿ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಜಾನಪದ ವೈದ್ಯ ಪಸರಿಸಿದೆ. ಸಾಮಾನ್ಯವಾಗಿ ಇದನ್ನು 'ಗೃಹವೈದ್ಯ'ವೆಂದು ಕರೆಯಬಹುದು. ಸಣ್ಣಪುಟ್ಟ ಚಿಕಿತ್ಸೆಗಳನ್ನೆಲ್ಲ ಮನೆಯ ಅಜ್ಜಿಯೇ ಪೂರೈಸುತ್ತಾಳೆ. ಅವುಗಳಿಗಾಗಿ ವೈದ್ಯನನ್ನು ಹುಡುಕಿಕೊಂಡು ಹೋಗುವುದಿಲ್ಲ. ಹಳ್ಳಿಯಲ್ಲಿ ಬಾಣಂತಿ ಮಗುವಿನ ಆರೈಕೆಯಂತೂ ಬಹುಸೂಕ್ಷ್ಮತರವಾದುದು. 'ಜೀರ್ಣಶಕ್ತಿ ವೃದ್ಧಿಯಾಗಲೆಂದು ಶರೀರದಲ್ಲಿ ಶೈತ್ಯ ಸೇರಿಕೊಳ್ಳದಿರಲೆಂದು ಎರಡುಮೂರು ದಿನದ ಮಕ್ಕಳಿಗೆ ಕತ್ತೆ ಹಾಲಿನಲ್ಲಿ ಕುಂಕುಮ ಕೇಸರಿ ಬೆರಸಿ ಕುಡಿಸುತ್ತಾಳೆ. ಮೂರು ತಿಂಗಳು ಕಳೆಯುವ ತನಕ ಕೇಸರಿ, ಕಸ್ತೂರಿ, ಗೋರೋಜನಗಳನ್ನು ಕಲಸಿ ಅಟ್ಟುತ್ತಾಳೆ. ಮುಂದೆ ಹುಟ್ಟುವ ಮಗುವಿಗೆ ಕೆಂಬಾರವಾಗದಿರಲೆಂದು ಏಳೆಂಟು ತಿಂಗಳ ಬಸಿರಿಗೆ ಮೂರ್‍ನಾಲ್ಕು ಸಾರಿ ಹಾಲಿಗೆ ಕುಂಕುಮ, ಬಾಣಂತಿಗೆ ಕುಸುಬಲಕ್ಕಿ ಅನ್ನವನ್ನೇ ಕೊಡಬೇಕು, ಮೆಣಸು, ಬೆಳ್ಳುಳ್ಳಿ, ಬೆಲ್ಲ, ಹಾಲು, ಹಾಗಲಕಾಯಿ ಸಪ್ಸೀಗೆಸೊಪ್ಪು ಆಡುಕುರಿ ಮಾಂಸ ಇಂಥ ಪದಾರ್ಥಗಳನ್ನೇ ಅವಳಿಗೆ ಆಧಾರವಾಗಿ ನೀಡಬೇಕು. ಆಮಶಂಕೆಗೆ ಜಂಬುನೇರಳೆ ಹಣ್ಣಿನ ಶರಬತ್ತು ಕೊಡುತ್ತಾಳೆ. ಆಗದವರ ಮನೆಯಲ್ಲಿ ಉಂಡುಬಂದವರಿಗೆ ಏಲಕ್ಕಿ ತಿನ್ನಿಸಿ ನಿಂಬೆಹಣ್ಣಿನ ರಸಕುಡಿಸುತ್ತಾಳೆ, ಕೈ ಮಸಗೆ ಹಾಕಿದ್ದರೆ ಪರಿಹಾರವಾಗಲೆಂದು'. (ದೇಜಗೌ – ಜಾ.ಮ.ಸಂ. ಪುಟ. ೪೩೧).

ಇಪ್ಪತ್ತನೆಯ ಶತಮಾನದ ಭರತಖಂಡದಲ್ಲಿ ಸೀಮೆವೈದ್ಯದ ಜತೆಗೆ ಯುನಾನಿ, ಆಯುರ್ವೇದ, ಹೋಮಿಯೋಪಥಿ, ಆಕ್ಯುಪಂಕ್ಚರ್ ಮೊದಲಾದ ವೈದ್ಯ ಪದ್ಧತಿಗಳು ವಿಶೇಷವಾಗಿ ಜಾರಿಯಲ್ಲಿವೆಯಾದರೂ, ಅವು ನಾಡಿನ ಕೊಂಪೆಗಳನ್ನು ತಲುಪಿಲ್ಲ; ಅಷ್ಟೇ ಅಲ್ಲ, ಎಲ್ಲ ಕಾಯಿಲೆಗಳು ಅವುಗಳಿಂದ ಪರಿಹಾರವಾಗುತ್ತಿಲ್ಲ. ಆಲೋಪತಿ-ಯಿಂದ ಗುಣವಾಗದ ಕಾಯಿಲೆಗಳು ಜಾನಪದ ವೈದ್ಯದಿಂದ ಸಂಪೂರ್ಣವಾಗಿ ವಾಸಿಯಾಗಿರುವುದೂ ಉಂಟು. ವೈಜ್ಞಾನಿಕವಾಗಿ ಅಭಿವೃದ್ಧಿಹೊಂದದ ರಾಷ್ಟ್ರಗಳಿರಲಿ, ವಿಜ್ಞಾನವೇ ಜೀವನ ವಿಧಾನವಾಗಿರುವ ಅಮೆರಿಕೆಯಂಥ ರಾಷ್ಟ್ರಗಳಲ್ಲಿಯೂ ಜಾನಪದ ವೈದ್ಯ ಸಂಪೂರ್ಣವಾಗಿ ಹಿಂಜರಿದಿಲ್ಲವೆಂಬುದು ವಿಚಾರಣೀಯ ವಿಷಯವಾಗಿದೆ ಎಂಬ ಮಾತು ವಾಸ್ತವಿಕವಾದ ನುಡಿಯಾಗಿದೆ.

ಈ ಸಂಕಲನದ ಬಹಳ ಮುಖ್ಯ ಲೇಖನಗಳಲ್ಲಿ ಕಾನೂನು ಜಾನಪದವೂ ಒಂದು. ಪರಂಪರೆಯಿಂದ ಬೆಳೆದುಬಂದ ಅನೇಕ ಸಂಪ್ರದಾಯ, ನಂಬಿಕೆಗಳು ಕಾಲಾನಂತರ ಕಾನೂನುಗಳಾಗಿ ಪರಿವರ್ತನೆಗೊಂಡಿರುವುದನ್ನು ಪ್ರಪಂಚದ ವಿವಿಧ ದೇಶಗಳಲ್ಲಿ ಕಾಣಬಹುದಾಗಿದೆ. ನಿದರ್ಶನಕ್ಕಾಗಿ ಇಂಗ್ಲೆಂಡು ಒಂದು ಅಲಿಖಿತ ಸಂವಿಧಾನ ರಾಷ್ಟ್ರ. ಇಲ್ಲೇ ಅನೇಕ ಕಾನೂನುಗಳು ರೂಢಿ-ಸಂಪ್ರದಾಯಗಳ ಮೂಲಕವೇ ಬಂದವುಗಳಾಗಿವೆ.

ಪ್ರಾಚೀನ ಕಾಲದಲ್ಲಿ ಅಗೆದು ಬಗೆದು ಗೆಡ್ಡೆಗೆಣಸುಗಳನ್ನು, ಬೇಟೆಯಿಂದ ಮಾಂಸವನ್ನು ಸಂಪಾದಿಸಿಕೊಂಡು ಹೊಟ್ಟೆ ಹೊರೆಯುತ್ತ, ಮರದ ನೆರಳಿನಲ್ಲಿ ಮಲಗುತ್ತಿದ್ದ ಅಲೆಮಾರಿ ಜನ ಕೃಷಿಯ ರಹಸ್ಯವನ್ನರಿತುಕೊಂಡು ನೀರು ನೆಲ ಸಮೃದ್ಧವಾದೆಡೆಯಲ್ಲಿ ನೆಲೆ ನಿಂತಾಗ ಮಾನವ ಸಮಾಜದ ಸ್ವರೂಪ ರಚನೆಗಳು ಮಾರ್ಪಾಡಾಗುತ್ತವೆ. ಕಾಲಪರಿವರ್ತನೆಗನುಗುಣವಾಗಿ ಸಾಮಾಜಿಕ ಸಂಪ್ರದಾಯ ಪದ್ಧತಿಗಳು ಪರಿಷ್ಕಾರಗೊಳ್ಳುತ್ತವೆ. ಗ್ರೀಕರ ನಗರ ರಾಜ್ಯಗಳಂತೆ ಪ್ರತಿಯೊಂದು ಗ್ರಾಮವೂ ಗಣರಾಜ್ಯವಾಗಿ, ಪ್ರತಿಯೊಂದು ಬುಡಕಟ್ಟೂ ಸ್ವತಂತ್ರ ಸಂಸ್ಥೆಯಾಗಿ ಒಂದೊಂದು ತನ್ನದೇ ಆದ ನೀತಿನಿಯಮಾವಳಿಗಳನ್ನು ರೂಪಿಸಿಕೊಳ್ಳುತ್ತದೆ (ಪುಟ. ೪೩೨).

ನಂಬಿಕೆಗಳ ಬೆಳವಣಿಗೆಯಲ್ಲಿ ಪದ್ಧತಿಗಳಿಗೆ ವಿಶೇಷ ಸ್ಥಾನವಿದೆ. ಅವುಗಳಲ್ಲಿ ಯಾವುದು ಮೊದಲೆಂಬುದನ್ನು ನಿಷ್ಕರ್ಷಿಸುವುದು ಸಾಧ್ಯವಿಲ್ಲ. ಉಗುರು ಕಡಿಯಬಾರದು; ನಸುಕಿನ ನಂತರ ಗುಡಿಸಿದ ಕಸವನ್ನು ಹೊರಗೆಸೆಯಬಾರದು; ದೀಪವನ್ನು ಬಾಯಿಂದ ಉರುಬಿ ತುಂಬಬಾರದು "ಇಂತಹ ಪದ್ಧತಿಗಳು

ಪ್ರಯೋಗಾನುಭವಗಳಿಂದ ಫಲಿತವಾದ ನಂಬಿಕೆಗಳು. ವರಸೆ ಅಥವಾ ರೀತಿಗಳು ಕಾಲಾನಂತರದಲ್ಲಿ ಪದ್ಧತಿಗಳಾಗಿ ಮಾಪಾಡಾಗುವುದುಂಟು. ತನ್ನ ಬೋಳುದಲೆಯನ್ನು ಪ್ರದರ್ಶಿಸಬಾರದೆಂದು ಫ್ರಾನ್ಸ್ ದೊರೆ ಹದಿಮೂರನೆಯ ಲೂಯಿ ಕೃತ್ರಿಮ ಕೇಶವನ್ನು ಧರಿಸುತ್ತಾನಂತೆ. ಹರಿದುಹೋದ ತುಟಿ ಮುಚ್ಚಿಕೊಳ್ಳಲು ಬಿಟ್ಟ ಮೀಸೆಯ ವರಸೆ ಇತರರಿಗೆ ಅನುಕರಣೆಯ ಸಂಗತಿಯಾಗುತ್ತದೆ.

ಪದ್ಧತಿಗಳ ಮೂಲದಲ್ಲಿ ಏಕವ್ಯಕ್ತಿಯ ಕೈವಾಡವಿದ್ದರೂ, ಅವು ಬಹುಜನರ ಬಳಕೆಯಿಂದ ಮತ್ತು ಪುನರಾವರ್ತನೆಯಿಂದ ಸಾಮೂಹಿಕ ಅಂಗೀಕಾರವನ್ನು ಪಡೆದು ಸಾಮಾಜಿಕ ಸ್ಥಾನಮಾನವನ್ನು ಪಡೆಯುತ್ತವೆ. ಪೂರ್ವಕಾಲದ ಇಂಗ್ಲೆಂಡಿನಲ್ಲಿ ಜನರೇ ಕೊಲೆ, ಕಳ್ಳತನ, ಸುಲಿಗೆಗಳಿಗೆ ಜುಲ್ಮಾನೆಗಳನ್ನು ಗೊತ್ತುಪಡಿಸುತ್ತಿದ್ದರು. ಪಂಚಾಯ್ತಿಗಳು ಅವನ್ನೇ ಸ್ಥಿರಪಡಿಸುತ್ತಿದ್ದವು. ಪದ್ಧತಿಗಳೇ ಅಲಿಖಿತ ಶಾಸನಗಳೆಂಬ ತಿಳುವಳಿಕೆ ಅಧಿಕಾರಿ ವರ್ಗದಲ್ಲಿಯೂ ದೃಢವಾಗಿ ಬೇರೂರಿತ್ತು. ಲಿಖಿತ ಶಾಸನಕ್ಕಿಂತ ಅಲಿಖಿತ ಪದ್ಧತಿಗಳೇ ಸಮಾಜವನ್ನು ಆಳುವುದುಂಟು. ಆಂಗ್ಲ ನ್ಯಾಯಾಧೀಶರು ಸಹ ಅವುಗಳಿಗೆ ವಿಶೇಷ ಬೆಲೆ ನೀಡುತ್ತಾರೆ. ಭಾರತದ ಹಳ್ಳಿಗಳಲ್ಲಿ ಕಾನೂನಿಗಿಂತ ಹಿಂದಿನ ನಂಬಿಕೆ, ಸಂಪ್ರದಾಯ, ರೂಢಿಪದ್ಧತಿಗಳ ಬಿಗಿ ಹಿಡಿತದಿಂದಲೇ ಜನರು ನೆಮ್ಮದಿಯಿಂದ ಜೀವನ ನಡೆಸಿಕೊಂಡು ಬಂದಿರುವಂಥದನ್ನು ನಾವು ಇತಿಹಾಸದಿಂದ ತಿಳಿಯಬಹುದು. ಪ್ರಾಚೀನ ಪದ್ಧತಿಯೇ ಪ್ರಶಾಸನವೆಂದು ಮನು ಸಹ ಖಚಿತಪಡಿಸುತ್ತಾನೆ.

ಭಾರತೀಯ ಪದ್ಧತಿಯ ಇತಿಹಾಸ ಮೇಲಿನವುಗಳಿಗಿಂತ ಭಿನ್ನವಾಗಿಲ್ಲ. 'ಪ್ರಾಚೀನ ಪದ್ಧತಿಗಳ ಆಧಾರದ ಮೇಲೆ ರೂಪಗೊಂಡ ಹಿಂದೂ ಶಾಸನ ಆರ್ಯರ ಆಗಮನಕ್ಕೆ ಮುಂಚೆಯೇ ಅಸ್ತಿತ್ವದಲ್ಲಿತ್ತೆಂಬುದು 'ಜಿ.ಡಿ.ಮೇಯಿನ್' ಮೊದಲಾದ ತಜ್ಞರ ಅಭಿಪ್ರಾಯ (ಪುಟ. ೪೪೫). ಇಂದಿಗೂ ಅಮೆರಿಕೆಯ ಕೆಂಪು ಇಂಡಿಯನ್ನರು ತಂತಮ್ಮ ಬುಡಕಟ್ಟುಗಳು ಕಟ್ಟುಪಾಡುಗಳನ್ನು ಪಾಲಿಸುತ್ತಾರೆಯೇ ಹೊರತು ಬಿಳಿಯರು ಸಂಸತ್ ಹಾಗೂ ವಿಧಾನ ಸಭೆಗಳಲ್ಲಿ ರಚಿಸುವ ಕಾನೂನುಗಳನ್ನಲ್ಲ. ಆಫ್ರಿಕಾದಲ್ಲಿ ಬುಡಕಟ್ಟುಗಳು ಪ್ರಬಲವಾಗಿದ್ದು, ಇಂದಿಗೂ ಅವರ ಪ್ರಾಚೀನ ಪದ್ಧತಿಗಳೇ ಅವರಿಗೆ ಮಾರ್ಗದರ್ಶಿಯಾಗಿದೆ. ಭರತ ಖಂಡದಲ್ಲಿಯೂ ಅನೇಕ ಬುಡಕಟ್ಟುಗಳ ಕತೆಯೂ ಇದೇ ಆಗಿದೆ. 'ಪ್ರಾಚೀನ ಬರ್ಮೀಯರ ವಿಶಿಷ್ಟ ಲಕ್ಷಣವೆಂದರೆ ಸಮಾನತೆ ಅವರಲ್ಲಿ ದೊರೆಗಳನ್ನು ಬಿಟ್ಟರೆ ಮೇಲುಕೀಳುಗಳೇ ಇಲ್ಲ. ಆದ್ದರಿಂದ ಕಾನೂನು ಒಂದೇ ಸಮನಾಗಿ ಎಲ್ಲರಿಗೂ ಅನ್ವಯವಾಗುತ್ತಿದ್ದವು. ಆ ಜನರ ಪ್ರಕಾರ ಪದ್ಧತಿಗಳೇ ಕಾನೂನಿನ ಏಕಮಾತ್ರ ಆಕರ (ಪುಟ. ೪೪೭).

ಕಾನೂನು ಜಾನಪದವೆಂದರೆ ಸಾಮಾನ್ಯವಾಗಿ ಜನತೆಯಲ್ಲಿ ರೂಢಿಯಲ್ಲಿರುವ ವಾಡಿಕೆಗಳು, ಪದ್ಧತಿಗಳು ಹಾಗೂ ಸಂಪ್ರದಾಯಗಳು. ಅವೇ ಅಲಿಖಿತ ಶಾಸನಗಳು. ಸಮಾಜದಲ್ಲಿ ಶಿಸ್ತು ಶಾಂತಿಗಳನ್ನು ಸಂಸ್ಥಾಪಿಸುವಲ್ಲಿ, ನೈತಿಕ ಮಟ್ಟವನ್ನು ಕಾಪಾಡುವಲ್ಲಿ, ವ್ಯಕ್ತಿ ವ್ಯಕ್ತಿಗಳ ನಡುವಣ ಹಾಗೂ ವ್ಯಕ್ತಿ ಮತ್ತು ಸಮಾಜಗಳ ನಡುವಣ ವಿವಿಧ ಸಂಬಂಧಗಳನ್ನು ಹೊಂದಿಸುವಲ್ಲಿ, ಸಮಾಜದ ಓರೆಕೋರೆಗಳನ್ನು ತಿದ್ದಿ ದೋಷ ದೌರ್ಬಲ್ಯ ಅತಿರೇಕಗಳನ್ನು ನಿಯಂತ್ರಿಸಿ, ಬದುಕು ಹಸನಾಗಿ ಸಾಗುವಂತೆ ಅನುವು ಮಾಡಿಕೊಡುವಲ್ಲಿ ಈ ಅಲಿಖಿತ ಸರ್ವಜನಸಮ್ಮತವಾದ ಶಾಸನಗಳು ತುಂಬ ನೆರವಾಗುತ್ತವೆ. ವ್ಯವಸ್ಥಿತವಾದ ಜೀವನ ಕ್ರಮವುಳ್ಳ ಮಾನವರ ಸಮುದಾಯವೇ ಸಮಾಜ; ವ್ಯವಸ್ಥಿತವಾದ ಜೀವನಕ್ಕೆ ಸಂಪ್ರದಾಯ ಪದ್ಧತಿಗಳೇ ಆಧಾರ (ಪುಟ. ೪೫೧).

'ಜಾನಪದ ಉಪಯುಕ್ತ ಕಲೆಗಳು' ಎಂಬ ಲೇಖನದಲ್ಲಿ ಪುರಾತನ ಕಾಲದಿಂದ ಆಧುನಿಕ ಕಾಲಕ್ಕೆ ಪರಂಪರೆ, ರೂಢಿಸಂಪ್ರದಾಯಗಳು ನಿರಂತರವಾಗಿ ಸಾಗುವಂತೆಯೇ ಮಾನವನ ಕಸುಬು-ಉಪಕಸುಬುಗಳು, ವೃತ್ತಿಗಳು ವಂಶಪಾರಂಪರ್ಯವಾಗಿ ಚಲಿಸುವ ತೊರೆಯಾಗಿ ಮುಂದುವರೆಯುತ್ತವೆ ಎನ್ನುವ ದೇಜಗೌ ಪ್ರಕಾರ ಜಾನಪದ ಕಲಾಪ್ರಪಂಚ ಜನಜೀವನದಷ್ಟೇ ವಿಶಾಲವೂ, ವ್ಯಾಪಕವೂ, ಪ್ರಾಚೀನವೂ ಆಗಿದೆ. ಆಯಾ ಕಾಲದ ಮಾನವನ ಅಗತ್ಯಗಳು ಕಲೆಗಳ ಉಗಮ ವಿಕಾಸ ವೈವಿಧ್ಯಗಳಿಗೆ ಕಾರಣವಾಗಿವೆ. ನಿಜವಾದ ಕಲೆ ಪುಸ್ತಕ ಜ್ಞಾನದಿಂದಾಗಲೀ ಶಾಲೆಯ ಕಲಿಕೆಯಿಂದಾಗಲಿ ಆವಿರ್ಭವಿಸುವಂಥದಲ್ಲ, ಅಂತಃಸ್ಫೂರ್ತಿಯಿಂದ ಲೋಕಾನುಭವ-ದಿಂದ ಉದಯವಾಗತಕ್ಕದ್ದು ಎಂಬುದಕ್ಕೆ ಇವು ನಿದರ್ಶನವಾಗಿದೆ ಎಂಬ ದೇಜಗೌ ಅವರ ಮಾತು ಸಾರ್ವಕಾಲೀಕವಾದುದು.

'ನೋಡಿ ತಿಳಿ ಮಾಡಿ ಕಲಿ' ಎಂಬ ನಾಣ್ಣುಡಿಯಂತೆ 'ಆಧುನಿಕ ಯುಗದ ಪ್ರದರ್ಶನ ಕೌಶಲವಾಗಲೀ, ಪ್ರಚಾರದ ಬೊಬ್ಬೆಯಬ್ಬರಗಳಾಗಲೀ ಮುಗಿಲೆತ್ತರದ ಕಟ್ಟಡಗಳಾಗಲೀ, ದೇಶವಿದೇಶಗಳಲ್ಲಿ ಮೆರೆದಾಡಿ ಹೆಸರುಗಳ ಹಿಂದೆ ಎರಡು ಮೂರು ಸಾಲುಗಳ ಪದವಿಗಳನ್ನು ಅಂಟಿಸಿಕೊಂಡು ಬಂದ ತಜ್ಞ ದೇವತೆಗಳ ಅಷ್ಟಕೂಟಗಳ ಅಟ್ಟಹಾಸವಾಗಲೀ ಇಲ್ಲದೆಯೇ ಅವು ತಂದೆಯಿಂದ ಮಗನಿಗೆ, ತಾಯಿಯಿಂದ ಮಗಳಿಗೆ, ಹಿರಿಯರಿಂದ ಕಿರಿಯರಿಗೆ, ಪೀಳಿಗೆಯಿಂದ ಪೀಳಿಗೆಗೆ ಯಶಸ್ವಿಯಾಗಿ ಹರಿದುಬಂದು, ಇಂದಿನ ವಿಜ್ಞಾನ ತಂತ್ರಜ್ಞಾನಗಳಿಗೂ ಅಡಿಪಾಯದಂತಿರುವ ಉಪಯುಕ್ತ ಕಲೆಗಳ ತಜ್ಞರ ಉಪೇಕ್ಷೆಗೀಡಾಗಿರುವುದು ದುರಂತದ ಸಂಗತಿಯಾಗಿದೆ

(ಪು. ೪೫೩) ಎಂದು ಸಮಾಜದ ಪ್ರತಿಬಿಂಬದಂತಿರುವ ವ್ಯವಸ್ಥೆಯ ಬಗ್ಗೆ ಖೇದ ವ್ಯಕ್ತಪಡಿಸಿದ್ದಾರೆ.

'ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತಮತಿಗಳ್' ಎಂಬ ಕವಿರಾಜಮಾರ್ಗಕಾರನ ಮಾತು ಸಾಹಿತ್ಯಕ್ಕಿಂತೋ ಜಾನಪದ ಕಲಾಪ್ರಪಂಚಕ್ಕೂ ಅತ್ಯುಚಿತವಾಗಿ ಅನ್ವಯಿಸುತ್ತದೆ. ಜಾನಪದ ಕಲಾವಿದರು ವ್ಯವಸ್ಥಿತವಾದ ಯಾವ ಶಾಲೆಗೆ ಹೋಗದಿದ್ದರೂ, ಅವರ ಸೃಜನ ಸಾಮರ್ಥ್ಯ ಹತ್ತಾರು ಶಾಲೆಗಳ ಮೂಲಕ ತುಂಬ ಹೊಳೆಯಾಗಿ ಪ್ರವಹಿಸುತ್ತದೆ. ಪ್ರಾರಂಭದಲ್ಲಿ ಅನುಕರಣೆಯ ಮೂಲಕ ಕಲೆಯನ್ನು ಅಭ್ಯಾಸ ಮಾಡುವುದಾದರೂ, ಕಾಲಕ್ರಮೇಣ ವ್ಯಕ್ತಿಯ ಸೃಜನ ಸಾಮರ್ಥ್ಯದ ಅಭಿವ್ಯಕ್ತಿಗೆ ಪೂರ್ಣಾವಕಾಶವುಂಟು. ಜನಪದಗೀತೆ ಹೇಗೆ ಏಕವ್ಯಕ್ತಿ ಸಾಹಿತ್ಯವಲ್ಲವೋ ಹಾಗೆಯೇ ಜಾನಪದ ಕಲೆಗಳು ಪೀಳಿಗೆಯಿಂದ ಪೀಳಿಗೆಗೆ ಸಮಷ್ಟೀ ಕೊಡುಗೆಗಳಾಗಿವೆ.

'ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ಕ್ರಾಂತಿಯ ನಂತರ, ಭರತಖಂಡದಲ್ಲಿ ಪಾಶ್ಚಾತ್ಯ ಸಂಪರ್ಕ ನಂತರ ಈ ಉಪಯುಕ್ತ ಕಲೆಗಳಿಗೆ ಗ್ರಹಣ ಹಿಡಿದದ್ದು ನಿಜವೆಂತಲೂ, ಆದರೆ ನಿರಕ್ಷರತೆಗೂ ಗ್ರಾಮೀಣ ಕಲೆಗಳಿಗೂ ಹೊಕ್ಕುಳ ಬಳ್ಳಿ ಸಂಬಂಧ ಇರುವುದರಿಂದ ಭರತ ಖಂಡದಲ್ಲಿ ಅವುಗಳಿಗೆ ಪೂರ್ಣ ವಿರಾಮ ದೊರೆಯುವಂತಿಲ್ಲ. ಅಮೆರಿಕೆಯ ಒಳನಾಡಿನಲ್ಲಿ ಇಂದಿಗೂ ಕುರ್ಚಿ ಕೈಗಾರಿಕೆ ಜಾನಪದ ಕಲೆಯಾಗಿ ಉಳಿದಿದೆ (ಪು. ೪೫೭) ಎಂಬ ದೇಜಗೌ ಅವರ ಮಾತಿನಲ್ಲಿ ಸತ್ಯ ಅಡಗಿದೆ.

ಜಾನಪದ ಕಲೆಗಳಂತೆಯೇ ಜನರ ಉದ್ಯೋಗಕ್ಕೂ ಅವರ ವಸ್ತ್ರವಿಧಾನಕ್ಕೂ ಅವಿಭಾಜ್ಯ ಸಂಬಂಧ, ಪಾಕಕಲೆಯಲ್ಲಿನ ಪರಿಣತೆ, ಭಕ್ಷ್ಯಭೋಜ್ಯಗಳ ಸಿದ್ಧತೆ, ಧಾರ್ಮಿಕ ವಿಧಿವಿಧಾನಗಳಿಗೂ ಪಾಕಕರ್ಮಕ್ಕೂ ಇರುವ ನಿಕಟ ಸಂಬಂಧಗಳೆಲ್ಲವನ್ನೂ ಸ್ಥೂಲವಾಗಿ ವಿವರಿಸಿದ್ದಾರೆ.

'ಜಾನಪದ ಉಪಯುಕ್ತ ಕಲೆಗಳು ಇವಿಷ್ಟೇ ಎಂದು ಹೇಳುವಂತಿಲ್ಲ. ವ್ಯವಸಾಯದ ಉಪಕರಣಗಳು, ವಾಹನಗಳು, ಅಂಗಸಾಧನೆಯ ಪರಿಕರಗಳು, ಯುದ್ಧ ಸಾಧನಗಳು, ಗೃಹೋಪಕರಣಗಳು, ಬೇಟೆಯ ಸಲಕರಣೆಗಳು, ತೇರುಗಳು, ಬಯಲಾಟದ ಸಾಮಾನುಗಳು ಇವೇ ಮೊದಲಾದವು ಉಪಯುಕ್ತ ಕಲೆಗಳ ಕಕ್ಷೆಯಲ್ಲಿ ಬರುತ್ತವೆ. ಅವುಗಳ ಅಧ್ಯಯನಕ್ಕೆ ಪ್ರತ್ಯೇಕ ಪ್ರಬಂಧವೇ ಬೇಕಾಗುತ್ತದೆ. ಅವುಗಳ ಕಡೆಗೆ ಜಾನಪದ ತಜ್ಞರ ಗಮನಸೆಳೆಯುವುದೇ ಈ ಲೇಖನದ ಉದ್ದೇಶ (ಪುಟ. ೪೬೪) ಎಂದು ಶ್ರೀ ದೇಜಗೌ ಅವರು ಭವಿಷ್ಯದ ಜಾನಪದ ಪಥಕ್ಕೆ ಆಹ್ವಾನದ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ದೇಜಗೌ ಅವರ ಬೌದ್ಧಿಕ ಪ್ರೌಢಿಮೆಗೆ ಸಾಕ್ಷಿಯಾದ ಜಾನಪದ ವಸ್ತುವೆಂದರೆ ಕೃತಕ ಜಾನಪದ. ಈ ಲೇಖನವು ಒಂದು ಹೊಸ ವಿಶಿಷ್ಟತೆಯನ್ನು ಹುಟ್ಟುಹಾಕುವ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿದೆ. ನಿರಕ್ಷರಿಗಳಿಂದ ಸೃಷ್ಟಿಗೊಂಡು ಆಧುನಿಕ ಸಂಪರ್ಕ ಮಾಧ್ಯಮಗಳ ಹಂಗಿಲ್ಲದೆ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ, ಹಿರಿಯರಿಂದ ಕಿರಿಯರಿಗೆ, ಪೀಳಿಗೆಯಿಂದ ಪೀಳಿಗೆಗೆ ಗತಾನುಗತಿಕವಾಗಿ ಹರಿದುಬರುವ ಜೀವನ ದರ್ಶನ ವಿಧಾನಗಳಿಗೆ 'ಜಾನಪದ'ವೆಂಬ ಹೆಸರು ಸಲ್ಲುತ್ತದೆ. ಸಂಪ್ರದಾಯಶೀಲತೆ ಮತ್ತು ಶೀಘ್ರಪ್ರಸರಣ ಸಾಮರ್ಥ್ಯ ಅದರ ಪ್ರಮುಖ ಲಕ್ಷಣಗಳು ಜಾನಪದದ ಈ ಲಕ್ಷಣಗಳನ್ನು ಗಮನಿಸಿದಾಗ ಅನಕ್ಷರಸ್ಥ ಸಮಾಜವೇ ಅದರ ತವರೆಂದು ತಿಳಿಯಬೇಕಾಗುತ್ತದೆ. 'ನಾಗರಿಕ ವಾತಾವರಣದಲ್ಲಿ ನಿರ್ಮಾಣಗೊಳ್ಳುವ ಜಾನಪದ ಶುದ್ಧವಾಗಿರದೆ ಮಧ್ಯವರ್ತಿಯಾಗಿರುತ್ತದೆ. ನೈಜವಲ್ಲ, ಕೃತಕ ಎನ್ನುವ ಅರ್ಥದಲ್ಲಿ ಮಾತ್ರ ಅಶುದ್ಧವೆಂಬ ಭಾವನೆ ಬರುವ ಮಾತನ್ನಿಲ್ಲಿ ಬಳಸಿದೆ. ಇದು ಸರಿಯೆ, ಶುದ್ಧ ಜಾನಪದವೆಂದು ಒಪ್ಪಲು ಕಷ್ಟವಾಗುವ ಹೊಸ ಪ್ರಕಾರ ಸೃಷ್ಟಿಯಾಗುತ್ತಿದೆ. ಇದನ್ನು "ಆಧುನಿಕ ಜಾನಪದ"ವೆಂದು ರಿಚರ್ಡ್ ಎಂ ಹಾರ್ಸನ್ ಎಂಬ ವಿದ್ವಾಂಸ ಕರೆಯುತ್ತಾರೆ.[೧]

ತನ್ನ ಉದ್ದೇಶ ಈಡೇರಬೇಕಾದರೆ ರಾಜಕೀಯ ನಾಯಕನಾಗಲಿ, ಮಂತ್ರಿಗಳಾಗಲಿ, ನಿಧಿ ಸಂಗ್ರಹಕಾರರಾಗಲಿ, ವಿಮಾ ಏಜೆಂಟರಾಗಲಿ ಕುರುಕು ಕತೆಗಳನ್ನು ಹೇಳಿ, ಎದುರಿಗಿರುವವರನ್ನು ನಗಿಸಿ, ಮರಳು ಮಾಡಬೇಕು. ಇಂಥ ಕತೆ ಹರಟೆ ಪ್ರಸಂಗಗಳಿಗೂ ಕಾಲುಂಟು, ರೆಕ್ಕೆಯುಂಟು. ಲಿಪಿ ಮುದ್ರಣಗಳ ನೆರವಿಲ್ಲದೆ, ಗಾಳಿಯ ಮುಖಾಂತರವೇ ಅವು ಕಿವಿ ಬಾಯಿಗಳ ಊರು ಕೇರಿಗಳ ಗಡಿಮೀರಿ ದೂರದ ಪ್ರದೇಶಗಳಿಗೆ ಪ್ರಯಾಣ ಮಾಡಬಹುದು. ಇಂಥವನ್ನು ಡಾರ್ಸನ್ 'ನಗರ ಅಥವಾ ಆಧುನಿಕ ಜಾನಪದ'ವೆಂದು ಹೆಸರಿಸುತ್ತಾರೆ.[೨]

ಹೀಗೆ ಕೃತಕ ಜಾನಪದ ಎನ್ನುವಂಥದ್ದು. ಶುದ್ಧ ಜಾನಪದದ ಸಂಪ್ರದಾಯ–ಶೀಲತೆಯಿಂದ ಭಿನ್ನವಾಗಿ ನಗರ ಪ್ರದೇಶಗಳಲ್ಲಿ ಇತ್ತೀಚೆಗೆ ಹೆಚ್ಚು ಹೆಚ್ಚು ಬಳಕೆಯಾಗುತ್ತಿದೆ.

'ಒಂದು ಜಾನಪದ ಪ್ರಾರ್ಥನೆ' ಎಂಬ ಶೀರ್ಷಿಕೆಯು ಭೂಮಿಯ ಮೇಲೆ ವಿವಿಧ ಹೆಸರುಗಳಿಂದ ಪ್ರಚಲಿತವಿರುವ ದೇವ–ದೇವತೆಗಳ ಆರಾಧನೆಯನ್ನು ಕುರಿತದಾಗಿದೆ. ಗ್ರಾಮೀಣ ಜನ ಏಕದೇವತೋಪಾಸಕರಣ ಅಹುದು,

---

೧. ಜಾ.ಮ. ಸಂ. ಪುಟ. ೪೬೫

೨. ಅದೇ, ಪುಟ. ೪೬೫–೪೬೬

ಬಹುದೇವತೋಪಾಸಕರಣ ಅಹುದು. ಪ್ರತಿ ಕುಟುಂಬಕ್ಕೂ ಒಂದೊಂದು ಮನೆದೇವರುಂಟು. ಜತೆಗೆ ತಮ್ಮೂರಿನ ಮತ್ತು ನೆರೆಯೂರಿನ ದೇವರನ್ನೆಲ್ಲ ಪೂಜಿಸುತ್ತಾರೆ. ಮಾರಿಮಸಣಿಯರಲ್ಲೆಷ್ಟು ವಿಶ್ವಾಸವೋ ಹರಿಹರನಲ್ಲಿಯೂ ಅಷ್ಟೇ ವಿಶ್ವಾಸ. ಮಲೆಮಾದೇಶ್ವರನ್ನೆಷ್ಟು ಭಕ್ತಿಯಿಂದ ಪೂಜಿಸುತ್ತಾರೆಯೋ, ತಿರುಪತಿ ತಿಮ್ಮಪ್ಪನಿಗೂ ಅಷ್ಟೇ ಆಸಕ್ತಿಯಿಂದ ನಡೆದುಕೊಳ್ಳುತ್ತಾರೆ. ಹಿಗೆ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಜನಪದರು ಎಲ್ಲಾ ದೇವತೆಗಳ ನಾಮಸ್ಮರಣೆ ಮಾಡುವುದುಂಟು.

'ಜಾಗತಿಕ ಸಾಹಿತ್ಯಕ್ಕೆ ಕನ್ನಡ ಜನಪದ ಸಾಹಿತ್ಯದ ಕೊಡುಗೆ' ಈ ಸಂಕಲನದ ಶ್ರೇಷ್ಠ ಲೇಖನವೆಂದರೆ ತಪ್ಪಾಗಲಾರದು. ಜನವಾಣಿಯೇ ಕವಿವಾಣಿಯಾಯಿತೆಂಬಂತೆ, ಕಾಲಕ್ರಮೇಣ ಶಿಷ್ಟಸಾಹಿತ್ಯ ಪಂಡಿತರಿಗೆ ಸೀಮಿತಗೊಂಡು, ಜನಪದ ಸಾಹಿತ್ಯ ಪಾಮರ ಸಮುದಾಯದಲ್ಲಿ ವ್ಯಾಪಕವಾಗಿ ಹರಿಡಿಕೊಂಡು ಅವೆರಡೂ ಹೊನಲುಗಳೂ ಸಮಾನಾಂತರವಾಗಿ ಹರಿಯುತ್ತ ಕೊಳುಕೊಡೆಗಳನ್ನು ರೂಢಿಸಿಕೊಳ್ಳುತ್ತ ಸಾರ್ಥಕ ಸಾಂಸ್ಕೃತಿಕ ಮಾಧ್ಯಮಗಳಾದದ್ದುಂಟು. ಬೌದ್ಧಿಕ ವಿಕಾಸದೊಡನೆಯೆ ಜಗತ್ತಿನ ಎಲ್ಲ ಜನಾಂಗಗಳಲ್ಲಿ ಕಥೆ ಮತ್ತು ಗೀತೆಗಳು ಬಹುಪ್ರಮಾಣದಲ್ಲಿ ಮೂಡಿ, ಅವು ಆಯಾಯ ಜನರ ಸಾಂಸ್ಕೃತಿಕ ಆಸ್ತಿಗಳಾಗಿದ್ದುವೆಂಬುದರಲ್ಲಿ ಅನುಮಾನವಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಕನ್ನಡ ಸಾಹಿತ್ಯ ಕೃಷಿ ಚಿರಯವ್ವನವನ್ನು ಅನಾದಿಕಾಲದಿಂದ ಆಧುನಿಕ ಕಾಲದವರೆವಿಗೂ ಉಳಿಸಿಕೊಂಡು ಬಂದಿದೆ. ಹನ್ನೆರಡನೇ ಶತಮಾನದ ವಚನ ಚಳುವಳಿ ಪ್ರಪಂಚಕ್ಕೆ ಕೊಟ್ಟ ಹೆಮ್ಮೆ ಕನ್ನಡ ಸಾಹಿತ್ಯದ್ದು, ಹಾಗೆಯೇ ಜಾನಪದ ಎಂಬ ಕ್ಷೇತ್ರಕ್ಕೆ ಪ್ರವೇಶಿಸಿದಂತೆ ಅನೇಕ ಸಿದ್ಧಪುರುಷರು, ಜನಪದ ಕಥಾನಾಯಕ – ನಾಯಿಕೆಯರು, ಗೀತೆ, ಕಥನಕವನ – ಹೀಗೆ ಇದರ ಕೊಡುಗೆ ಅಗಾಧವಾಗಿದೆ. ಜಗತ್ತಿನ ಇತರ ಭಾಷೆಗಳ ಜಾನಪದ ಸಾಹಿತ್ಯಕ್ಕಿರುವಂತೆಯೇ ಕನ್ನಡ ಜನಪದ ಸಾಹಿತ್ಯಕ್ಕೆ ವಿಶಿಷ್ಟವಾದ ವ್ಯಕ್ತಿತ್ವವಿದೆ. ಪ್ರತಿಯೊಂದು ಜನಾಂಗವೂ ವಿಶಿಷ್ಟವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುತ್ತದಷ್ಟೇ. ಅದು ಪೂರ್ಣ ಪ್ರಮಾಣದಲ್ಲಿ ಅಭಿವ್ಯಕ್ತಿ ಹೊಂದುವ ಪ್ರಮುಖ ಮಾಧ್ಯಮವೆಂದರೆ ಸಾಹಿತ್ಯ. ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ಶಿವಶರಣರ ದಾರ್ಶನಿಕ ತತ್ವ ಗಂಡ–ಹೆಂಡಿರ ಜಗಳ ಗಂಧ ತೀಡಿದಾಂಗ ಎಂಬ ಮಾತುಗಳ ಆಧಾರದ ಮೇಲೆ ಭಾರತೀಯ ಕುಟುಂಬ ಪದ್ಧತಿಯ ಬೇರೂರಿದೆ.

ಕರುಣ ಬಂದರೆ ಕಾಯೋ ಮರಣ ಬಂದರೆ ಒಯ್ಯೊ
ಕರುಣಿ ಕಲ್ಯಾಣಿ ಬಸವಣ್ಣ। ಕಾಶಿಲಿಂಗ
ಕಡೆತನಕ ಕಾಯೊ ಅಭಿಮಾನ

ಭಾರತೀಯ ಧರ್ಮದ ಕಲ್ಪನೆ, ಹಾಗೂ ಜೀವನಾದರ್ಶ ಈ ಕಿರುಪದ್ಯದಲ್ಲಿ ಅಭಿವ್ಯಕ್ತಗೊಂಡಿದೆಯೆಂದೇ ಹೇಳಬೇಕು.

ಹಬ್ಬಹರಿದಿನಗಳನ್ನು ಮಳೆಯನ್ನು ದೇವರುಗಳನ್ನು ನಿಸರ್ಗವನ್ನು ಮದುವೆ-ಯೊಸಗೆಯನ್ನು ಆಚಾರಸಂಪ್ರದಾಯಗಳನ್ನು ಇಂಥ ನೂರಾರು ಸಾವಿರಾರು ಸಂಗತಿ-ಗಳನ್ನು ಕುರಿತ ಗೀತೆಗಳು, ಹಂತಿಯ ಪದಗಳಾಗಲಿ, ಅಂಟಿಕೆ ಪಂಟಿಕೆ ಹಾಡುಗಳಾಗಲಿ ಕನ್ನಡಕ್ಕೆ ಮಾತ್ರ ಮೀಸಲು, ಕನ್ನಡ ನಾಡಿನ ಸಂತ ಶರಣ ಸಾಧುಗಳನ್ನು ಕಿತ್ತೂರು ಚೆನ್ನಮ್ಮನಂಥ ವೀರಮಹಿಳೆಯನ್ನು, ಸಂಗೊಳ್ಳಿರಾಯಣ್ಣನಂಥ ವೀರಾಧಿವೀರರನ್ನು, ಉತ್ತರದೇವಿ, ಭಾಗಿರಥಿ, ಕೋಟೆ ಲಕ್ಷ್ಮಮ್ಮರಂಥ ಹುತಾತ್ಮೆಯರನ್ನು, ಇವರಂಥ ಹಲವಾರು ಮಾಸತಿಯರನ್ನು ಕುರಿತ ಕಥನಗೀತೆಗಳು ಕನ್ನಡ ಜಾನಪದ ಕಣಜವನ್ನು ಶ್ರೀಮಂತಗೊಳಿಸಿದಷ್ಟೇ ಅಲ್ಲ, ಜಾಗತಿಕ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ ಎಂದೇ ಹೇಳಬಹುದು.

ಜಾಗತಿಕ ನಾಟಕ ಕ್ಷೇತ್ರದಲ್ಲಿ ಯಕ್ಷಗಾನ ಬಯಲಾಟಕ್ಕೆ ಪ್ರತ್ಯೇಕ ಸ್ಥಾನ ಇದ್ದೇ ಇದೆ. ಈಚೀಚೆಗೆ ಅದು ಸಮಗ್ರ ಭಾರತದಲ್ಲೆಲ್ಲ ತನ್ನ ಯಶೋದುಂದುಭಿಯನ್ನು ಮೊಳಗಿಸಿದೆ. ಪೌರ್ವಾತ್ಯ ಹಾಗೂ ಪಾಶ್ಚಾತ್ಯ ವಿದ್ವಾಂಸರಿಂದ ಏಕರೀತಿಯಾಗಿ ಸ್ತುತ್ಯವಾಗಿರುವ ಯಕ್ಷಗಾನ ಜಾಗತಿಕ ಸಾಹಿತ್ಯ ಸರಸ್ವತಿಯ ಅಮೂಲ್ಯ ಕಂಠಾಭರಣವೆಂದೇ ಹೇಳಬೇಕು.

ಮಲೆಯ ಮಹಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಸಿದ್ದಪ್ಪಾಜಿ, ರಾಚಪ್ಪಾಜಿ, ಎಲ್ಲಮ್ಮ,... ಇಂತಹ ಪೌರಾಣಿಕ ವ್ಯಕ್ತಿಗಳು ಜಾನಪದ ಕಾವ್ಯಗಳಿಗೆ ವಸ್ತುವಾಗಿದ್ದು ಕನ್ನಡ ಜನಪದ ಕ್ಷೇತ್ರಕ್ಕೆ ಶ್ರೇಷ್ಠ ಕೊಡುಗೆ ಎನಿಸಿವೆ.

ದ್ರಾವಿಡ ಭಾಷೆಗಳು ಬಳಕೆಯಲ್ಲಿರುವ ದಕ್ಷಿಣ ಇಂಡಿಯಾ ೭೪° ಮತ್ತು ೮೦°ನೆಯ ಅಕ್ಷಾಂಶಗಳ ಹಾಗೂ ೮° ಮತ್ತು ೧೮° ರೇಖಾಂಶಗಳ ನಡುವಣ ಪ್ರದೇಶವನ್ನು 'ದ್ರಾವಿಡ' ಎಂದು ಕರೆದು ಅದರ ವಿಶೇಷ ಸ್ಥಾನಮಾನ, ಭಾಷೆ, ಸಂಸ್ಕೃತಿ, ಕೊಳುಕೊಡುಗೆಗಳನ್ನು ದಕ್ಷಿಣಭಾರತದ ಜಾನಪದ ನಂಬಿಕೆಗಳು ಅಧ್ಯಯನ' ಎಂಬ ಶೀರ್ಷಿಕೆಯಲ್ಲಿ ಚರ್ಚಿಸಿದ್ದಾರೆ.

'ಜಾತ್ರೆಗಳು' ಜಾನಪದ ಜೀವನದ ಅವಿಭಾಜ್ಯ ಅಂಗವಾಗಿರುವಂತೆಯೇ, ಜಾನಪದ ಸಂಸ್ಕೃತಿಯ ವಿಕಾಸಕ್ಕೆ ಚೈತನ್ಯದಾಯಿಗಳಾಗಿವೆ. ಅವುಗಳ ತಾಯಿಬೇರು ಭೂತಕಾಲದ ಗರ್ಭದಲ್ಲಿ ಹೂತ್ತುಕೊಂಡಿದ್ದರೂ, ಅವು ಆದಿಮಾನವನ ಕಾಲದಿಂದಲೇ ಧಾರ್ಮಿಕಾಚರಣೆಗಳ ಒಂದು ಪ್ರಮುಖ ಭಾಗವಾಗಿ ರೂಢಿಯಲ್ಲಿದ್ದಿರಬೇಕೆಂದು ತೋರುತ್ತದೆ (ಪುಟ. ೫.೬) ಜನಜೀವನ ಮಾರ್ಪಾಟಾದಂತೆ ಜಾತ್ರೆಗಳೂ ಪ್ರಾಚೀನರ ಕಲ್ಪನೆಗೂ ಎಟುಕದ ಹೊಸ ಹೊಸ ಸಂಗತಿಗಳನ್ನು ಗರ್ಭೀಕರಿಸಿಕೊಂಡು ಅಳತೆಯಿಲ್ಲದೆ ಬೆಳೆಯುತ್ತವೆ; ಅಂದಂದಿನ ಜನಪದದ ಅಗತ್ಯತೆಗಳನ್ನು ಪೂರೈಸುತ್ತವೆ. ಜಗತ್ತಿನ ಎಲ್ಲ ಜನಾಂಗಗಳಲ್ಲಿಯೂ ಸಾಮಾಜಿಕಾರ್ಥಿಕ ಸಾಂಸ್ಕೃತಿಕ ಧಾರ್ಮಿಕ ಪ್ರಯೋಜನಗಳಿಗೆ ಕಾರಣವಾದ ಜಾತ್ರೆಗಳ ಪ್ರಾಬಲ್ಯವನ್ನು ಒಂದಲ್ಲ ಒಂದು ರೂಪದಲ್ಲಿ ಕಾಣಬಹುದು.

ಕನ್ನಡ ನಾಡಿನಲ್ಲಿ ಜಾತ್ರೆಗಳು ಎಂದು ಆರಂಭವಾದುವೆಂದು ಸಾಧಾರಣವಾಗಿ ಹೇಳಲಾಗದು. ಮೊತ್ತಮೊದಲಿಗೆ ಬ್ರಹ್ಮಶಿವನ 'ಸಮಯಪರೀಕ್ಷೆ' ಮತ್ತು ಜನ್ನನ ಯಶೋಧರ ಚರಿತ್ರೆಗಳಲ್ಲಿ ಜಾತ್ರೆಗಳ ವಿವರಣೆ ಬರುತ್ತದೆ. 'ತೇರು' ಎನ್ನುವ ಪದ ಪ್ರಪ್ರಥಮವಾಗಿ ಪಂಪನಲ್ಲಿ ದೊರೆಯುತ್ತದೆ. ತೇರು ಜಾತ್ರೆಗಳ ಅನಿವಾರ್ಯಾಂಗ-ವಾದ್ದರಿಂದ, ಒಂದು ಸಾವಿರ ವರ್ಷಗಳ ಹಿಂದಕ್ಕೆ ಜಾತ್ರೆಗಳ ಇತಿಹಾಸವನ್ನು ಒತ್ತರಿಸಲು ಸಾಧ್ಯವಿದೆ (ಪುಟ. ೫೨೬-೫೨೭).

'ಜಾತ್ರೆ'ಗಳು ಸಾಹಿತ್ಯ ಕೃತಿಗಳಲ್ಲಿ ದಾಖಲಾದ ಸಂದರ್ಭದಿಂದ ಮೊದಲ್ಗೊಂಡು ಇತ್ತೀಚಿನವರೆಗೆ ಅನೇಕ ಬದಲಾವಣೆಗೆ ಒಳಗಾಗಿ ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿವೆ. ಸಂಸ್ಕೃತದ 'ಯಾತ್ರಾ' ಎಂಬ ಶಬ್ದವೇ ಕನ್ನಡದ ಜಾತ್ರೆ'ಯಾಗಿದೆ. 'ಯಾತ್ರಾ' ಪದಕ್ಕೆ ಅನೇಕ ಅರ್ಥಗಳಿವೆ. ಚಲನೆ, ಪ್ರಯಾಣ, ಸೈನ್ಯಾಕ್ರಮಣ, ತೀರ್ಥಯಾತ್ರೆ, ಹಬ್ಬ, ಸಂತೆ, ಮೆರವಣಿಗೆ, ರಸ್ತೆ ಮನರಂಜನೆ. ಕನ್ನಡದಲ್ಲಿ ಯಾತ್ರೆ ಮತ್ತು ಜಾತ್ರೆ ಎಂಬೆರಡು ಶಬ್ದಗಳೂ ರೂಢಿಯಲ್ಲಿದ್ದು 'ಯಾತ್ರಾ' ಪದದ ಮೂಲಾರ್ಥಗಳನ್ನೆಲ್ಲ ಅವೆರಡು ಹಂಚಿಕೊಂಡಂತಿವೆ. ದೇವಾಲಯಗಳ ಇತಿಹಾಸದೊಡನೆ ಜಾತ್ರೆಗಳ ಇತಿಹಾಸವನ್ನು ಗಂಟು ಹಾಕುವುದುಂಟು. ದೇವಾಲಯಗಳಿಲ್ಲದಿದ್ದರೂ ಜಾತ್ರೆಗಳಿರಲಿಲ್ಲವೆಂದು ಹೇಳುವುದು ಕಷ್ಟವೇ ಸರಿ.

ಸಾಮಾನ್ಯವಾಗಿ ಕರ್ನಾಟಕದಾದ್ಯಂತ ಎಲ್ಲಾ ಜಾತ್ರೆಗಳೂ ಯಾವುದಾದರೊಂದು ದೇವರ ಹೆಸರಿನಲ್ಲಿ ಅಥವಾ ಆಶ್ರಯದಲ್ಲಿ ನಡೆಯುತ್ತವಷ್ಟೆ. ಸವದತ್ತಿ ಎಲ್ಲಮ್ಮ ಜಾತ್ರೆ, ಉಜ್ಜನಿ ಚೌಡಮ್ಮನ ಜಾತ್ರೆ, ದಂಡಿನಮಾರಮ್ಮ ಜಾತ್ರೆ, ತಿಪ್ಪೇಸ್ವಾಮಿ ಜಾತ್ರೆ, ಚಿಕ್ಕಲ್ಲೂರು ಜಾತ್ರೆ, ಮುಡುಕತೊರೆ ಜಾತ್ರೆ, ಅಪ್ರಮೇಯಸ್ವಾಮಿ ಜಾತ್ರೆ ಇವೇ ಮೊದಲಾದ

ಜಾತ್ರೆಗಳನ್ನು ಹೆದರಿಸುತ್ತಿರುವಾಗಲೇ ಆಯಾಯ ದೇವರ ಚಿತ್ರ ಕಣ್ಮುಂದೆ ನಿಲ್ಲುತ್ತದೆ. ಹಾಗೆಯೇ ಸುಪ್ರಸಿದ್ಧ ಬೆಂಗಳೂರಿನ ಕಡಲೆಕಾಯಿ ಪರಿಷೆಯೂ ದೊಡ್ಡ ಬಸವಣ್ಣನ ಗುಡಿಯ ಮುಂದೆಯೇ ನಡೆಯುವಂಥದ್ದನ್ನು ಕಾಣಬಹುದಾಗಿದೆ.

'ಊರಿಗೊಂದು ಜಾತ್ರೆ ಮೈಲಿಗೊಂಡು ಯಾತ್ರೆ' (ಪುಟ. ೫೩೦) ಎನ್ನುವ ಗಾದೆಯಲ್ಲಿ ಕಾವ್ಯಸತ್ಯ ಅಡಗಿರುವುದಾದರೂ, ವಾಸ್ತವ ಸಂಗತಿ ಬೇರೆ ತೆರನಾಗಿದೆ. ಜಾತ್ರೆಗಳ ಮತ್ತು ಯಾತ್ರಾಸ್ಥಳಗಳ ಬಾಹುಳ್ಯವನ್ನು ಈ ಗಾದೆ ಸೂಚಿಸುತ್ತದೆ. ಮಾರಿಮಸಣಿ ದುರ್ಗಿ ಕ್ಯಾತ ಭೈರವ ಮೊದಲಾದ ಗ್ರಾಮದೇವತೆಗಳ ಹೆಸರಿನಲ್ಲಿ ನಡೆಯುವ ಉತ್ಸವಗಳನ್ನು ಗ್ರಾಮ ಅಥವಾ ಜಾನಪದ ಜಾತ್ರೆಗಳೆಂದೂ, ಅಪ್ರಮೇಯ ಸ್ವಾಮಿ, ನಂಜನಗೂಡು ಜಾತ್ರೆ, ಚಲುವರಾಯಸ್ವಾಮಿ, ವಯಿರಮುಡಿ ಉತ್ಸವವನ್ನೂ ನಾಗರಿಕ ಅಥವಾ ಶಿಷ್ಟಪದ ಜಾತ್ರೆಗಳೆಂದೂ ಕರೆಯಬಹುದಾಗಿದೆ. ಶರಣರ, ಶಿವಯೋಗಿಗಳ, ಸಂತ ಸಾಧುಗಳ, ಮಹಾಪುರುಷರ ಹೆಸರಿನಲ್ಲಿಯೂ ಜಾತ್ರೆಗಳು ನಡೆಯುತ್ತವೆ. ಮಂಟೇಸ್ವಾಮಿ, ಮಾದೇಶ್ವರ, ಶರಣ ಬಸವೇಶ್ವರ, ವಿಜಯ ಮಹಾಂತೇಶ್ವರ ಮೊದಲಾದ ಹೆಸರಿನಲ್ಲಿಯೂ ವಿಜೃಂಭಣೆಯಿಂದ ಜಾತ್ರೆಗಳು ನಡೆಯುತ್ತವೆ. ಇವನ್ನು ಸಾಧುಸಂತರ ಜಾತ್ರೆಗಳೆಂದು ಹೆಸರಿಸಬಹುದು. 'ಕರ್ನಾಟಕ-ದಲ್ಲಿ ಒಂದು ಸಾವಿರಕ್ಕೂ ಮಿಗಿಲಾಗಿ ಜಾತ್ರೆಗಳುಂಟೆಂದು ಡಾ. ಮಲ್ಲಿಕಾರ್ಜುನ ಲಠ್ಠೆ'ಯವರು ಹೇಳುತ್ತಾರೆ (ಪುಟ. ೫೩೦).

೩) ಜಾನಪದ ಸೌಂದರ್ಯ

ಡಾ. ದೇ.ಜವರೇಗೌಡರ 'ಜಾನಪದ ಸೌಂದರ್ಯ' ಗ್ರಂಥವು ಹತ್ತು ಲೇಖನಗಳ ಸಂಕಲನ. ಈ ಪುಸ್ತಕದ ಎಲ್ಲ ಲೇಖನಗಳು ಒಂದಿಲ್ಲೊಂದು ವಿಧದಲ್ಲಿ ಜಾನಪದ ಕಲೆ ಹಾಗೂ ಸಾಹಿತ್ಯಗಳನ್ನೇ ಕುರಿತಿವೆ. ಜನಪದಗೀತೆಗಳಲ್ಲಿ ಶಿಶು' ಮೊತ್ತಮೊದಲ ಲೇಖನವಾಗಿದ್ದು ಮಗುವಿನ ಜನನದಿಂದ ಮೊದಲ್ಗೊಂಡು ಅದು ಯವ್ವನಾವಸ್ಥೆಯನ್ನು ಮುಟ್ಟುವವರೆಗಿನ ಜನಪದ ಗೀತೆಗಳನ್ನು ತ್ರಿಪದಿಯಲ್ಲಿ ಕಟ್ಟಿಕೊಟ್ಟಿರುವ ಜನಪದರು ಅವರ ಜೀವಂತ ಬದುಕಿನ ಪ್ರತಿಬಿಂಬವನ್ನು ದಾಖಲಿಸಿದ್ದಾರೆ. ಅಷ್ಟೇ ಸಮರ್ಥವಾಗಿ ದೇಜಗೌ ಅವರು ಸಮಯ ಸಂದರ್ಭಕ್ಕನುಗುಣವಾಗಿ ಜನಪದ ತ್ರಿಪದಿಗಳನ್ನು ಉದ್ಧರಣೆ ಮಾಡುವುದರ ಮೂಲಕ ಸ್ಪಷ್ಟವಾದ ಚೌಕಟ್ಟನ್ನು ನಿರ್ಮಿಸಿಕೊಟ್ಟಿದ್ದಾರೆ.

ಇಲ್ಲಿನ ಪದ್ಯಗಳ ವರ್ಣನೆ ಹೆಂಗಸಿನ ಅಂತಃಕರಣದಿಂದ ಹೊರಹೊಮ್ಮಿದು-ದಾಗಿದೆ. ಇಲ್ಲಿಯ ಹಾಡುಗಳಲ್ಲಿ ಮಗುವಿನ ಒಂದೊಂದು ಸಂದರ್ಭದ ಚಿತ್ರ ರೂಪುಗೊಳ್ಳುತ್ತದೆ. ಸ್ತ್ರೀ ಹೃದಯದ ಭಾವವಿಲಾಸಗಳೆಲ್ಲ ಮೂರ್ತಗೊಳ್ಳುತ್ತದೆ. ತ್ಯಾಗ, ವಾತ್ಸಲ್ಯ ಮತ್ತು ಸ್ವರ್ಗಸೌಂದರ್ಯಗಳ ಸಮ್ಮಿಲನವೇ ಹೆಣ್ಣು ಹೃದಯವಾಗಿ

ರೂಪಾಂತರಗೊಂಡಂತೆ ಇಲ್ಲಿಯ ಶಿಶುಗೀತೆಗಳಿಂದ ಸುವ್ಯಕ್ತವಾಗುತ್ತದೆ. ಇಲ್ಲಿಯ ಒಂದೊಂದು ಹಾಡು ಪ್ರೇಮಸಸಿಯಲ್ಲರಳಿದ ಸೌಗಂಧಿಕ ಪುಷ್ಪವಾಗಿದೆ (ಪುಟ. ೬೧೭-೬೧೮) ಎಂಬ ಮಾತು ಅನುಕರಣೀಯವಾದುದು.

ವಂಶದ ಕುಡಿಯನ್ನು ನಿಮಿರಿಸುವ ತಮ್ಮ ಕೀರ್ತಿಯನ್ನು ಹಬ್ಬಿಸುವ, ತಮ್ಮ ಪ್ರೇಮ ಮೂರ್ತ ಸ್ವರೂಪ ಪಡೆಯಬೇಕೆನ್ನುವ ತಂದೆತಾಯಿಯರ ಬಯಕೆ ಸಹಜವಾದದ್ದೇ. ಸಂತಾನ ಸಾಗಲಿಲ್ಲವೆಂದರೆ ಸಂಸಾರ ನಿಸ್ಸಾರವಾಗಿ, ಹೆಣ್ಣಿನಬಾಳು ನರಕಯಾತನೆಯಾಗಿರುತ್ತದೆ. ಗಂಡಿನ-ಹೆಣ್ಣಿನ ಅಧಮ್ಯಪ್ರೀತಿ ಶಾಶ್ವತವಾಗಿರಲು ಜನಪದ ಹೆಣ್ಮಗಳು

ಕಂದನ ಕೊಡು ಶಿವನೆ ಬಂಧನ ಬಿಡಲಾರೆ
ಹಂಗೀನ ಬಾನ ಉಣಲಾರೆ! ಮರ್ತ್ಯದಾಗ
ಬಂಜೆಂಬ ಶಬುದು ಹೊರಲಾರೆ

ಎಂದು ಅವಳು ಹಗಲಿರುಳು ಪರಿತಪಿಸುತ್ತಾಳೆ. ಕಂಡ ಕಂಡ ದೇವರು ದಿಂಡರಿಗೆಲ್ಲ ಕೈಮುಗಿದು ಹರಕೆ ಕಟ್ಟಿಕೊಳ್ಳುತ್ತಾಳೆ.

ಅವಳು ಬಸುರಿಯಾದಳೆಂದರೆ ಕೊಟ್ಟ ಮನೆ ತಂದ ಮನೆ ಎರಡರಲ್ಲಿಯೂ ಹಬ್ಬದ ಸಡಗರ ವಿಜೃಂಭಿಸುತ್ತದೆ. ಮಗುವಾಗಿ ಬಾಹ್ಯ ಪ್ರಪಂಚಕ್ಕೆ ಬಂದ ಅನಂತರ ತಾಯಿಯ ಪ್ರೀತಿ ಮಗುವಿನ ಮೇಲೆ ಅಗಾಧವಾಗಿ ಸಾಗುತ್ತದೆ. ದೇಜಗೌ ಅವರು ಹುಟ್ಟು ಜಾನಪದರಾದ್ದರಿಂದ ಅಲ್ಲಿನ ಜನಪದ ತ್ರಿಪದಿಗಳನ್ನು ಹೇಗೆ ಹಂತಹಂತವಾಗಿ ಗಂಡ ಕಟ್ಟಿ ಜನಪದರ ಜೀವನ ಪೂರ್ಣವಾಗಬೇಕೆಂದು ಅರಿತಿದ್ದಾರೆ.

'ಕಾವ್ಯಗಳಲ್ಲಿ ಜಾನಪದ' ಎಂಬ ಲೇಖನದಲ್ಲಿ ವಿಸ್ತಾರವಾಗಿ ಹರಡಿಕೊಂಡಿರುವ ಕನ್ನಡ ಸಾಹಿತ್ಯದಲ್ಲಿನ ಕಾವ್ಯಮಾಲೆಯಲ್ಲಿ ಜಾನಪದೀಯ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. 'ಜಾನಪದ ಮತ್ತು ಶಿಷ್ಟಪದಗಳು ಒಂದೇ ಸಂಸ್ಕೃತಿಯ ಎರಡು ಕವಲುಗಳು, ಇವೆರಡೂ ಕೆಲವು ಕಡೆ ಸಮಾನಾಂತರವಾಗಿ, ಇನ್ನೆಡೆಗಳಲ್ಲಿ ಒಂದಾಗಿ, ಮತ್ತೆ ಕೆಲವು ಕಡೆ ಹತ್ತಿರವಾಗಿ ಹರಿಯುತ್ತವೆ. ಆದರೆ ಅವೆರಡರ ಪರಸ್ಪರ ಪ್ರಭಾವ ಯಾವಾಗಲೂ ಇದ್ದದ್ದೇ. ಕೆಲವು ಶಿಷ್ಟಕವಿಗಳು ಜಾನಪದ ಸಾಹಿತ್ಯವನ್ನು ಹಂಗಿಸುವವರಾದರೂ, ಅವರಿಗರಿವಿದ್ದೋ ಅರಿವಿಲ್ಲದೆಯೋ ಜಾನಪದ ಸಂಸ್ಕೃತಿಯ ಕಿರಣಗಳು ಅವರ ಕೃತಿಗಳಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುತ್ತವೆ. ಕೆಲವು ವೇಳೆ ಅವೆರಡೂ ಅಪ್ರತ್ಯೇಕವೆಂದೂ ಭ್ರಮೆ ಹುಟ್ಟಿಸುವಷ್ಟರ ಮಟ್ಟಿಗೆ ವಿಲಯನಗೊಂಡಿರುತ್ತವೆ. ಇಲಿಯಡ್ ಈನಿಯಡ್‌ಗಳಾಗಲೀ, ರಾಮಾಯಣ ಮಹಾಭಾರತಗಳಾಗಲೀ,

ಶೇಕ್ಸ್‌ಪಿಯರ್ ಆಗಲಿ ಕಾಳಿದಾಸನಾಗಲೀ ಜಾನಪದ ಸಂಸ್ಕೃತಿಯ ಮುಷ್ಟಿಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತುಸು ಅಡ್ಡಾಡಿದರೆ ಸಾಕು, ಜಾನಪದೀಯಾಂಶಗಳು ಕಣ್ಣಿಗೆ ಬಡಿಯುವಂತೆ ಭಾಸವಾಗುತ್ತವೆ (ದೇಜಗೌ, ಜಾ.ಸಮ. ಸಂಪುಟ, ಪುಟ. ೬೩೫).

ದೇಜಗೌ ಅವರು ಕಾವ್ಯಗಳಲ್ಲಿನ ಜಾನಪದೀಯ ಅಂಶಗಳನ್ನು ಉದ್ದರಿಸಿರುವ ವಾಕ್ಯಗಳಲ್ಲಿ ಗರ್ಭವತಿಯಾದ ಮರುದೇವಿ ಕಂಡ ಷೋಡಶ ಸ್ವಪ್ನಗಳು, ಆದಿನಾಥನ ಹೆಂಡತಿ ಯಶಸ್ವತಿ ಮಹಾದೇವಿ ಕಂಡ ಸ್ವಪ್ನದ ವಿವರಣೆ, ಹರಿಶ್ಚಂದ್ರ ಕಾವ್ಯದ ಹರಿಶ್ಚಂದ್ರ ಹಾಗೂ ಜೈಮಿನಿ ಭಾರತದ ರಾಮಚಂದ್ರ ಕಂಡ ಸ್ವಪ್ನಗಳು, ಚಂದ್ರದಾಸನಿಗೆ ವಿಷಕೊಟ್ಟು ಕೊಲ್ಲಿಸು ಎಂದು ಮಗನಿಗೆ ಕಾಗದ ಬರೆದು ಕಳಿಸಿದ ನಂತರ, ತನ್ನ ಮಾತನ್ನು ಮಗ ನಡೆಯಿಸಿದನೋ ಇಲ್ಲವೋ ಎಂಬ ಕಾತರತೆಯಿಂದ ದುಷ್ಟಬುದ್ಧಿ ಕುಂತಳಪುರಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಸರ್ಪವೊಂದು ಇದಿರಾಗಿ "ನಿನ್ನಾಲಯದೊಳಿಂದುವರೆಗೊಡವೆಯಂ ಕಾದಿರ್ದೆನೆದು ತನ ತನುಜನಿಂದ ಪೋದುದು ಎಂದು ನಡಿಯುವಲ್ಲಿ "... ಇಂತಹ ಅನೇಕ ನಿದರ್ಶನಗಳಲ್ಲಿ ಜಾನಪದೀಯಾಂಶಗಳನ್ನು ಕಾಣಬಹುದಾಗಿದೆ.

ಜಾನಪದ ಸಂಸ್ಕೃತಿ ಎಷ್ಟರಮಟ್ಟಿಗೆ ಶಿಷ್ಟಸಾಹಿತ್ಯವನ್ನು ಪ್ರವೇಸಿಸಬಹುದು ಎನ್ನುವುದರ ಅಧ್ಯಯನ ತುಂಬ ಕುತೂಹಲಕಾರಿಯಾದುದುಮಾತ್ರವಲ್ಲ, ಬಹು ಪ್ರಯೋಜನಕಾರಿಯಾದ ಸಂಗತಿ. ಕುಮಾರವ್ಯಾಸ ಭಾರತದಲ್ಲಿ ಬರುವ ಜಾನಪದೀಯ ಅಂಶಗಳೆಂದರೆ, "ನೀರು ಹೊರಗಿಕ್ಕುವುದು ಮೂರೇ ಬಾರಿ", "ಬಡವರ ಕೋಪ ಪೌಡಿಗೆ ಮೃತ್ಯು", ಬೆಂದ ಹುಣ್ಣಲಿ ಸಾಸುವೆಯ ಬಳಿಯದಿರು" 'ಹೊರಗಣ ಮಾರಿ ಹೊರಹೊರಗೆ, ಸಿಡಿಲನು ಪೊಟ್ಟಣಗಟ್ಟಿ' – ಇವೇ ಮೊದಲಾದ ಗಾದೆಗಳು ಬಹುಸಂಖ್ಯೆಯಲ್ಲಿ ಈ ಕೃತಿಯನ್ನು ಪ್ರವೇಶಿಸಿವೆ.

ಕುಮಾರವ್ಯಾಸನ ಕಾಲದಲ್ಲಿ ಚಲಾವಣೆಯಲ್ಲಿದ್ದ ಕೆಲವು ಜನಪದ ಆಟಗಳು ಕಾವ್ಯದಲ್ಲಿ ಉಕ್ತಗೊಂಡಿದೆ. ಆಳಿನೇರಿಕೆ, ಹಿಡಿಗವಡೆ, ಚೆಂಡಿನ ಹೋಣಕೆ, ಆಳುಗೊತ್ತಿನ ದಂಡೆ, ಗುಡುಗು, ಹರಿಹಲಗೆ, ನಿಡುಗವಣೆ, ಕೆಡಹು, ಕುಟ್ಟುಗ. ಇಲ್ಲಿ ಔಷಧಿಗಾದರೂ ಒಂದು ಸಂಸ್ಕೃತ ಪದವಿಲ್ಲ' ಎಂಬ ಲೇಖಕರ ತೀಕ್ಷ್ಣಮತಿಯನ್ನು ಹೊಮ್ಮಿಸುತ್ತದೆ.

ಇಂಥ ಜಾನಪದೀಯಾಂಶಗಳ ಸೇರ್ಪಡೆಯಿಂದ ಕಾವ್ಯದಲ್ಲಿ ಸಮಕಾಲೀನ ಪ್ರಜ್ಞೆ ಸುಸ್ಪಷ್ಟವಾಗಿ ಮೈದೋರುತ್ತದೆ. ಅದಕ್ಕೊಂದು ಹೊಸ ಮೆರಗು, ವಿಶಿಷ್ಟತೆಯೂ ಸಮನಿಸುತ್ತದೆ. ಇಡೀ ಕನ್ನಡ ಸಾಹಿತ್ಯವನ್ನು ಪೂರ್ಣವಾಗಿ ಅಧ್ಯಯನ ಮಾಡಿ

ಅಲ್ಲಿಯ ಜಾನಪದೀಯಾಂಶಗಳನ್ನು ಗುರುತಿಸುವುದಾದರೆ, ಆಗ ಜಾನಪದ ಕ್ಷೇತ್ರಕ್ಕೆ ಮಹತ್ವಪೂರ್ಣವಾದ ಸೇವೆಯನ್ನು ಸಲ್ಲಿಸಿದಂತಾಗುತ್ತದೆಂಬುದನ್ನು ಈ ಸಮೀಕ್ಷಾ ಲೇಖನ ಸ್ಪಷ್ಟಪಡಿಸುತ್ತದೆ. ಆದಿಪುರಾಣ, ರಾಮನಾಥ ಚಾರಿತ್ರ್ಯ, ಸೋಮನಾಥ ಚಾರಿತ್ರ, ಹರಿಶ್ಚಂದ್ರ ಕಾವ್ಯ, ಪಂಪಭಾರತ, ಜೈಮಿನಿಭಾರತ ಮುಂತಾದ ಕಾವ್ಯಗಳಿಂದ ಹಾಗೂ ಶಿವಶರಣ ಮತ್ತು ಸರ್ವಜ್ಞನ ವಚನಗಳಿಂದ ಸಮೃದ್ಧ ನಿದರ್ಶನಗಳನ್ನು ನೀಡುವುದರ ಮೂಲಕ ಅಸ್ಪಷ್ಟತೆ ಸಂದಿಗ್ಧತೆಗಳೇ ಪ್ರಮುಖ ಲಕ್ಷಣವಾಗಿರುವ ಶಕುನ-ಸ್ವಪ್ನಗಳ ವಿಚಾರ ಶಿಷ್ಟಸಾಹಿತ್ಯದಲ್ಲಿ ಹೇಗೆ ಬಂದಿದೆ ಎಂದು ಲೇಖಕರು ವಿವರಿಸುತ್ತಾರೆ. ಇಷ್ಟೇ ಅಲ್ಲ ಕುಮಾರವ್ಯಾಸ ಭಾರತವನ್ನು ತುಸು ಆಳವಾಗಿಯೇ ವ್ಯಾಸಂಗ ಮಾಡಿದ್ದಾರೆ.

'ವ್ಯಕ್ತಿನಾಮ'ಗಳು ತುಂಬ ಸ್ವಾರಸ್ಯಕರವಾದ ಪ್ರಬಂಧವಾಗಿದೆ. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಜನಾಂಗಗಳಲ್ಲಿ ವ್ಯಕ್ತಿನಾಮ, ಕೃತಕನಾಮ, ಪ್ರತಿನಾಮ ಹಾಗೂ ಉಪನಾಮಗಳನ್ನು ಕುರಿತು ಇರುವ ಭಾವನೆಗಳನ್ನು ಇಲ್ಲಿ ತಿಳಿಸಲು ಪ್ರಯತ್ನಿಸಲಾಗಿದೆ. ಸಾಮಾಜಿಕಕ್ಷೇತ್ರದಲ್ಲಿ ವ್ಯಕ್ತಿನಾಮಕ್ಕಿರುವ ಮಹತ್ವವನ್ನು ಗಮನಿಸುವಾಗ, 'ಹೆಸರಿನಲ್ಲೇನಿದೆ? ಗುಲಾಬಿಯನ್ನು ಬೇರೆ ಹೆಸರಿನಿಂದ ಕರೆದರೂ ಅದರ ಪರಿಮಳಕ್ಕೆ ಕೊರತೆಯಿಲ್ಲ' ಎಂಬ ಕವಿವಚನ ಸಾರ್ವತ್ರಿಕ ಸತ್ಯವೆಂದು ನಂಬಲಾಗುವುದಿಲ್ಲ ಎಂಬ ಲೇಖಕರು ಆದಿಮಾನವನ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಹೆಸರುಗಳ ಬಗ್ಗೆ ಜನರಿಗಿದ್ದ ಭಾವನೆಗಳನ್ನು ಸೋದಾಹರಣವಾಗಿ ತಿಳಿಸಿದ್ದಾರೆ. ಅಮೇರಿಕ, ಆಸ್ಟ್ರೇಲಿಯ, ಈಜಿಪ್ಟ್, ಉತ್ತರ ಯುರೋಪ್ ಮತ್ತು ಅಸ್ಸಾಮು ಮುಂತಾದ ಭಾರತದ ಪ್ರದೇಶಗಳ ಸಾಂಸ್ಕೃತಿಕ ಅಧ್ಯಯನವನ್ನು ಲೇಖಕರು ಎಷ್ಟು ಆಳವಾಗಿ ನಡೆಸಿದ್ದಾರೆ ಎಂದು ಓದುಗರು ಅಚ್ಚರಿಪಡುವಂತೆ ಮಾಡುವ ಈ ಲೇಖನದ ಕೊನೆಯಲ್ಲಿ ಅಡ್ಡ ಹೆಸರುಗಳು ಸಾಮಾನ್ಯವಾಗಿ ಹೇಗೆ ಹುಟ್ಟಿಕೊಳ್ಳುತ್ತವೆ ಎಂಬುದನ್ನೂ ಸ್ವಾರಸ್ಯಕರವಾಗಿ ತಿಳಿಯಲಾಗಿದೆ. ವ್ಯಕ್ತಿನಾಮಗಳನ್ನೆಲ್ಲ ಒಟ್ಟಾಗಿ ಪರಿಶೀಲಿಸಿ, ನಾಮಕರಣಕ್ಕೆ ಸಂಬಂಧಿಸಿದಂತೆ ಹಿನ್ನೆಲೆಯಲ್ಲಿರುವ ಕೆಲವು ಆಧಾರತತ್ತ್ವಗಳನ್ನು ಲೇಖಕರು ಪಟ್ಟಿಮಾಡಿಕೊಟ್ಟಿದ್ದಾರೆ. ವ್ಯಕ್ತಿನಾಮಗಳನ್ನು ಕುರಿತ ವ್ಯವಸ್ಥಿತ ಅಧ್ಯಯನ ನಡೆಸಬಯಸುವ ಉತ್ಸಾಹಿಗಳಿಗೆ ಈ ಲೇಖನ ಸಾಮಾಗ್ರಿ ಉಪಯುಕ್ತ ಆಕರವಾಗಬಹುದು.

ಉಳಿದ ಲೇಖನಗಳಲ್ಲಿ 'ಯಕ್ಷಗಾನ ವಿಚಾರ' ಹಾಗೂ 'ಯಕ್ಷಗಾನ ಭವಿಷ್ಯ' ಎಂಬೆರಡು ಲೇಖನಗಳು ಯಕ್ಷಗಾನ ಪದದ ನಿಷ್ಪತ್ತಿ, ಯಕ್ಷಗಾನದ ಹುಟ್ಟು ಬೆಳವಣಿಗೆಗಳು, ಅದರ ಶಾಖೋಪಶಾಖೆಗಳು, ಜನಜೀವನದಲ್ಲಿ ಅದಕ್ಕಿರುವ ಪಾತ್ರಗಳನ್ನು ಕುರಿತು ವಿವೇಚಿಸುತ್ತವೆ. 'ಯಕ್ಷ' ಎಂಬ ಪದ ಸಂಸ್ಕೃತವಾಗಿರದೆ ದಕ್ಷಿಣ

ಇಂಡಿಯಾದ ಅತಿ ಪುರಾತನವಾದ ಒಂದು ಜನವರ್ಗದ ಹೆಸರಾಗಿತ್ತೆಂದೂ, ನಾಟ್ಯ ಶಬ್ದವೇ ದ್ರಾವಿಡರ ಕಾಣಿಕೆಯೆಂದು, ಅದು ನಟ ಎಂಬ ಧಾತುವಿನಿಂದ ಬಂದದ್ದೆಂದೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ನಟರಾಜ ದ್ರಾವಿಡರ ದೇವರೆಂಬುದೂ ಈ ಅಭಿಪ್ರಾಯಕ್ಕೆ ಪುಷ್ಟಿಕೊಡುತ್ತದೆಂದೂ, ತಮಿಳು ಪ್ರಬಂಧಕಾವ್ಯಶಿಲಪ್ಪದಿಕಾರಮ್‌ದಲ್ಲಿ ಕರ್ನಾಟಕದ ನಟ್ಟುವರ ನಾಟ್ಯದ ವಿಷಯಕ್ಕೆ ಉಲ್ಲೇಖವಿದೆಯೆಂದೂ, ಜಪಾನಿನ 'ಕಾಬೂಕಿ' ನಾಟಕಕ್ಕೆ ಗೊಂಬೆಯಾಟವೇ ಮೂಲವೆಂಬ ಸಂಗತಿಗಳನ್ನು ತಮ್ಮ ಖಚಿತನುಡಿಗಳಿಂದ ನಿರ್ಧರಿಸಿದ್ದಾರೆ.

'ಜಾನಪದ ಸಾಹಿತ್ಯ – ಸ್ಥೂಲಪರಿಚಯ' ಹೆಸರೇ ಸೂಚಿಸುವಂತೆ ಜಾನಪದ ಸಾಹಿತ್ಯದ ಸ್ಥಾನಮಾನಗಳನ್ನು ಅದರ ವಿವಿಧ ಪ್ರಕಾರಗಳನ್ನೂ ಕುರಿತ ಲೇಖನವಾಗಿದೆ. ನೇರವಾಗಿ ಹೃದಯದಿಂದ ಬಂದ, ಹೃದಯವನ್ನು ಪ್ರವೇಶಿಸುವ' ಜಾನಪದ ಸಾಹಿತ್ಯದಲ್ಲಿ ಪ್ರೌಢಪದಗಳ ಸರಣಿಯಿಲ್ಲದೆ ಇರಬಹುದು. ಅಲಂಕಾರಗಳ ಗೊಡ್ಡು ಆಡಂಬರವಿಲ್ಲದಿರಬಹುದು, ಉಕ್ತಿವೈಚಿತ್ರ್ಯಗಳ ಕಪಟನಟನೆಯಿಲ್ಲದಿರಬಹುದು. ಅದರೂ ಅಲ್ಲಿಯ ಮಾತಿನಲ್ಲೊಂದು ಶಕ್ತಿಯಿದೆ, ಬಿಗಿಯದೆ, ಸೌಂದರ್ಯವಿದೆ, ಪದಬಂಧದ ಶೈಥಿಲ್ಯದಲ್ಲೂ ಒಂದು ಸೊಗಸಿದೆ. ಅದ್ದರಿಂದ ಯಾವುದೇ ವಿಧದಲ್ಲೂ ಜಾನಪದ ಸಾಹಿತ್ಯ ಶಿಷ್ಟಸಾಹಿತ್ಯಕ್ಕಿಂತ ಕಡಿಮೆಯಲ್ಲ ಎಂದು ಅಭಿಪ್ರಾಯಪಡುವ ಲೇಖಕರು (ರಸಷಷ್ಟೀ, ಕೆ.ಸಚ್ಚಿದಾನಂದಯ್ಯ, ಪುಟ. ೪೯೭–೪೯೮) ಜಾನಪದಗೀತೆ–ಗಳಲ್ಲಿ ಅಂದಂದಿನ ಕಾಲದ ಸಮಾಜದ ಜನರ ನಡೆನುಡಿ ಸಂಪ್ರದಾಯ ಆಚಾರವಿಚಾರಗಳು ಅಭಿವ್ಯಕ್ತಗೊಂಡ ಬಗೆಯನ್ನು 'ಜಾನಪದ ಸಾಹಿತ್ಯದಲ್ಲಿ ಸಮಾಜದರ್ಶನ' ಹಾಗೂ ಗರತಿಯ ಹಾಡುಗಳು' ಎಂಬ ಲೇಖನಗಳಲ್ಲಿ ವಿವೇಚಿಸಿದ್ದಾರೆ. ಪ್ರಮುಖ ಪಾಠಾಂತರಗಳನ್ನು ಆಧರಿಸಿ ಉತ್ತರದೇವಿಗೆ ಸಂಬಂಧಿಸಿದ ಕತೆಗಳನ್ನು 'ಉತ್ತರ ಕರ್ನಾಟಕದಲ್ಲಿ ಪ್ರಚುರವಾಗಿರುವ ಸಂಪ್ರದಾಯವನ್ನು 'ಚ' ಎಂಬ ಸಂಕೇತದಿಂದಲೂ, ಮಲೆನಾಡಿನಲ್ಲಿ ಹರಡಿರುವ ಮಧ್ಯಮ ಸಂಪ್ರದಾಯವನ್ನು 'ಕ' ಎಂಬ ಸಂಕೇತದಿಂದಲೂ, ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ರೂಢಿಯಲ್ಲಿರುವ ದಕ್ಷಿಣ ಸಂಪ್ರದಾಯವನ್ನು 'ಟ' ಎಂಬ ಸಂಕೇತದಿಂದ ಗುರುತಿಸಿರುವ ಸಮಗ್ರ ವಿಶ್ಲೇಷಣೆ ನಮಗೆ 'ಜನಪದ ಸಾಹಿತ್ಯದಲ್ಲಿ ಉತ್ತರದೇವಿಯ ಪ್ರಸಂಗ' ಎಂಬ ಲೇಖನದಲ್ಲಿ ಸಿಗುತ್ತದೆ.

ಕರ್ನಾಟಕದಲ್ಲಿ ಜಾನಪದ ಸಾಹಿತ್ಯಕ್ಕೊಂದು ಗೌರವದ ಸ್ಥಾನ ಲಭಿಸುವಂತೆ, ಜಾನಪದ ಸಾಹಿತ್ಯದ ಅಧ್ಯಯನ ಹಾಗೂ ವ್ಯವಸ್ಥಿತ ಸಂಗ್ರಹ ಕಾರ್ಯಗಳಿಗೆ

ಅಗತ್ಯವಿರುವ ಪ್ರೋತ್ಸಾಹ ಅವಕಾಶಗಳು ಸಿಗುವಂತೆ ಮಾಡಿದ ಮಹನೀಯರಲ್ಲಿ ದೇಜಗೌ ಅವರು ಪ್ರಮುಖರು.

ಈ ಸಂಕಲನದ ಕೊನೆಯಲ್ಲಿ ಶ್ರೀ ದೇ.ಜವರೇಗೌಡರು, ಶ್ರೀ ನಾರಾಯಣಗೌಡ ಅವರು ಸಂಪಾದಿಸಿರುವ 'ಮಂಡ್ಯಜಿಲ್ಲೆಯ ಜನಪದ ಕಥೆಗಳು', ಶ್ರೀ ಹಿ.ಶಿ.ರಾಮಚಂದ್ರ ಗೌಡ ಅವರ 'ಕಥಕ್ಕಳಿ', ಶ್ರೀ ಎನ್.ಆರ್.ನಾಯಕ ಅವರ 'ಪಡುಕೋಗಿಲೆ' ಈ ಪುಸ್ತಕಗಳಿಗೆ ಅವರು ಬರೆದ ಮುನ್ನುಡಿಯಲ್ಲಿ ಆಯಾ ಸಂಗ್ರಹಕಾರರ ಬಗ್ಗೆ ಒಳ್ಳೆಯ ಪ್ರೋತ್ಸಾಹಕರವಾದ ಮಾತುಗಳನ್ನು, ಜಾನಪದ ಸಂಗ್ರಹಕಾರರು ಎದುರಿಸುವ ಸಮಸ್ಯೆಗಳು ಮೊದಲಾದ ವಿಷಯಗಳ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಇದು ಅವರ ಭಾಷೆಯ ಬಗ್ಗೆ ಮತ್ತು ಸಂಸ್ಕೃತಿ ಬೆಳವಣಿಗೆಯಾಗಬೇಕು ಎಂಬುದು ದೇಜಗೌ ಅವರ ದೂರದೃಷ್ಟಿಯಾಗಿದೆ.

'ಹೀಗೆ ಜಾನಪದ ವೈವಿಧ್ಯಮಯ ವಸ್ತುವನ್ನುಳ್ಳ ಹಲವಾರು ಲೇಖನಗಳು ಮೇಲಿನ ಸಂಕಲನದಲ್ಲಿ ನಮಗೆ ದೊರೆಯುತ್ತವೆ. ಇಲ್ಲಿಯ ಲೇಖನಗಳನ್ನು ಯಾವುದೋ ನಿರ್ದಿಷ್ಟ ಸಂದರ್ಭದಲ್ಲಿ ಪ್ರಕಟಣೆಗಾಗಿ ಅಥವಾ ಉಪನ್ಯಾಸಕ್ಕಾಗಿ ಬರೆಯಿಸಲಾಗಿರುವುದರಿಂದ ಮತ್ತು ಇವುಗಳ ರಚನೆಯ ಕಾಲಗಳ ನಡುವೆ ಬಹಳಷ್ಟು ಅಂತರವಿರುವುದರಿಂದ ಸಹಜವಾಗಿಯೇ ಪುನರುಕ್ತಿ ದೋಷಗಳು ಅಲ್ಲಲ್ಲಿ ಕಂಡುಬರುತ್ತವೆ. ಇವುಗಳನ್ನು ಪಕ್ಕಕ್ಕೆ ಇಟ್ಟು ನೋಡಿದಾಗ ಆ ಕೃತಿಯಲ್ಲಿ ಮಹತ್ವದ ಅಂಶಗಳು ಅಡಕಗೊಂಡಿವೆ. ಒಟ್ಟಿನಲ್ಲಿ ಈ ಕೃತಿಯು ಕನ್ನಡ ಜಾನಪದ ಕ್ಷೇತ್ರಕ್ಕೆ ದೇಜಗೌ ನೀಡಿರುವ ಅಮೂಲ್ಯ ಕೊಡುಗೆಗಳಲ್ಲಿ ಈ ಕೃತಿಯೂ ಒಂದು ಎಂದು ಶ್ರೀ ಟಿ.ಕೆ. ಕೆಂಪೇಗೌಡ ಅವರು ನಿರ್ಧರಿಸಿದ್ದಾರೆ.[೧]

ಡಾ. ದೇಜಗೌ ಅವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಮತ್ತು ಜಾನಪದ ಪ್ರಾಧ್ಯಾಪಕರಾಗಿದ್ದಾಗ ಇವರ ಮಾರ್ಗದರ್ಶನದಲ್ಲಿ ಜಾನಪದ ಪ್ರಾಧ್ಯಾಪಕರಾದ ಡಾ. ಜೀಶಂಪ ಅವರು 'ದಕ್ಷಿಣ ಕರ್ನಾಟಕದ ಜನಪದ ಕಾವ್ಯಸಂಪ್ರದಾಯಗಳು' ಎಂಬ ವಿಷಯವಾಗಿಯೂ, ಡಾ. ಡಿ.ಕೆ.ರಾಜೇಂದ್ರ ಅವರು "ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ" ಎಂಬ ವಿಷಯವಾಗಿಯೂ, ಡಾ. ತೀ.ನಂ.ಶಂಕರನಾರಾಯಣ ಅವರ "ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು" ಎಂಬ ವಿಷಯವಾಗಿಯೂ ಸಂಶೋಧನೆಗಳನ್ನು ನಡೆಸಿ ಪ್ರೌಢನಿಬಂಧ-ಗಳನ್ನು ಬರೆದು ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.

---

೧. ಅನಿಕೇತನದಲ್ಲೊಂದು ವಿಶ್ವಚೇತನ – ಪುಟ. ೧೧೯.

೪) ಜನಪದ ಗೀತಾಂಜಲಿ

ಜಾನಪದ ಗೀತೆಗಳ ವಿವಿಧ ಪ್ರಕಾರಗಳನ್ನು ಪ್ರತಿನಿಧಿಸುವ ಹಾಡುಗಳ ಸಂಗ್ರಹ 'ಜನಪದ ಗೀತಾಂಜಲಿ' ಆಗಿದೆ. ಈ ಕೃತಿಯನ್ನು ದೇಜಗೌ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಸಂಪಾದಿಸಿಕೊಟ್ಟಿದ್ದಾರೆ. ಸಾಹಿತ್ಯಿಕ ದೃಷ್ಟಿಯಿಂದ ಇಲ್ಲಿ ಅತ್ಯುತ್ತಮವಾದ ಗೀತೆಗಳನ್ನೆಲ್ಲಾ ಸಂಗ್ರಹಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಕೃತಿಗೆ ಇಪ್ಪತ್ತೊಂಬತ್ತು ಪುಟಗಳ ಒಪ್ಪವಾದ ಮುನ್ನುಡಿಯನ್ನು ಬರೆದಿದ್ದಾರೆ. ಇದು ಮಹತ್ವವೂ ಮೌಲಿಕವೂ ಆದ ಮುನ್ನುಡಿಯಾಗಿದೆ (ವಿಶ್ವಚೇತನದಲ್ಲೊಂದು ಅನಿಕೇತನ – ಟಿ.ಕೆ.ಕೆಂಪೇಗೌಡ ಪುಟ. ೧೦೯). ಇಲ್ಲಿಯ ಗೀತೆಗಳಲ್ಲಿ ವಿಪುಲವಸ್ತು ವೈವಿಧ್ಯ ಅವರ ಆಳವಾದ ಅಭ್ಯಾಸವನ್ನು ಅಪಾರವಾದ ಅನುಭವವನ್ನು ನಾವು ಕಾಣಬಹುದಾಗಿದೆ.

ಈ ಗ್ರಂಥದಲ್ಲಿ ಸ್ತುತಿಗೀತೆಗಳು, ಪೌರಾಣಿಕ ಗೀತೆಗಳು, ಸಾಂಸಾರಿಕ ಗೀತೆಗಳು, ಪ್ರೇಮಗೀತೆಗಳು, ನೀತಿಕಥೆಗಳು, ಸಂವಾದಗೀತೆಗಳು, ಕಥನಗೀತೆಗಳು, ಸಂಕೀರ್ಣಗೀತೆಗಳು ಎಂದು ಎಂಟುವಿಧದಲ್ಲಿ ಕನ್ನಡದ ಪ್ರಾತಿನಿಧಿಕವಾದ ಕರ್ನಾಟಕದ ಎಲ್ಲ ಭಾಗಗಳ ಜಾನಪದ ಗೀತೆಗಳನ್ನು ದೇಜಗೌ ಸಂಪಾದಿಸಿ ಕನ್ನಡ ಜಾನಪದ ಸಂಸ್ಕೃತಿಯನ್ನು ಅನನ್ಯತೆಯನ್ನು ಎತ್ತಿತೋರಿಸಿದ್ದಾರೆ. ಸಂಪಾದಿಸುವಲ್ಲಿನ ಅವರ ಆಲೋಚನಾ ದೃಷ್ಟಿ ಎಂಥದಾಗಿತ್ತು ಎಂಬುದಕ್ಕೆ ಪ್ರಾಸ್ತಾವಿಕವಾಗಿ ಕೆಲವೊಂದು ಅಂಶಗಳನ್ನು ನಿದರ್ಶನವಾಗಿ ನೋಡಬಹುದು.

ಜನಪದ ಸಾಹಿತ್ಯ ಜೀವಂತ ಜನತೆಯ ಜೀವನ ಚಿತ್ರ. ತಮ್ಮ ಭಾಷೆಯಲ್ಲಿ ಅಲಂಕಾರವಿದೆ, ಚಮತ್ಕಾರವಿದೆ, ವೈಶಿಷ್ಟ್ಯವಿದೆ ಎಂಬ ಅರಿವು ಅವರಿಗಿರುವುದಿಲ್ಲ. ಜನಪದರ ಬಾಳಿನಲ್ಲಿ ಮದುವೆಗಿಂತಲೂ ಹಿರಿಯತನ ಮತ್ತೊಂದಿಲ್ಲ ಎನ್ನಿಸುತ್ತದೆ. ಎಲ್ಲೋ ಹುಟ್ಟಿ ಬೆಳೆದ ಹೆಣ್ಣು ಎಲ್ಲೋ ಹುಟ್ಟಿ ಬೆಳೆದ ಗಂಡೊಂದನ್ನು ಕೈಹಿಡಿದು ಆಡಿ ಬೆಳೆದ ಅಂಗಳವನ್ನು ತೊರೆದು ಹೊರಡುವಂತಹ ಪ್ರಸಂಗ ಹೆಣ್ಣಿಗೂ ಆಕೆಯ ತವರಿನವರಿಗೂ ಕಡುದುಃಖವನ್ನು ಚಿತ್ರಿಸುವ ಸಂದರ್ಭವನ್ನು ಜನಪದ ಭಾಷೆಯಲ್ಲೇ ಹೇಳುವುದಾದರೆ

ಕಪ್ಪರದ ಗುಡ್ಡಕ್ಕೆ ಬೆಂಕಿ ತುಪ್ಪದಲ್ಲೇ
ಕೊಟ್ಟಾಂಗ ಅಪ್ಪನ ಹೊಟ್ಟೆ ತಳಮಳಿಸುತ್ತದೆ

ಇಲ್ಲಿ ತಂದೆ ದುಃಖಪಡುತ್ತಾರೆ ಎಂದು ಹೇಳುವ ಮಾತಿಗೂ ಮೇಲಿನ ಮಾತಿಗೂ ತುಂಬನೆ ವ್ಯತ್ಯಾಸವಿದೆ. ವಿಶಿಷ್ಟವಾದ ಅರ್ಥವೊಂದನ್ನು ಕೊಡುತ್ತಿದೆಯೋ ಅನ್ನಿಸಿಬಿಡುತ್ತದೆ ನಮಗೆ. ಈ ತರನ ಜನಪದ ಪದ್ಯಗಳು ನಮ್ಮ ಮನಸ್ಸಿಗೆ ನಾಟಿದಾಗ

ನಮಗೆ ರಸಾನುಭವ ಉಂಟಾಗಿ ಹೃದಯ ಸಂಸ್ಕಾರಗೊಳ್ಳುವಂಥ ಇಂಥ ಪದ್ಯಗಳನ್ನು ಸುಂದರವಾಗಿ ಅವರು ಸಂಪಾದಿಸಿಕೊಟ್ಟಿದ್ದಾರೆ. ಹಾಗೆಯೇ ಈ ಗ್ರಂಥದಲ್ಲಿ ರಾಗಿಯ ಕಲ್ಲಿಗೆ ಕೊಡುವ ಮಹತ್ವದ ಹಿರಿಮೆಯನ್ನು ಎತ್ತಿಹಿಡಿಯುವ ಗೀತೆಗಳನ್ನು ತಂದೆತಾಯಿಯರ ಪ್ರೀತಿಪಾತ್ರಗಳಾಗಿ ಬೆಳೆದು, ಅಕ್ಕತಂಗಿ ಅಣ್ಣ ತಮ್ಮ ಬಡತನ, ಸಿರಿತನ, ಪ್ರೇಮಗೀತೆ, ಗರತಿಗೆ ಸಂಬಂಧಪಟ್ಟ ಗೀತೆಗಳು ತುಂಬ ಅರ್ಥಪೂರ್ಣವಾಗಿ ಸಂಗ್ರಹಿಸಿಕೊಟ್ಟಿರುವುದು ದೇಜಗೌ ಅವರ ಕನ್ನಡ ಜಾನಪದ ಭಾಷೆಯ, ಸಾಹಿತ್ಯ ಸಂಸ್ಕೃತಿಗೆ ದ್ಯೋತಕವಾಗಿದೆ ಎಂದೇ ಹೇಳಬಹುದು.

೫) ಭಾರತದ ಜಾನಪದ ಕಥೆಗಳು

ಇದೊಂದು ಅನುವಾದ ಕೃತಿ. ವಿಶೇಷವಾಗಿ ಮಕ್ಕಳಿಗೆಂದೇ ಸಂಪಾದಿಸಿ ಅನುವಾದಿಸಿದ ಕಥೆಗಳು ಇದರಲ್ಲಿವೆ. ಬೇಲಾತಿಸ್ಲೆರೋವ ಎಂಬುವವರ ದೇಶದ ವಿವಿಧ ಭಾಷೆಗಳಿಂದ ಅನುವಾದಿಸಲ್ಪಟ್ಟಿರುವ ಕತೆಗಳ ಸಂಗ್ರಹದ ಕೃತಿಯನ್ನು ದೇಜಗೌ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಒಂದು ಕೃತಿಯಲ್ಲಿ 'ಫಲಿಸದ ಸ್ವರ್ಗಯಾತ್ರೆ', ಸಾಧ ದಂಡಕವಿ ವಿವೇಕಿಯಾದದ್ದು, ಸಲಹೆಗಾರ ವಿವೇಕಿಯೋ? ಕೆಂಪು ಆಮೆಯ ಕಥೆ, ಶಿಕ್ಷೆಗೆ ಗುರಿಯಾದ ಜಿಪುಣ, ನಳ್ಳಿಯಮಾಂಸ, ರುಚಿ ಹಚ್ಚಿದ ಕೊಂಚೆ, ಮುವರು ಬುದ್ಧಿವಂತರು, ಜಂಬದ ಕಡ್ಡೆ ಹಾಗೂ ಋಜಮರಿಯಾನೆ, ಕುಯಕ್ತಿಯ ಫಕೀರ, ದೊರೆಯ ಮಗ ಮತ್ತು ನರಿ, ಪರ್ವತ ರಾಜ್ಯದ ರಾಜಕುಮಾರಿ, ನಾಲ್ವರು ಗೆಳೆಯರು, ಕೆಚ್ಚೆದೆಯ ಸಹೋದರರು, ನಿರಾಶೆ ಹೊಂದಿದ ಹೋರಿ.. ಹೀಗೆ ಹದಿನಾಲ್ಕು ಕಥೆಗಳನ್ನು ಒಳಗೊಂಡಿರುವ ಕೃತಿ. ಸುಲಭವಾಗಿ ಮೂಡಿಬಂದಿರುವ ಮಹತ್ವದ ಕೃತಿಯಾಗಿದೆ. ಒಟ್ಟಿನಲ್ಲಿ ಈ ಕೃತಿ ಬೇರೆ ಭಾಷೆಯಿಂದ ಅನುವಾದಿಸಿದ್ದರೂ ಕೂಡ ಕನ್ನಡ ಜಾನಪದ ಸಂಸ್ಕೃತಿಗೆ ಅನನ್ಯ ಕೊಡುಗೆಯಾಗಿದೆ. ಅಷ್ಟೇ ಅಲ್ಲ ಇಲ್ಲಿನ ಭಾಷೆ, ಸಂಸ್ಕೃತಿಗೆ ತೀರ ಹತ್ತಿರವಾದ ವಿಷಯವಾಗಿದೆ ಎಂಬ ಮನಃಸ್ಥಿತಿ ಈ ಕಥೆಗಳಿಂದ ಉಂಟಾಗುತ್ತದೆ.

೬) ಜಾನಪದ ವಿಚಾರಧಾರೆ

ಈ ಸಂಕಲನವು ಹದಿಮೂರು ಲೇಖನಗಳ ಸಂಗ್ರಹ ಕೃತಿಯಾಗಿದೆ. 'ಜನಪದ ಗೀತೆಯ ಸ್ವರೂಪ' ಲೇಖನವು 'ಜನಪದ ಗೀತಾಂಜಲಿ'; ಗೀತೆಗಳ ಸಂಕಲನವಾಗಿದೆ. ಗೀತೆ, ಕಥನಗೀತೆ, ಖಂಡಕಾವ್ಯ ಮತ್ತು ಮಹಾಕಾವ್ಯ ಇವಿಷ್ಟೂ ಜನಪದ ಕಾವ್ಯದ ಪರಿಧಿಯಲ್ಲಿ ಬರುವಂಥವು. ಕನ್ನಡದಲ್ಲಿ ಇವುಗಳ ಗಾತ್ರ ತುಂಬ ದೊಡ್ಡದು. ಅವುಗಳನ್ನೆಲ್ಲ ಒಂದೇ ಒಂದು ಸಂಕಲನ ಗ್ರಂಥದಲ್ಲಿ ಅಡಕಗೊಳಿಸಲು ಸಾಧ್ಯವಿಲ್ಲ.

ಅಂಥ ಪ್ರಯತ್ನ ಅಸಮರ್ಪಕವಾಗುತ್ತದೆ. ಆದ್ದರಿಂದ ಇಲ್ಲಿ ಗೀತೆಗಳ ಆಯ್ಕೆಗೆ ಮಾತ್ರ ವಿಶೇಷ ಲಕ್ಷ್ಯವನ್ನು ಹರಿಸಲಾಗಿದೆ. ಕನ್ನಡ ನಾಡಿನ ಎಲ್ಲ ಪ್ರಾಂತ್ಯಗಳ ಗೀತೆಗಳಿಗೂ ಇಲ್ಲಿ ಪ್ರಾತಿನಿಧ್ಯ ನೀಡಲು ಪ್ರಯತ್ನಿಸಲಾಗಿದೆ. ಗಾತ್ರದ ಭಯದಿಂದಾಗಿ ಉತ್ತಮ-ವಾದದ್ದೆಲ್ಲವನ್ನು ಇಲ್ಲಿ ಸೇರಿಸಲಾಗಿಲ್ಲ. ಇಲ್ಲಿ ಸೇರ್ಪಡೆಗೊಂಡಿರುವ ಗೀತೆಗಳಲ್ಲಿ ಬಹುಪಾಲು – ಏಕೆ ಎಲ್ಲವೂ – ಕಾಲದೇಶಾತೀತವಾಗಿ, ಸರ್ವಾಕರ್ಷಣೀಯವಾಗಿ ನಿಲ್ಲಬಲ್ಲುವೆಂದೂ, ಅವುಗಳ ವ್ಯಾಸಂಗ ಮಾನವನನ್ನು ಶಿವಪಥದಲ್ಲಿ ಕೊಂಡೊಯ್ಯುತ್ತ-ವೆಂದೂ ಸಂಪಾದಕನಿಗೆ ಮನದಟ್ಟಾಗಿದೆ[೧] ಎಂದು ದೇಜಗೌ ಅವರು ಅಭಿಪ್ರಾಯಪಟ್ಟಿದ್ದಾರೆ.

ದ್ರಾವಿಡ ಜಾನಪದ' ಎಂಬ ಲೇಖನವು ದಕ್ಷಿಣ ಭಾರತದಲ್ಲಿಯೇ ಪ್ರಪ್ರಥಮವಾದ ದ್ರಾವಿಡ ಜಾನಪದವನ್ನು ಕುರಿತ ವಿಚಾರಗೋಷ್ಠಿಯ ಉದ್ಘಾಟನ ಭಾಷಣವಾಗಿದೆ. ವಿಪುಲ ವ್ಯಾಖ್ಯಾನಗಳೊಂದಿಗೆ ಐದು ಐತಿಹಾಸಿಕ ಲಾವಣಿಗಳನ್ನು ಪ್ರಕಟಿಸಿ, ಆ ಮೂಲಕ ಜಾನಪದ ಅಧ್ಯಯನಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟ "ಜಾನ್‌ಪೇಯ್ತ್‌ಫುಲ್ ಫ್ಲೀಟ್" ಅವರನ್ನು ಕನ್ನಡ ಜಾನಪದ ಅಧ್ಯಯನದ ಪಿತಾಮಹರೆಂದೇ ದೇಜಗೌ ಕರೆದಿದ್ದಾರೆ. ಇಲ್ಲಿಯವರೆವಿಗೂ ಜಾನಪದ ಸಂಗ್ರಹ ಹೆಮ್ಮೆ ಎನಿಸುವಷ್ಟರಮಟ್ಟಿಗೆ ಕೆಲಸಕಾರ್ಯವಾಗಿದೆ. ಆದರೂ ಭವಿಷ್ಯದಲ್ಲಿ ಉತ್ತಮ ಜಾನಪದ ಕೆಲಸಕಾರ್ಯಗಳು ಆಗಬೇಕೆಂದು ತಮ್ಮ ಜಾನಪದದ ಬಗೆಗಿನ ಕಳಕಳಿ, ತುಡಿತವನ್ನು ವ್ಯಕ್ತಪಡಿಸಿದ್ದಾರೆ.

'ಜಾನಪದ ಸಂಸ್ಕೃತಿ' ಎಂಬ ಲೇಖನವು ವಿಶಾಲಾರ್ಥದಲ್ಲಿ ಜನಪದ ಸಂಸ್ಕೃತಿ, ಆಚಾರ-ವಿಚಾರ, ನಂಬಿಕೆಗಳನ್ನೆಲ್ಲವನ್ನು ಅರ್ಥವತ್ತಾಗಿ ವಿವರಿಸುವ ವಸ್ತುವಾಗಿದೆ. ಜಾನಪದವೇ ಅವರ ಧರ್ಮ, ಗ್ರಾಮದೇವತೆಯೇ ಅವರ ಪ್ರಮುಖ ದೇವರು. ಊರಿಗೊಂದು ಗ್ರಾಮದೇವತೆಯಿದ್ದರೂ ಹರಿಹರ ಭೇದವನ್ನು ನೆಪಮಾಡಿಕೊಂಡು ಜಗಳವಾಡುವ ಶಿಷ್ಟರಂತೆ ಜನಪದರು ಎಂದೂ ಕಲಹವಾಡಿದ್ದಿಲ್ಲ. ಕಲಹವಾಗಿದ್ದರೆ ಅನ್ಯ ಸಂಸ್ಕೃತಿಯ ಪ್ರೇರಣೆಯಿರಬೇಕು. ಅವರ ಸ್ವದೇವತಾಶ್ರದ್ಧೆ, ಪರದೇವತಾ ಸಹನೆ ಜಗತ್ತಿಗೆ ಮಾದರಿ. ಅವರು ಜಗತ್ತಿನ ಎಲ್ಲ ದೇವರುಗಳಿಗೆ ಕೈಮುಗಿಯುವ ವಿಶ್ವಮಾನವರು (ಜಾ.ಮ. ಸಂಪುಟ, ಪುಟ. ೭೭೮). ಇಂಥ ನುಡಿಗಳಿಗಿಂತಲೂ ಜನಪದವನ್ನು ಜನಪದರನ್ನು ತಲಸ್ಪರ್ಶಿ, ಹೃದಯಸ್ಪರ್ಶಿಯಾಗಿ ವಿವರಿಸಿದವರನ್ನು ಕಾಣಲು ಸಾಧ್ಯವಿಲ್ಲವೇನೊ ಅನಿಸುತ್ತದೆ.

---

೧. ಜಾ.ಮ. ಸಂಪುಟ, ಪುಟ – ೭೭೪

ಅಕ್ಷರವಿದ್ಯೆ ಜನಪದರಿಗೆ ಕನಸಾದರೂ, ಜ್ಞಾನವಿದ್ಯೆ ವಂಶಪಾರಂಪರ್ಯವಾಗಿ ಸಾಮಾನ್ಯರಿಗೆ ಲಭಿಸುತ್ತದೆ. ಜನಪದ ಗೀತೆಗಳು ಜನಾಂಗದ ಸಾರಸಂಪತ್ತೂ ಹೌದು. ಗ್ರಾಮೀಣ ಸಂಸ್ಕೃತಿಯ ಮಹಾಭಾರತವೂ ಹೌದು. ಒಂದು ನಾಡಿನ ಸಾಂಸ್ಕೃತಿಕ ಚರಿತ್ರೆಗೆ ಜನಪದ ಗೀತೆಗಳೇ ತಳಹದಿ. ಶಿಷ್ಟ ಸಂಸ್ಕೃತಿಗೆ ಮಾತ್ರವಲ್ಲ, ಶ್ರುತಿ ಪರಂಪರೆಯ ವೇದಗಳಿಗೂ ಜನಪದ ಸಂಸ್ಕೃತಿಯೇ ತಳಹದಿಯೆಂದರೆ ಅತಿಶಯೋಕ್ತಿಯಾಗಲಾರದು. ವಾಸ್ತವವಾಗಿ ರಾಮಾಯಣ, ಮಹಾಭಾರತಗಳ ತಾಯಿಬೇರುಗಳು ಜನಪದ ಸಾಹಿತ್ಯದಲ್ಲಿವೆ (ಪುಟ. ೭೭೧ ಅದೇ) ಎಂದೇ ದೇಜಗೌ ಭಾವಿಸಿದ್ದಾರೆ.

ಹಲಗೆ ಹಿಡಿದಿಲ್ಲ ಬಳಪದಿ ಬರೆದಿಲ್ಲ
ಶ್ರೀ ಗುರುವು ನಮಗೆ ಬರೆಸಿಲ್ಲ– ಕೇಳಿರವ್ವ
ಲೆಕ್ಕಣಿಕೆ ನಮಗೆ ಗೊತ್ತಿಲ್ಲ (ಪುಟ. ೭೭೯)

ಸ್ತ್ರೀ ಶೂದ್ರರಾದಿಯಾದ ಜನಪದ ಕವಿಗಳು ಸ್ವಯಂಭೂಗಳು. ಬೆಳಿಗ್ಗೆ ಹಾಸಿಗೆಯಿಂದ ಮೇಲೇಳುತ್ತಿದ್ದಂತೆ 'ಎಳ್ಳು ಜೀರಿಗೆ ಬೆಳೆಯೋಳಾ ಭೂಮಿ ತಾಯ ಎದ್ದೊಂದು ಗಳಿಗೆ ನೆನೆದೇನು' ಎನ್ನುವ ಬದುಕು ಇಡೀ ಜಾನಪದ ಸಾಹಿತ್ಯಕ್ಕೆ, ಕನ್ನಡದ ಪದಪುಂಜ ಜಾನಪದ ವಸ್ತುವೇ ಸಂಕೀರ್ಣತೆಯಿಂದ ಕೂಡಿದ್ದು ಜಗತ್ತಿನ ಜಾನಪದ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಯೇ ಆಗಿವೆ.

'ಜಾನಪದ ಪ್ರಾರ್ಥನೆ' ಎಂಬ ಅಧ್ಯಾಯವು ವಸ್ತುವಿನ ವ್ಯಾಪ್ತಿಯಲ್ಲಿ ಚಿಕ್ಕದಾದರೂ ಅದರ ಅರ್ಥ ವಿಶಾಲತರವಾದುದು. ಪ್ರತಿಯೊಬ್ಬ ಜನಪದರು ತಮ್ಮ ದೈನಂದಿನ ಬದುಕಿನಲ್ಲಿ ಎಲ್ಲರಿಗೂ ಸುಖಸಂತೋಷಗಳು ಪ್ರಾಪ್ತವಾಗಲಿ, ಮಳೆ–ಬೆಳೆ ಸಮೃದ್ಧವಾಗಲಿ, ನೆಮ್ಮದಿಯ ಜೀವನ ಸಕಲ ಜೀವರಾಶಿಗಳಿಗೂ ಆ ಭಗವಂತ ಕರುಣಿಸಲಿ ಎಂಬ ಹಿರಿದಾದ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಇವರು ತಾವು ಬದುಕಿ ಇತರರೂ ಬದುಕಿ ಬಾಳಲಿ ಎಂಬ ಸಹಬಾಳ್ವೆ ಮನೋಭಾವವಿದೆ. ತಮ್ಮ ಅನುದಿನದ ಪ್ರಾರ್ಥನೆಯಲ್ಲಿ ಸರ್ವೋದಯವನ್ನೂ ವಿಶ್ವಕ್ಷೇಮವನ್ನೂ ಬಯಸುತ್ತಾನೆ. ಅಲ್ಲದೆ ಸಾಂಸ್ಕೃತಿಕ ವಿಕಾಸಕ್ರಮದಲ್ಲಂತೂ ಜಾನಪದರ ಪಾತ್ರ ಅಮೂಲ್ಯವಾದುದೆಂದೇ ಹೇಳಬೇಕು. ಪಾಠಪ್ರವಚನಗಳಿಂದ ಸಂಲಬ್ಧವಾದ ಪಾಂಡಿತ್ಯವಲ್ಲ, ಚಿಂತನ ಮಂಥನಾನುಭವಗಳಿಂದ ಪ್ರಾಪ್ತವಾದ ಭಾವಭಾವನೆಗಳ ರಸಪಾಕವೇ ಜಾನಪದ ಸಾಹಿತ್ಯದ ತಿರುಳು. ಊರ ಬೆಳೆಗೆ ಕಾಲಕಾಲಕ್ಕೆ ಮಳೆ ಬೀಳಲೆಂದು ದನ ಕುರಿಕರು ಆಡುಗಳು ಹೆಚ್ಚಲೆಂದವರು ಪ್ರಾರ್ಥಿಸುತ್ತಾರೆ. ಅಷ್ಟೇ ಸಾಲದು,

ಕೆರೆಕಟ್ಟೆ ಕಾಲುವೆ ಹರಿಯಲಿ,
ಬಾವೀಲಿ ಸಿಹಿನೀರು ಉಕ್ಕಲಿ!

ಎಂದು ಜನಪದರು ಮೊರೆಸಲ್ಲಿಸುತ್ತಾರೆ.

'ಶಕ್ತಿಯುತವಾದ ಕನ್ನಡ ಜಾನಪದಕ್ಕೆ ಅಳಿವಿಲ್ಲ' ಎಂಬ ಶೀರ್ಷಿಕೆಯೆ ಸತ್ವಯುತವಾಗಿದೆ. ಕರ್ನಾಟಕ ಜಾನಪದ ವೈವಿಧ್ಯಮಯವಾದದ್ದು, ವೈಭವಪೂರ್ಣ-ವಾದದ್ದು. ಅದು ಗುಣಗಾತ್ರಗಳಲ್ಲಿ ಜಗತ್ತಿನ ಯಾವುದೇ ಭಾಷೆಯ ಜಾನಪದದ ಎತ್ತರಕ್ಕೆ ನಿಲ್ಲಬಲ್ಲುದು ಮಾತ್ರವಲ್ಲ, ಒಂದು ಕೈ ಅವುಗಳಿಗಿಂತ ಮಿಗಿಲೆಂದೆ ಹೇಳಬಹುದು. ಅದು ಎರಡು ಸಾವಿರ ವರ್ಷಗಳಷ್ಟು ಪ್ರಾಚೀನವಾದದ್ದು. ಅದು ಕೆಳವರ್ಗದವರ ಸ್ತ್ರೀಯರ, ನಿರಕ್ಷರಿಗಳ ಹೃದಯದಿಂದ ನೇರವಾಗಿ ಹೊರಹೊಮ್ಮಿದ್ದು ವಿರಾಣ್ಮನಸ್ಸಿನಿಂದ ಮೂಡಿದ್ದು ಎಂದು ಶ್ರೀ ದೇಜಗೌ ಅಭಿಪ್ರಾಯಪಟ್ಟಿದ್ದಾರೆ.

ಪ್ರಪ್ರಾಚೀನ ಮಾನವನ ಮನಸ್ಸನ್ನರಿಯಲಂತು ಜಾನಪದವೊಂದೇ ಅನಿವಾರ್ಯ ಆಕರ. ಆಧುನಿಕ ಜ್ಞಾನ ವಿಜ್ಞಾನ ಸೋತಾಗ ಜಾನಪದವನ್ನೇ ಮರೆಹೋಗ-ಬೇಕಾಗುತ್ತದೆ. 'ಕನ್ನಡ ಜಾನಪದ ವಿಶ್ವವಿದ್ಯಾನಿಲಯ ಪಟ್ಟವಣೆಯನ್ನೇರಿದ ನಂತರ ಅದು ಸಹಸ್ರಮುಖಿಯಾಗಿ ಜ್ಯೋತಿಶಕ್ತಿಯಾಗಿ ಜಗತ್ತಿಗೆ ಕಾಣಿಸಿಕೊಳ್ಳುತ್ತಿದೆ. ಕಥೆ, ಐತಿಹ್ಯ, ಗಾದೆ, ಒಗಟು, ಲಾವಣಿ, ಗೀತೆ, ಪಾಡ್ದನೆ, ಪುರಾಣ, ಮಹಾಕಾವ್ಯ ಹೀಗೆ ಅದರ ಹತ್ತು ಹಲವು ಪ್ರಕಾರಗಳ ಬಗ್ಗೆ ಸಂಗ್ರಹಣೆ, ಅಧ್ಯಯನ, ಬೋಧನೆ, ಸಂಶೋಧನೆ, ಪ್ರವಚನ, ವ್ಯಾಖ್ಯಾನ ಪ್ರಕಟಣೆ, ಅವಿರತವಾಗಿ ಸಾಗುತ್ತಿದೆ. ವಿಶ್ವವಿದ್ಯಾನಿಲಯಗಳಿಗೆ ಪೂರಕವಾಗಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಉತ್ತಮವಾದ ಕೆಲಸ ಮಾಡುತ್ತಿದೆ (ಜಾ.ಮ. ಸಂಪುಟ. ಪುಟ. ೬೯೭) ಎಂದಿದ್ದಾರೆ ದೇಜಗೌ. ಪ್ರಕೃತದಲ್ಲಿ ಜಾನಪದ ಸಂಮೃದ್ಧವಾಗಿ ಹುಲುಸಾಗಿ ಬೆಳೆಯುವ ಪೈರಿನಂತೆ ತನ್ನ ಸ್ಥಾನಮಾನವನ್ನು ವಿಶಾಲವ್ಯಾಪ್ತಿಯಲ್ಲಿ ಹರಡುತ್ತಿದೆ. ದೇಜಗೌ ಅವರು ಜಾನಪದದ ಸಂರಕ್ಷಣೆಗೆ ಕೆಲವು ಸಲಹೆಗಳನ್ನು ಸಹ ಈ ಲೇಖನದಲ್ಲಿ ನೀಡಿದ್ದಾರೆ. ಏನೇ ಬರಲಿ, ಜಾನಪದ ಸಾಹಿತ್ಯ ಕಲೆಗಳು ಸಂಪೂರ್ಣವಾಗಿ ನಾಶವಾಗುವುದಿಲ್ಲ ಎಂಬ ಆಶಾಮನೋಭಾವನೆಯನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಡಾ. ಎಚ್.ಎಸ್.ಗೋಪಾಲರಾವ್ ಮತ್ತು ಡಾ. ಶ್ರೀ ಜಯದೇವರಾಜ ಅರಸ್ ಅವರ 'ಕರ್ನಾಟಕದ ಜಾನಪದ ಮಾರುಕಟ್ಟೆಗಳು' ಎಂಬ ಬೃಹತ್ ಗ್ರಂಥದ ಮುನ್ನುಡಿ ಬರಹವೇ 'ಜಾನಪದ ಮಾರುಕಟ್ಟೆಗಳನ್ನು ಕುರಿತು' ಎಂಬ ಲೇಖನವಾಗಿದೆ. ದೇಜಗೌ ತಮ್ಮ ಬಾಲ್ಯದಲ್ಲಿನ ಹಳ್ಳಿಯ ಜಾತ್ರೆಗಳ ಕಲ್ಪನೆ ಆ ಕಾಲದಲ್ಲಿ ಹಣದ ಕಲ್ಪನೆ ಹೆಚ್ಚು

ರೂಢಿಯಲ್ಲಿರದೆ ಇರುವ ಸಂದರ್ಭದಲ್ಲಿ ಪದಾರ್ಥಗಳ ವಿನಿಮಯ ನಡೆಯುತ್ತಿದ್ದುದನ್ನು ನೆನಪಿಸಿಕೊಂಡಿದ್ದಾರೆ. ಕನ್ನಡದ 'ಮಾಱು' ಪದದ ಅರ್ಥ 'ವಿನಿಮಯ'. ಫ್ರೆಂಚ್ ಭಾಷೆಯ 'ಮಾರ್ಕೆಟಸ್' ಪದದಿಂದ ಇಂಗ್ಲಿಷಿನ 'ಮಾರ್ಕೆಟ್' ಬಂದಿದೆ. ಹಿಂದೆ ದ್ರಾವಿಡ ಭಾಷೆಗಳಿಗೂ ಫ್ರೆಂಚ್ ಭಾಷೆಗೂ ಏನಾದರೂ ಸಂಬಂಧವಿತ್ತೇ? ಎಂಬ ಪ್ರಶ್ನೆಯನ್ನೆತ್ತಿದ್ದಾರೆ.

ಇಬ್ಬರೂ ಲೇಖಕರೂ ಮಾರುಕಟ್ಟೆಗಳಿಗೆ ಸಂಬಂಧಿಸಿದ ಉದ್ಗ್ರಂಥವನ್ನು ಕನ್ನಡದಲ್ಲಿ ರಚಿಸಿ ತಮ್ಮ ವಿದ್ವತ್ತನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ನೆಲದ ಋಣವನ್ನು ತೀರಿಸಿದ್ದಾರೆ ಎಂದು ಶ್ರೀ ದೇಜಗೌ ಅವರು ಮುನ್ನುಡಿಯಲ್ಲಿ ಹೊಗಳಿದ್ದಾರೆ.

ಶ್ರೀ ದೇಜಗೌ ರವರು 'ಕರ್ನಾಟಕ ಜನಪದ ಪರಿಷತ್ತಿನ ಬೆಳ್ಳಿ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿನ ತಮ್ಮ ಆಶಯ ಭಾಷಣದ ಮೂರ್ತ ರೂಪವೇ ಜಾನಪದ ವಿಶ್ವವಿದ್ಯಾನಿಲಯ ಸ್ಥಾಪನೆಯ ಅನಿವಾರ್ಯತೆ ಎಂಬ ಲೇಖನವಾಗಿದೆ. ಕರ್ನಾಟಕ ಜಾನಪದ ಪರಿಷತ್ತು ಮತ್ತು 'ಜಾನಪದಲೋಕ' ಕರ್ನಾಟಕದ ಮಾತ್ರವಲ್ಲ, ಭಾರತದ ಜನಪದ ಸಂಸ್ಕೃತಿಯ ಉನ್ನತಾದರ್ಶದ ಅಭಿಮಾನದ ಕೇಂದ್ರಗಳು ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಜನಪದ ಲೋಕವನ್ನು ಬೆಳೆಸಿದ ಒಂದು ರೀತಿಯಲ್ಲಿ ಮಿನಿ ವಿಶ್ವವಿದ್ಯಾನಿಲಯವೇ ಆಗಿದ್ದ ನಾಡೋಜ ಶ್ರೀ ಹೆಚ್.ಎಲ್.ನಾಗೇಗೌಡರನ್ನು ನಾಡವರೆಲ್ಲರೂ ಕೃತಜ್ಞತೆಯಿಂದ ನೆನೆಯಬೇಕಾದ್ದು ಧರ್ಮ ಎಂದಿದ್ದಾರೆ. ಕನ್ನಡ – ಜಾನಪದದ ಅವಿನಾಭಾವ ಸಂಬಂಧವನ್ನು ವಿವರಿಸಿದ್ದಾರೆ. ಭಾರತೀಯ ಸಂಗೀತವಾದರು ಕರ್ನಾಟಕ ಸಂಗೀತವೆಂಬ ಹೆಸರಿರುವುದರ ಗುಟ್ಟು ಸಹ ಜಾನಪದದಲ್ಲಡಗಿದೆ. ಜಾನಪದದ ಜೀವಾಳದಂತಿರುವ ಯಕ್ಷಗಾನ ಸಂಗೀತ ಈಗಲೂ ಜೀವಂತವಾಗಿದೆ. ಕನ್ನಡದಲ್ಲಿರುವಷ್ಟು ಜಾನಪದ ಮಹಾಕಾವ್ಯಗಳು ಜಗತ್ತಿನ ಯಾವ ಭಾಷೆಗಳಲ್ಲಿಯೂ ಇಲ್ಲ. ಕನ್ನಡ ಗಾದೆಗಳ ಮತ್ತು ನಂಬಿಕೆಗಳ ಬೃಹತ್ ಭಾಂಡಾಗಾರವೆಂತಲೂ, ಇಂದಿಗೂ ಮೋಹಿನೀ ಕಲೆಯಾಗಿ ಜೀವಂತವಾಗಿರುವ ಯಕ್ಷಗಾನದ ಇತಿಹಾಸವೇ ಒಂದು ಬೃಹತ್ ಭಾರತವಾಗುತ್ತದೆ (ಜಾನಪದ ಮಹಾಸಂಪುಟ, ಪುಟ. ೮೦೬) ಎಂದಿದ್ದಾರೆ.

ಬುಡಕಟ್ಟು ಜನಾಂಗಗಳ ಭಾಷೆಗಳು ಮತ್ತು ಸಂಸ್ಕೃತಿಗಳು ವಿನಾಶದ ಅಂಚಿನಲ್ಲಿವೆ. ಆದಷ್ಟು ಬೇಗ ಬುಡಕಟ್ಟು ಭಾಷೆಗಳನ್ನು ನಿಘಂಟುಗಳ ಮೂಲಕ ಅವರ ಸಂಸ್ಕೃತಿಯನ್ನು ವಸ್ತು ಸಂಗ್ರಹಾಲಯಗಳ ಮೂಲಕ ರಕ್ಷಿಸುವುದಾದರೆ ಸಮಗ್ರ ಜಾನಪದ ಸಂಶೋಧನೆಗೆ ತೌಲನಿಕ ಅಧ್ಯಯನಕ್ಕೆ ಅವು ನೆರವಾಗುತ್ತವೆ ಎಂದು ಕಳಕಳಿ

ವ್ಯಕ್ತಪಡಿಸಿದ್ದಾರೆ. ಆಫ್ರೋದ್ರವಿಡಿಯನ್ ಕ್ಷೇತ್ರವನ್ನು ಮೌಖಿಕ ಇತಿಹಾಸವನ್ನು ಸೇರಿಸಿಕೊಂಡು ಜಾನಪದ ವಿಶ್ವವಿದ್ಯಾನಿಲಯವನ್ನು ತೆರೆಯುವುದಾದರೆ ಅದಕ್ಕೆ ಅಂತರರಾಷ್ಟ್ರೀಯ ಮನ್ನಣೆ ದೊರೆಯುತ್ತದೆ ಎಂದಿದ್ದಾರೆ. ಈ ತನಕ ಕನ್ನಡ ನಾಡಿನಲ್ಲಿರಲೀ ಇಡೀ ಇಂಡಿಯಾದಲ್ಲಿಯೇ ಮುಖ್ಯಮಂತ್ರಿಯೊಬ್ಬರು ತಮ್ಮ ಅಧಿಕಾರದ ಅವಧಿಯಲ್ಲಿ ವಿಶ್ವವಿದ್ಯಾನಿಲಯವನ್ನು ಸೃಷ್ಟಿಸಿದ್ದಿಲ್ಲ. ಜಾನಪದ ವಿಶ್ವವಿದ್ಯಾನಿಲಯವನ್ನು ತೆರೆದದ್ದಾದರೆ, ಇಡೀ ಜಗತ್ತೆ ಅವರನ್ನು ಮೆಚ್ಚುತ್ತದೆಂದು ಭರವಸೆಯ ಮಾತುಗಳನ್ನಾಡಿದ್ದಾರೆ ದೇಜಗೌ ಅವರು.

'ಪಂಚಾಯತ್‌ರಾಜ್ಯಗಳ ಹೊಸ ಆಡಳಿತವನ್ನು ಜಾರಿಗೆ ತರಲು ಕಾರಣರಾದ ಆಗಿನ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದ ದಿವಂಗತ ನಜೀರಾಸಾಹೇಬರ ವಿನಂತಿಯ ಮೇರೆಗೆ ಕನ್ನಡದ ಮೊದಲ ಜಾನಪದ ಪ್ರಾಧ್ಯಾಪಕರಾದ ಡಾ. ಜಿ.ಶಂ.ಪರಮಶಿವಯ್ಯ ಅವರು ಜಾನಪದ ಸಂಗತಿಗಳ ಸಂವರ್ಧನೆ ಸಂರಂಕ್ಷಣೆ ಹೇಗೆ ಎಂಬ ವಿಚಾರ-ಗಳನ್ನೊಳಗೊಂಡು ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿ, ೧೯೮೮ರಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಆ ಬರಹದಲ್ಲಿ ಅವರು ಜಾನಪದ ವಿಶ್ವವಿದ್ಯಾನಿಲಯದ ಅವಶ್ಯಕತೆ-ಯನ್ನು ಮಂಡಿಸುತ್ತಾರೆ. ಆ ಸಾಲುಗಳು ಹೀಗಿವೆ

'ಜಾನಪದ ಸಂರಕ್ಷಣೆಯ ದೃಷ್ಟಿಯಿಂದ, ಸಂವರ್ಧನೆಯ ದೃಷ್ಟಿಯಿಂದ ವ್ಯಾಪಕವಾದ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಬೇಕಾದ ಅಗತ್ಯ ಈಗ ತುಂಬಾ ಇದೆ. ಜಾನಪದದಂಥ ವ್ಯಾಪಕವಾದ ಕ್ಷೇತ್ರದಲ್ಲಿ ಸರಿಯಾದ ಸಂಶೋಧನೆ, ಅಧ್ಯಯನ ನಡೆಯಬೇಕಾದ ಬೇರೆ ಬೇರೆ ಇಲಾಖೆಗಳನ್ನೊಳಗೊಂಡ ಒಂದು ವಿಶ್ವವಿದ್ಯಾನಿಲಯವನ್ನೇ ಸ್ಥಾಪಿಸಿ, ಪ್ರಾಚೀನ ಮೌಖಿಕ ಜ್ಞಾನದ ಪ್ರಯೋಜನವನ್ನು ಪಡೆಬಹುದು'. (ಜೀಶಂಪ, ೧೯೮೮) ಇಪ್ಪತ್ತು ವರ್ಷಗಳ ಹಿಂದೆ ಕಂಡ ಜೀಶಂಪ ಅವರ ಕನಸು ಹಲವು ಹಿರಿಯರ ಪ್ರಯತ್ನದಿಂದ ಈಗ ನನಸಾಗುವ ದಾರಿಯಲ್ಲಿದೆ ಎಂಬುದು ಸಂತೋಷದ ಸಂಗತಿ.[೧] ಎಂದು ಡಾ. ವೀರಣ್ಣದಂಡೆ ಅವರು ಅಭಿಪ್ರಾಯಪಟ್ಟಿದ್ದಾರೆ.

'ಶಿಕ್ಷಣ-ಸಂವಹನ ಮಾಧ್ಯಮವಾಗಿ ಜಾನಪದ' ಎಂಬ ಶೀರ್ಷಿಕೆಯೂ ಪ್ರಮುಖ ಲೇಖನವಾಗಿದ್ದು, ಜನಸಾಮಾನ್ಯರಿಗೆ ಜಾನಪದವು ಶಿಕ್ಷಣ-ಸಂವಹನ ಮಾಧ್ಯಮವಾಗಿ ಹೇಗೆ ತಲುಪುತ್ತಿತ್ತು. ಅವರ ನಡುವಿನ ಸಂವಹನ, ಭಾವನೆಗಳ ಅಭಿವ್ಯಕ್ತಿ ಹೇಗೆಲ್ಲ ಸಾಧ್ಯವಾಗುತ್ತಿತ್ತು. ಹಿಂದಿನ ಕಾಲದಲ್ಲಿ ಎಂದು ದೇಜಗೌ ವಿವರಿಸಲು ಪ್ರಯತ್ನಿಸಿದ್ದಾರೆ.

---

೧. ಲೇ: ವೀರಣ್ಣದಂಡೆ ಕೃತಿ, ಜಾನಪದ ವಿಶ್ವವಿದ್ಯಾಲಯದ ಅಗತ್ಯ ಏಕೆ? ಪುಟ. ೨-೩

ಮಾತು ಬರುವ ಮುನ್ನ ಆದಿ ಮಾನವ ಕಣ್ಸನ್ನೆ ಬಾಯ್ಸನ್ನೆ ಕೈಸನ್ನೆಗಳಿಂದ ತನ್ನ ಮನಸ್ಸಿನ ಕ್ರಿಯೆಗಳನ್ನು ಅಂತರಂಗವನ್ನು ಇತರರಿಗೆ ತಿಳಿಸುತ್ತಿದ್ದ. ಮಾತು ಲಿಪಿಯ ಮೂಲಕ ಸಾಕಾರತೆ ಪಡೆಯಬೇಕಾದರೆ ಶತಶತಮಾನಗಳೇ ಕಳೆದಿರಬೇಕು. ಮಾತು ಬಂದೊಡನೆಯೇ ಅವನ ನಿಶಿತಮತಿ ವ್ಯಾಪಕವಾಗಿ ಕ್ರಿಯಾಶೀಲವಾಗುತ್ತದೆ; ನಿಸರ್ಗದ ಶಕ್ತಿಗಳನ್ನೆಲ್ಲ ಅನುಕರಿಸಲು ಬಳಸಿಕೊಳ್ಳಲು ಪ್ರಯತ್ನಿಸುತ್ತದೆ. 'ಜೀವನ ಶಿಕ್ಷಣ ಜನಪದ ಕಾವ್ಯದ ಮೂಲಕ ಜರುಗುತ್ತದೆ. ಜನಪದ ಕಾವ್ಯವೇ ಸಾಮಾನ್ಯರ ನಿರಕ್ಷರಿಗಳ ವಿಶ್ವವಿದ್ಯಾನಿಲಯ' (ಜಾ.ಮ.ಸಂಪುಟ–ಪುಟ. ೮೧೩) ವೆಂದು ಅದರ ವಿಸ್ತಾರತೆಯನ್ನು ಹೇಳುವುದರ ಜೊತೆಗೆ ಅನುಭವಗಳಿಂದ ನೆರೆಹೊರೆಯಿಂದ ಕಲಿತವೆಲ್ಲವೂ ಜನಪದ ಸಾಹಿತ್ಯದ ಪರಿಮಿತಿಗೆ ಸೇರುತ್ತವೆ.

ಆಧುನಿಕ ವಿದ್ಯಾವಂತರಿಗೆ ಪಂಡಿತರಿಗೆ ನೂರಾರು ಸಾವಿರಾರು ನೀತಿಗೀತೆಗಳು ಜನಪದದ ಬೊಕ್ಕಣದಲ್ಲಿವೆ. ಜನಪದರ ಮನಸ್ಸಿನ ಕಣಜದಲ್ಲಿವೆಯೆಂಬುದು ಸಮಾಧಾನಕರ ಸಂಗತಿ. ಹೀಗಾಗಿ ಸಾವಿರಾರು ವರ್ಷಗಳಿಂದ ಜನಪದ ವೃತ್ತಿಗಳು; ಕಲೆಗಳು ಹಾಗೂ ಜನಪದ ಸಾಹಿತ್ಯ ನಾಡಿನ ಬಹುಜನರ ಶಿಕ್ಷಣ ಮಾಧ್ಯಮವಾಗಿದೆಯೆಂಬುದು ದಿಟವಾದ ಮಾತಾಗಿದೆ. ಜಾನಪದವೆಂತು ಶಿಕ್ಷಣ ಮಾಧ್ಯಮವಾಗಿದೆಯೋ ಅಂತೆಯೇ ಸಂವಹನ ಮಾಧ್ಯಮವಾಗಿದೆಯಂದು ಇಂದಿನ ವೃತ್ತ ಪತ್ರಿಕೆಗಳ ಕರ್ತವ್ಯವನ್ನದು ಪೂರೈಸುತ್ತಿತ್ತೆಂದು ಹೇಳಬಹುದಾಗಿದೆ. ಸುದ್ಧಿ ಸಮಾಚಾರಗಳು ಬಾಯಿಂದ ಬಾಯಿಗೆ ಹರಡುತ್ತಿದ್ದಂತೆ ಜ್ಞಾನ ವಿಜ್ಞಾನಾದಿ ಸಂಗತಿಗಳ ಪ್ರಸಾರ ಅಥವಾ ವಿನಿಮಯ ನಡೆಯುತ್ತಿದ್ದುದೇ ಜನಪದ ಕಾವ್ಯಗಳ ಮೂಲಕವೇ ಆಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಜನಪದ ಕಲೆಗಳೇ ಸಂವಹನ ಮಾಧ್ಯಮಗಳಾಗಿದ್ದು ಉಂಟು.

ಯಕ್ಷಗಾನ ಬಯಲಾಟಗಳಂತು ಸಮರ್ಥ ಶಿಕ್ಷಣ ಹಾಗು ಸಂವಹನ ಮಾಧ್ಯಮ ಗಳಾಗಿದ್ದವಷ್ಟೇ ಹಿಂದಿನ ಕಾಲದಲ್ಲಿ ರಾಮಾಯಣ, ಮಹಾಭಾರತಗಳು ಸಾಮಾನ್ಯರಿಗೆ ಪರಿಚಯವಾದದ್ದೇ ಬಯಲಾಟಗಳ ಮೂಲಕ. ಸ್ವಾತಂತ್ರ್ಯ ಸಮರದ ಕಾಲದಲ್ಲಿ ಸಾಮಾನ್ಯ ಜನ ಲಾವಣಿಗಳಿಗೆ ಮರುಳಾಗಿ ಕದನಕ್ಕೆ ಧುಮುಕಿದ್ದುಂಟು. ಲಾವಣಿಗಳು ಏಕಕಾಲದಲ್ಲಿ ಶಿಕ್ಷಣ ಮಾಧ್ಯಮವಾಗಿದ್ದುವಲ್ಲದೆ ಸಂವಹನ ಮಾಧ್ಯಮಗಳೂ ಆಗಿದ್ದವು.

ಆಧುನಿಕ ಪೂರ್ವದಲ್ಲಿ ಜನತೆಯ ಶಿಕ್ಷಣ ಹಾಗೂ ಸಂವಹನ ಮಾಧ್ಯಮವಾಗಿದ್ದ ಅವರಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಏಕತೆಯನ್ನು ಸಾಧಿಸಿ, ಐಹಿಕ ಹಾಗೂ ಪಾರಮಾರ್ಥಿಕ ಸಿದ್ಧಿಗಳಿಗೆ ಸಾಧನವಾಗಿದ್ದ, ಆಧುನಿಕ

ನಾಗರಿಕತೆಗೆ ಮಾತೃಸ್ಥಾನದಲ್ಲಿರುವ ಜಾನಪದವನ್ನು ಸರ್ಕಾರ ಮತ್ತು ಸಮಾಜಗಳು ಅದನ್ನು ನಿರ್ಲಕ್ಷಿಸದೆ, ಜನ ಜೀವನವನ್ನು ಉತ್ತಮಪಡಿಸುವಲ್ಲಿ ಉದ್ಧರಿಸುವಲ್ಲಿ ಸಾರ್ಥಕವಾಗಿ ಹಾಗೂ ಯಶಸ್ವಿಯಾಗಿ ಬಳಸಿಕೊಳ್ಳಬಹುದೆಂದು ಸ್ಪಷ್ಟಪಡಿಸುವುದೇ ಈ ಲೇಖನದ ಉದ್ದೇಶವಾಗಿದೆ. (ಜಾ.ಮ.ಸಂ. ಪುಟ. ೮೧೫) ಎಂದು ದೇಜಗೌ ಅವರು ತಮ್ಮ ಸ್ಪಷ್ಟವಾದ ನಿಲುವನ್ನು ದಾಖಲಿಸಿದ್ದಾರೆ.

'ಜಾನಪದ ವಿಚಾರಧಾರೆ' ಸಂಕಲನವು ಈ ಮೇಲಿನ ಲೇಖನಗಳನ್ನಷ್ಟೇ ಹೊಂದಿಲ್ಲದೆ ಇಂಗ್ಲಿಷಿನಲ್ಲಿ ರಚನೆಯಾಗಿರುವ Folk Beliefs in South India, Stray Thoughts on Dravidian Folklore, Dravidian Folk and Tribal Lore, The Fulture of Folklore ಹಾಗೂ Resurrection of Folklore is the urgent need of the day ಎಂಬಂಥ ಇತರ ಲೇಖನಗಳನ್ನು ಒಳಗೊಂಡಿದೆ.

ಒಟ್ಟಾರೆಯಾಗಿ ಜಾನಪದವನ್ನು ಕುರಿತು ದೇಜಗೌ ಗ್ರಂಥಗಳನ್ನು ನಾವು ಅಧ್ಯಯನಕ್ಕೆ ಒಳಪಡಿಸಿದಾಗ ಎದ್ದು ಕಾಣುವ ಮುಖ್ಯ ಲಕ್ಷಣವೆಂದರೆ ಅವರ ಜಾನಪದ ಕಳಕಳಿ, ಅವುಗಳನ್ನು ಅಮೂಲಾಗ್ರವಾಗಿ ತಿಳಿಯುವ ಛಲ, ಇದರ ಫಲವಾದ ಅಪಾರ ಜ್ಞಾನ, ಇದುವರೆಗೆ ಆಗಿರುವ ಕಾರ್ಯಗಳ ಬಗ್ಗೆ ಅಲ್ಪತೃಪ್ತಿ ಆಗಬೇಕಾದ್ದು ಬಹಳವಿದೆ ಎಂಬ ಅವರ ವಿಶಾಲದೃಷ್ಟಿ ತಾನು ಅಪರೂಪದ ವಲಯಗಳಲ್ಲಿ ಕೆಲಸ ಮಾಡಿ ಮಾರ್ಗದರ್ಶನವಾದ ಮಾದರಿ ಸಿದ್ಧಪಡಿಸಿ ಕೊಟ್ಟದ್ದು ಬೇರೆಯವರು ಈ ಕ್ಷೇತ್ರದಲ್ಲಿ ಕೆಲಸ ಮುಂದುವರಿಸಬೇಕೆಂಬ ಅವರ ಹಂಬಲ ಅವರ ಸಾಹಿತ್ಯದಲ್ಲಿರುವಂತೆಯೇ ಒಳ್ಳೆಯ ಸಂತೋಷದಾಯಕವೂ ಆಗಿದೆ. ಇಲ್ಲಿಯ ಎಲ್ಲ ಜಾನಪದ ಕೃತಿಗಳಲ್ಲಿ ವಿವರಣೆ, ವಿಶ್ಲೇಷಣೆಗಳಷ್ಟೇ ಪ್ರಮಾಣದಲ್ಲಿ ಉದಾಹರಣೆಗಳಿರುವುದು ಕೂಡ ಮಹತ್ವದ ಅಂಶವಾಗಿದೆ.[೧] ಎಂದು ದೇಜಗೌ ಜಾನಪದ ಕೃತಿಗಳ ಮೇಲಿನ ವಿಮರ್ಶಾತ್ಮಕ ನುಡಿಮಾತುಗಳು ತೀರ ಹತ್ತಿರದವು ಎನಿಸುತ್ತದೆ.

ಒಟ್ಟಿನಲ್ಲಿ ದೇಜಗೌ ಅವರು ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಸುತ್ತಿ ಅಲ್ಲಿನ ಜಾನಪದವನ್ನು ಅರ್ಥಮಾಡಿಕೊಂಡು ನಮ್ಮಲ್ಲೇ ಯಥೇಚ್ಛವಾದ, ಸಮೃದ್ಧವಾದ ಜನಪದವನ್ನು ಬಳಸಿಕೊಳ್ಳಲು, ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಪಾಶ್ಚಾತ್ಯರಂತೆ ನಮ್ಮ ನಡುವಿನ ಜಾನಪದ ರಾಶಿಯನ್ನು ಹಲವು ವಿಭಾಗಗಳಾಗಿ ವಿಂಗಡಿಸಿಕೊಂಡು ಪ್ರತಿಯೊಂದಕ್ಕೂ ತಮ್ಮದೇ ಆದ ವಿಧಾನಗಳ ಮೂಲಕ

೧. ಅನಿಕೇತನದಲ್ಲೊಂದು ವಿಶ್ವಚೇತನ ಲೇ. ಟಿ.ಕೆ.ಕೆಂಪೇಗೌಡ, ಪುಟ. ೧೧೧-೧೧೨.

ನಿದರ್ಶನಗಳ ಮೂಲಕ ಲೇಖನಗಳನ್ನು ರಚಿಸಿ 'ಜಾನಪದ'ಕ್ಕೆ ಕಿರೀಟಪ್ರಾಯವಾದ ಪ್ರಮುಖ ಜಾನಪದ ಕೃತಿಗಳನ್ನು ರಚಿಸಿದ್ದಾರೆ. ಈ ಜಾನಪದ ಕೃತಿಗಳು ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗೆ ನೀಡಿದ ಉತ್ಕೃಷ್ಟ ಕೊಡುಗೆಗಳಾಗಿವೆ ಎಂಬುದರಲ್ಲಿ ಸಂದೇಹವಿಲ್ಲ ಎನ್ನಬಹುದಾಗಿದೆ.

ಅಧ್ಯಾಯ – ೫

ಜಾನಪದ ಕಲೆಯಾಗಿ ವಸ್ತುಸಂಗ್ರಹಾಲಯ

ಜಾನಪದ ವಸ್ತು ಸಂಗ್ರಹಾಲಯವೂ ದೇಜಗೌ ಅವರ ದೂರ ದೃಷ್ಟಿಯಿಂದ ಹುಟ್ಟಿಕೊಂಡಿತು. ಇದು ಅವರ ಜಾನಪದ ದೃಷ್ಟಿ ಸಂಸ್ಕೃತಿಯ ಬಗ್ಗೆ ಕಾಳಜಿಯನ್ನು ಕಾಣಬಹುದು. ನಮ್ಮ ಜನಪದವು ತಲೆತಲಾಂತರದಿಂದಲೂ ಬಳಸುತ್ತಿರುವ ಎಲ್ಲಾ ವಸ್ತುಗಳನ್ನು ಒಂದೆಡೆ ಕಲೆಹಾಕಿ, ಆ ವಸ್ತುಗಳು ಆಯಾ ಜನಾಂಗದ ನಾಡಿನ ಸಂಸ್ಕೃತಿಯನ್ನು ಪರಂಪರೆಯನ್ನು ಪರಿಚಯಿಸುವುದಕ್ಕಾಗಿ ಪರಂಪರೆ, ಸಂಸ್ಕೃತಿಯ ನಾಗರೀಕರಣ ಪ್ರಭಾವಕ್ಕೆ ಸಿಕ್ಕಿ ಅಳಿದು ಹೋಗುವ ಮುನ್ನ ಸಂರಕ್ಷಿಸಬೇಕು ಎಂಬ ಮಹತ್ತರ ಉದ್ದೇಶದಿಂದ ಈ ವಸ್ತು ಸಂಗ್ರಹಾಲಯ ಹುಟ್ಟಿಕೊಂಡಿತು. ಮುಖ್ಯವಾಗಿ ಜಾನಪದ ಸಂರಕ್ಷಣೆಯತ್ತ ಗಮನ ಹರಿಸಿದ ಕಾರಣದ, ಜೊತೆಗೆ ದೇಶ ವಿದೇಶಗಳನ್ನು ಸುತ್ತಿ ಬಂದ ಅವರ ಅನುಭವ, ಆಲೋಚನೆಗಳ ಫಲವಾಗಿ ಇದು ಹುಟ್ಟಿಕೊಂಡು ನಮ್ಮ ನಾಡಿನ ಸಂಸ್ಕೃತಿಯ ಅನನ್ಯತೆಯ ಸಾರುವಲ್ಲಿ ಯಶಸ್ವಿ ಪ್ರಯೋಗವಾಯಿತು.[೧] ಎಂದಿದ್ದಾರೆ.

ಒಂದು ದಶಕದ ಹಿಂದೆ ವಿದ್ಯಾವಂತ ನಾಗರಿಕರಲ್ಲಿ ಜಾನಪದದ ಬಗೆಗಿದ್ದ ನಿರ್ಲಕ್ಷ್ಯ ತಾತ್ಸಾರಗಳು ಇಂದು ಮಾಯವಾಗಿವೆ. ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯವನ್ನು ಪ್ರಾರಂಭ ದೆಶೆಯಲ್ಲಿ ನೋಡಿದ ಕೆಲವು ಮಿತ್ರರು ಅದನ್ನು ಕುರಿತು ಲಘುವಾಗಿ ಮಾತಾಡಿದ್ದುಂಟು. "ನಮ್ಮ ಅಜ್ಜಿ ಧರಿಸುತ್ತಿದ್ದ ಓಬೀರಾಯನ ಕಾಲದ ಒಡವೆಗಳು ಯಾರಿಗೆ ಬೇಕು? ಇಲ್ಲಿರುವ ಅನೇಕ ಪದಾರ್ಥಗಳು ನಮ್ಮ ಅಡುಗೆಮನೆಯಲ್ಲಿದ್ದುವು; ವ್ಯವಸಾಯದ ಮುಟ್ಟುಗಳು ಇಲ್ಲಿಗೇಕೆ ಬಂದವು?" ಎಂದೆಲ್ಲ ಅವರು ರಾಗತೆಗೆದಿದ್ದುಂಟು. ಅಂಥ ಉದ್ಗಾರವನ್ನು ಕೇಳಿದಾಗ ಒಮ್ಮೊಮ್ಮೆ ನಿರಾಶೆಯೂ ಆಗುತ್ತಿತ್ತು. ಸಂಗ್ರಹಾಲಯದ ಸಾಮಾನುಗಳನ್ನು ಹೊರಗೆಸೆದು ಬಿಡೋಣವೇ ಎನ್ನುವಷ್ಟರ ಮಟ್ಟಿಗೆ ಮನಸ್ಸು ರೋಸಿ ಹೋದದ್ದುಂಟು. ವಸ್ತುಸಂಗ್ರಹಾಲಯದ ಕಲ್ಪನೆಯೇ ಈ ಜನರಲ್ಲಿಲ್ಲವಲ್ಲ ಎಂದು ಸಂಕಟಗೊಂಡದ್ದುಂಟು. ಪ್ರಾರಂಭದಲ್ಲಿ ಯಾವ ಕಡೆಯಿಂದಲೂ ಪ್ರೋತ್ಸಾಹವಿರಲಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಮರೆಯಲಾಗದು. ಕಲ್ಕತ್ತೆಯ ಕೇಂದ್ರದ ಆಂತ್ರಪಾಲಾಜಿಕಲ್ ಸರ್ವೆ ಇಲಾಖೆಯ ನಿರ್ದೇಶಕರೂ, ಬ್ರಿಟಿಷ್ ಮ್ಯೂಸಿಯಮ್ಮಿನ ಮುಖ್ಯಾಧಿಕಾರಿಗಳೂ ಸಂಗ್ರಹಾಲಯಕ್ಕೆ ಭೇಟಿ ನೀಡಿ, ಮುಕ್ತಕಂಠದಿಂದ ಪ್ರಶಂಸೆ ಮಾಡಿದ ನಂತರ

---

೧. ಅನಿಕೇತನದಲ್ಲೊಂದು ವಿಶ್ವಚೇತನ – ಟಿ.ಕೆ.ಕೆಂಪೇಗೌಡ, ಪು. ೧೧೨

ಕೆಲಸಗಾರರಲ್ಲಿ ಧೈರ್ಯ ಚಿಗುರಿ, ಅತ್ಯುತ್ಸಾಹದಿಂದ ದುಡಿಯಲಾರಂಭಿಸಿದರು.[೧] ಎಂದು ಸಂಗ್ರಹಾಲಯದ ಬಗೆಗಿನ ಪ್ರಾರಂಭದಲ್ಲಿನ ಅಡ್ಡಿ ಆತಂಕಗಳ ಬಗ್ಗೆ ತಮ್ಮ ಮನದಾಳದ ಮಾತುಗಳನ್ನು ಹೇಳಿಕೊಂಡಿದ್ದಾರೆ.

"ಜಾನಪದ ವಸ್ತು ಸಂಗ್ರಹಾಲಯವೆಂದರೆ ಒಂದು ರಾಷ್ಟ್ರದ ಪರಂಪರಾನುಗತ ಜೀವನಕ್ಕೆ ಹಿಡಿದ ಕನ್ನಡಿಯಿದ್ದಂತೆ" ನಾಗರಿಕತೆಯ ಆಘಾತಕ್ಕೆ ಸಿಕ್ಕಿ ಜನಪದ ಸಾಹಿತ್ಯವೆಂತೋ ಅಂತೆಯೇ ಜಾನಪದ ಸಂಸ್ಕೃತಿ ಸಹ ಸಾಮಾವಶೇಷವೂ ಇಲ್ಲದಂತೆ ನಾಶವಾಗುವ ಸಂಭವವಿದ್ದುದನ್ನು ಮನಗಂಡ ಇವರು ಜಾನಪದ ಮತ್ತು ವಸ್ತುಸಂಗ್ರಹಾಲಯ ಸಂಸ್ಥಾಪನೆಯನ್ನು ಮಾಡಿದರು. ಇಂತಹದೊಂದು ಸಂಗ್ರಹಾಲಯವಿಲ್ಲದೆ ಜಾನಪದ ಅಧ್ಯಯನ ಬೋಧನೆಗಳು ಹುಸಿಯಾಗುತ್ತವೆಂದು ಬೋಳಾಗುತ್ತವೆಂದು ನಿರುಪಯುಕ್ತವಾಗುತ್ತವೆಂದು ಭಾವಿಸಿದ ದೇಜಗೌ ಸಂಶೋಧನೆ ಪರಿಣಾಮಕಾರಿಯಾಗಿ ಆಗುತ್ತದೆ. ಎಂಬ ಉದ್ದೇಶದಿಂದಾಗಿ ಈ ವಸ್ತು ಸಂಗ್ರಹಾಲಯ ಮೂಡಿಬಂತು. ಇದರ ಹೋರಾಟದ ಕಥೆಯನ್ನು ಓದುವಾಗ, ಅಂದು ಕುಲಪತಿ ಶ್ರೀಮಾಲಿಯವರ ಮನಸ್ಸನ್ನು ಸೂರೆಗೊಂಡ ದೇಜಗೌ, ಜಾನಪದ ವಸ್ತುಗಳನ್ನು ಸಂಗ್ರಹಿಸಿ ಇಡುವುದಕ್ಕೆ ಅದಕ್ಕೆ ಬೇಕಾದ ಸ್ಥಳವನ್ನು ಆಕ್ರಮಿಸಿಕೊಂಡೇ ಈ ಮ್ಯೂಸಿಯಂ ಅನ್ನು ಸ್ಥಾಪನೆ ಮಾಡಿದ್ದಾರೆ ಎಂಬುದು ನಮಗೆ ಅರಿವಾಗುತ್ತದೆ.

'ನನ್ನ ಮಡದಿಯ ಬೆಳ್ಳಿಯ ನಗಗಳ ಕೊಡುಗೆಯಿಂದ ಸಂಗ್ರಹಾಲಯ ಪ್ರಾರಂಭವಾಯಿತೆನ್ನಬೇಕು. ಸ್ವಂತ ಖರ್ಚಿನಲ್ಲಿ ಕೆಲವು ವಸ್ತುಗಳನ್ನು ಕೊಂಡದ್ದಾಯಿತು. ಜೀಶಂಪ ಅವರು ಹಳ್ಳಿಹಳ್ಳಿಗಳಲ್ಲಿ ತಿರುಗಿ ಹಲವು ವಸ್ತುಗಳನ್ನು ಸಂಗ್ರಹಿಸಿದರು. ಅವುಗಳನ್ನು ಓರಣಗೊಳಿಸಿ ಶ್ರೀ ಮಾಲಿಯವರನ್ನು ಕರೆದು, ತೋರಿಸಲಾಗಿ, ಶೈಶವಾಸ್ಥೆಯ ಸಂಗ್ರಹಾಲಯ ಅವರ ಮನಸ್ಸಿನ ಮೇಲೆ ಸಾಕಷ್ಟು ಪ್ರಭಾವ ಬೀರಿರಬೇಕೆಂದು ತೋರುತ್ತದೆ. ಸಂಗ್ರಹಾಲಯಕ್ಕೆಂದು ಕ್ಯೂರೇಟರ್ ಮತ್ತು ಸಹಾಯಕ ಸಿಬ್ಬಂದಿ ವರ್ಗ ಅತ್ಯವಶ್ಯಕವೆಂದು ವಿವರಿಸಿದಾಗ, ಅವರ ಮನಸ್ಸಿಗೆ ಹಿಡಿಸಿತು. ಜತೆಗೆ ನಾನಾಗ ಸಿಂಡಿಕೇಟ್ ಸದಸ್ಯನಾಗಿದ್ದೇನೆಂಬುದೂ ನೆನಪಲ್ಲಿಟ್ಟುಕೊಳ್ಳಬೇಕಾದ ಸಂಗತಿ. ಕ್ಯೂರೇಟರ್ ಹುದ್ದೆಗೆ ಪಿ.ಆರ್.ತಿಪ್ಪೇಸ್ವಾಮಿ ಯವರನ್ನು ನೇಮಿಸಿಕೊಂಡ ಮೇಲಂತು ಸಂಗ್ರಹಾಲಯ ಮೈದುಂಬಿಕೊಂಡು ಬಹುಮುಖವಾಗಿ ಬೆಳೆದು, ದೇಶವಿದೇಶಿಯ ತಜ್ಞರ ಪ್ರಶಂಸೆಗೆ ಪಾತ್ರವಾಯಿತು. ಜೀಶಂಪ ಮತ್ತು ತಿಪ್ಪೇಸ್ವಾಮಿಯವರ ಕ್ರಿಯಾಶೀಲತೆ ಮತ್ತು ಪಾದ್ರಿಯುತ್ಸಾಹಾ ಸಕ್ತಿಗಳು ಜಾನಪದ ವಸ್ತು ಸಂಗ್ರಹಾಲಯದ ಸರ್ವ ಯಶಸ್ವಿಗೆ

---

೧. ಜಾ.ಮ. ಸಂಪುಟ. ದೇಜಗೌ, ಪು. ೬೦೫-೬೦೬

ಕಾರಣವಾಗಿವೆ.'[೧] ಎಂದು ದೇಜಗೌ ಅವರು ಪ್ರಾರಂಭದ ದಿನಗಳನ್ನು ನೆನಪಿಸಿಕೊಂಡಿದ್ದಾರೆ. ಹೀಗೆ ಒಂದೊಂದು ಕೆಲಸಕ್ಕೂ ಸೂಕ್ತವಾದ ವ್ಯಕ್ತಿಯನ್ನು ನೇಮಿಸುವುದರ ಮುಖಾಂತರ ಪರಂಪರೆಯಿಂದ ಉಳಿದುಕೊಂಡು ಬಳಸಿಕೊಂಡು ಬಂದ ಮೂಲ ಆಸ್ತಿಯನ್ನು ಅಪೂರ್ಣ ಕಲಾ ಸಂಪತ್ತನ್ನು ಕಾಯ್ದುಕೊಂಡು ಬರುವ ಪವಿತ್ರ ಕೇಂದ್ರವಾಯಿತು. ಕೀಳೆಂದು ಕಡೆಗಣಿಸಿದ ಕಡ್ಡಿ-ಚಿಪ್ಪು ಬಕ್ಕರೆಗಳನ್ನು ಕಲೆಹಾಕಬೇಕು ಎಂದು ಹೇಳಿದ ಇವರು ತಾವೇ ಖುದ್ದಾಗಿ ಸಂಗ್ರಹಕಾರ್ಯದಲ್ಲಿ ತೊಡಗಿದರು. ಅವರ ನೇತೃತ್ವದಲ್ಲಿ ಅಪರೂಪದ ರಾಶಿ ರಾಶಿ ವಸ್ತುಗಳು ಸಂಗ್ರಹವಾದವು. ತಮಗೆ ಸೋವಿಯತ್ ಲ್ಯಾಂಡ್ ಪ್ರಶಸ್ತಿಯಿಂದ ಬಂದ ಹಣದಲ್ಲಿ ಒಂದು ಸಾವಿರ ರೂಗಳನ್ನು ವಸ್ತು ಸಂಗ್ರಹಾಲಯಕ್ಕೆ ಕೊಡುಗೆಯಾಗಿ ಕೊಟ್ಟರು. ಅಂದು ದೇಜಗೌ ಅವರ ದೂರದೃಷ್ಟಿಯ ಫಲವಾಗಿ ಹುಟ್ಟಿಕೊಂಡ ಈ ವಸ್ತು ಸಂಗ್ರಹಾಲಯ ಭಾರತದಲ್ಲಿಯೇ ಅಪೂರ್ವವಾದದ್ದಾಗಿದ್ದು ಅದನ್ನು ಸರಿಗಟ್ಟುವ ಇನ್ನೊಂದು ವಸ್ತುಸಂಗ್ರಹಾಲಯ ಇಲ್ಲವೆನ್ನುವಷ್ಟರಮಟ್ಟಿಗೆ ಅದು ಬೆಳೆದಿದೆ. ಇದು ಹುಟ್ಟಿಕೊಂಡು ಬೆಳೆದ ನಂತರ ನಾಡಿನ ಅನೇಕ ಕಡೆ ಜಾನಪದ ಮ್ಯೂಸಿಯಂಗಳು ಸ್ಥಾಪನೆಯಾಗಿವೆ.

'ಜವರೇಗೌಡರು ಜಾನಪದ ವಸ್ತು ಸಂಗ್ರಹಾಲಯವನ್ನು ವ್ಯವಸ್ಥೆಗೊಳಿಸಬೇಕಾದರೆ ತೋರಿದ ಉತ್ಸಾಹ ನೋಡಿದರೆ ಅವರೊಬ್ಬ ಉನ್ನತ ಮಟ್ಟದ ಜಾನಪದ ಪ್ರೇಮಿ ಎಂದು ಹೇಳಬಹುದು. ಹಾಗೇ ಅವರ ಜಾನಪದ ಅಧ್ಯಯನವನ್ನು ಅವಲೋಕಿಸಿದರೆ ಅವರೊಬ್ಬರು ಜಾನಪದ ವಿದ್ವಾಂಸ ಎಂದೂ ತಿಳಿಯುತ್ತದೆ. ಅವರು ಅನೇಕ ಜಾನಪದ ವಿದ್ಯಾರ್ಥಿಗಳಿಗೆ ಸಂಶೋಧನೆ ನಡೆಸಲು ಮಾರ್ಗದರ್ಶಕರಾಗಿದ್ದರು. ಇಂದಿನ ಜಾನಪದ ಇಲಾಖೆಯ ಮುಖ್ಯಸ್ಥರಿಗೂ ಅವರೇ ಗೈಡ್. ಜಾನಪದ ವಿಷಯದಲ್ಲಿ ದೇಜಗೌ ತಕ್ಕಷ್ಟು ಕೃಷಿ ಮಾಡಿದ್ದಾರೆ. ಈ ವಿದ್ವತ್, ಆಸಕ್ತಿ, ಕೌಶಲ ಇವುಗಳೇ ಜಾನಪದ ವಸ್ತು ಸಂಗ್ರಹಾಲಯವನ್ನು ಮುಗಿಲೆತ್ತರಕ್ಕೇರಿಸಿದವು'[೨] ಎಂದು ಉತ್ಸಾಹದ ಮಾತುಗಳನ್ನಾಡಿದ್ದಾರೆ.

ಮಾನಸಗಂಗೋತ್ರಿಯ ಹೃದಯ ಭಾಗದಂತಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮುಂಭಾಗವಿರುವ ಜಯಲಕ್ಷ್ಮೀ ಅರಮನೆಯು ಜಾನಪದ ಸಾಮಗ್ರಿಗಳ ಸಂಗ್ರಹವನ್ನಷ್ಟೇ ಅಲ್ಲದೇ ಜನಪದರ ಜೀವಂತ ಬದುಕನ್ನು ನೆನಪಿಸುವಂಥ ಚೈತನ್ಯದಾಯಕ ರಕ್ತನಾಳಗಳಂತೆ ಸಹೃದಯರ ಉತ್ಸಾಹವನ್ನು ಹೆಚ್ಚಿಸುತ್ತಿದೆ. ಚಿರಂತನ

೧. ಟಿ.ಕೆ.ಕೆಂಪೇಗೌಡ, ಅನಿಕೇತನದಲ್ಲೊಂದು ವಿಶ್ವಚೇತನ, ಪು. ೧೧೩

೨. ರಸಷಷ್ಠಿ, ಸಂ. ಕೆ.ಸಚ್ಚಿದಾನಂದಯ್ಯ (ಚಿರಂತನ) ಪು. ೨೯

ವಸ್ತುಸಂಗ್ರಹಾಲಯದ ಮಹತ್ಕಾರ್ಯಕ್ಕೆ ಕಾರಣಕರ್ತರಾದ ಶ್ರೀಯುತ ದೇಜಗೌ ಅವರು ಜನಪದ ಸಂಸ್ಕೃತಿಯ ಮುಕುಟಮಣಿಯಂತಿರುವುದು ಕನ್ನಡಿಗರೆಲ್ಲರಿಗೂ ಅಭಿಮಾನವೇ ಸರಿ. ಜನಪದರ ಜೀವಂತ ಬದುಕಿಗೆ ಸಾಕ್ಷಿಯಾಗಿರುವ ಈ ವಸ್ತುಗಳನ್ನು ನೋಡಿದಾಗ ಆ ಕಾಲಘಟ್ಟದ ಶ್ರೀಮಂತ ಜನಜೀವನವು ನಮ್ಮ ಕಣ್ಮುಂದೆ ಬರುವಂತಿದೆ. ಕರ್ನಾಟಕದಾದ್ಯಂತ ಜನಪದ ವಸ್ತುಗಳನ್ನು ಸಂಗ್ರಹಿಸುವ ಜೊತೆಗೆ ವೀರಗಲ್ಲು, ಮಹಾಸತಿ ಕಲ್ಲುಗಳು.... ಇಂತಹ ಅನನ್ಯ ಐತಿಹಾಸಿಕ ಸಾಮಗ್ರಿಗಳ ಸಂಗ್ರಹಕಾರ್ಯಕ್ಕೆ ಪ್ರೋತ್ಸಾಹ ಸಿಕ್ಕಂತಾಗುತ್ತದೆ. ಇತ್ತೀಚಿನ ದಿನಗಳಲ್ಲಿ ವಸ್ತುಸಂಗ್ರಹಾಲಯದ ಮಹತ್ಕಾರ್ಯವನ್ನು ಗಮನಿಸಿದ ಜನಪದರು ತಮ್ಮ ಪೂರ್ವಿಕರು ಬಳಸಿದ್ದ ಕೃಷಿ ಉಪಕರಣಗಳು, ಯುದ್ಧ ಸಾಮಗ್ರಿಗಳನ್ನು ಜೋಪಾನವಾಗಿ ಸಂಗ್ರಹಿಸಿಡುವ ಕಾರ್ಯಕ್ಕೆ ಮುಂದಾಗಿರುವುದು ಶ್ಲಾಘನೀಯವಾದ ಕೆಲಸವಾಗಿದೆ.

ಅಧ್ಯಾಯ – ೬

ಅನುಬಂಧ

ದೇಜಗೌ ಅವರ ಸಂದರ್ಶನ

೧) ನಿಮ್ಮ ಬಾಲ್ಯ ಜೀವನದ ಬಗ್ಗೆ ತಿಳಿಸಿಕೊಡ್ತೀರಾ ಸರ್?

ನಮ್ಮೂರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ (ಈಗ ರಾಮನಗರ) ಚನ್ನಪಟ್ಟಣ ತಾಲ್ಲೂಕಿನ ಚಕ್ಕರೆ ಎಂಬ ಗ್ರಾಮ. ನನ್ನ ತಂದೆಯ ಊರು. ತಾಯಿಯ ಊರಾದ 'ಮುದಿಗೆರೆ'ಯಲ್ಲಿ ನನ್ನ ಜನನವಾಯಿತು ಎಂದು ನಮ್ಮ ಹಿರಿಯರು ಹೇಳ್ತಾರೆ.

೨) ನೀವು ಬಾಲ್ಯದಲ್ಲಿ ಶಾಲೆಗೆ ಸೇರಿದ ಬಗ್ಗೆ ಹೇಳ್ತಿರಾ?

ನಮ್ಮ ತಂದೆಯ ಹೆಸರು ದೇವೇಗೌಡ ಎಂದೂ, ಇಬ್ಬರು ಗಂಡುಮಕ್ಕಳು. ನನ್ನ ಅಣ್ಣ ಈಗಾಗಲೇ ಶಾಲೆಗೆ ಹೋಗುತ್ತಿದ್ರೂ, ತಂದೆಗೆ ಕಣ್ಣು ಕುರುಡಾಗಿತ್ತು. ಮನೆಯಲ್ಲಿದ್ದ ಮೇಕೆ (ಆಡು)ಗಳನ್ನು ಮೇಯಿಸಲು ನನ್ನನ್ನು ಕಳಿಸಲು ಪ್ರಾರಂಭಿಸಿದರು. ಆಡುಗಳನ್ನು ಮೇಯಿಸಲು ಹೋದರೂ ಕೂಡ ನನ್ನ ಗಮನವೆಲ್ಲ ಆ ಶಾಲೆಯ ಮಕ್ಕಳನ್ನೇ ಹಿಂಬಾಲಿಸುತ್ತಿತ್ತು. ಹೀಗೆ ಅನೇಕ ದಿನಗಳು ಉರುಳಿದ ಅನಂತರ ಒಮ್ಮೆ ಆಡುಗಳನ್ನು ಓಣಿಯ ಬೇಲಿಗೆ ಮೇಯಲು ಬಿಟ್ಟು ಶಾಲೆಯ ಕಿಟಕಿಯ ಬಳಿ ನಿಂತು ಕೊಠಡಿಯ ಒಳಗಿನ ಮಕ್ಕಳು ಮಾಸ್ಟರನ್ನು ಗಮನಿಸುತ್ತಿದ್ದೆ. ಹೀಗೆ ಕೆಲವು ದಿನಗಳು ಕಿಟಕಿಯ ಮೂಲಕ ನೋಡುತ್ತಿದ್ದ ನನ್ನನ್ನು ಗಮನಿಸಿದ 'ವೆಂಕಟರಾಮ ಅಯ್ಯಂಗಾರ್' ಎಂಬ ಮೇಸ್ಟರು ನಮ್ಮ ತಂದೆಗೆ ಹುಡುಗನನ್ನು ಶಾಲೆಗೆ ಸೇರಿಸುವಂತೆ ಹೇಳಿದರೂ ತಂದೆ ಕೇಳಲಿಲ್ಲ. ಆ ಸಮಯಕ್ಕೆ ಕೇವಲ ಆರು ತಿಂಗಳವರೆಗೆ ಮಾತ್ರ ಸ್ಕೂಲ್ ಹೆಡ್‌ಮಾಸ್ಟರಾಗಿ ಬಂದಿದ್ದ ಹೆಚ್.ಕೆ.ವೀರಣ್ಣಗೌಡರು ನಮ್ಮ ತಂದೆಯನ್ನು ಕುರಿತು ಹುಡುಗನನ್ನು ಶಾಲೆಗೆ ಕಳುಹಿಸಿ ಇಲ್ಲವೆಂದರೆ ಜೈಲಿಗೆ ಹಾಕಿಸುವೆ ಎಂದು ಹೆದರಿಸಿದ ಅನಂತರ ನಮ್ಮ ತಂದೆ ಒಪ್ಪಿ ಶಾಲೆಗೆ ಕಳುಹಿಸಿದರು. ಜೂನ್ ೧ನೇ ತಾರೀಖು ವೀರಣ್ಣಗೌಡರು ನನಗೆ ಒಂದು ಜೊತೆ ಬಟ್ಟೆ, ಜೊತೆಗೆ ಪುಸ್ತಕವನ್ನು ತಂದುಕೊಟ್ಟರು. ಅಲ್ಲಿಂದ ಶಾಲಾ ಜೀವನ ಆರಂಭ. ಆ ಆರು ತಿಂಗಳು ನನ್ನ ಜೀವನದಲ್ಲಿ ಮರೆಯಲಾಗದ ಶುಭದಿನಗಳು ಎಂದು ನಾನು ಭಾವಿಸಿದ್ದೇನೆ.

೩) ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮೊಟ್ಟ ಮೊದಲ ಬಾರಿಗೆ ಜಾನಪದವನ್ನು ಪಠ್ಯವಾಗಿ ಅಳವಡಿಸಿದ್ದು ಹೇಗೆ ಸರ್?

ನಾವು ಹಳ್ಳಿಯವರಾಗಿದ್ದರಿಂದ 'ಜಾನಪದ' ನಮ್ಮ ಜೀವನದ ಜೊತೆ ಸದಾಕಾಲ ಹಾಸುಹೊಕ್ಕಾಗಿತ್ತು. ನಮ್ಮ ತಾಯಿ ಬೆಳಿಗ್ಗೆ ಎದ್ದು ರಾಗಿಕಲ್ಲನ್ನು ಬೀಸುತ್ತಿದ್ದಾಗ ನಾನು ಹೋಗಿ ತಾಯಿಯ ತೊಡೆ ಮೇಲೆ ಪದಗಳನ್ನು ಕೇಳಿಸಿಕೊಂಡು ಭರ್ಜರಿ ನಿದ್ದೆ ಮಾಡ್ತಿದ್ದೆ. ತರೀಕೆರೆಯಲ್ಲಿ ನಡೆದ ಜಾನಪದ ಸಮ್ಮೇಳನವು ನಿಂಗಪ್ಪ, ಚನ್ನಬಸಪ್ಪನವರ ನೇತೃತ್ವದಲ್ಲಿ ಏರ್ಪಾಟಾಗಿತ್ತು. ಅಲ್ಲಿಗೆ ನಾನು ಗೋಷ್ಠಿಯ ಅಧ್ಯಕ್ಷನಾಗಿದ್ದೆ. ಅಲ್ಲಿ ಜನಪದಗೀತೆ ಲಾವಣಿ, ಕಥನಗೀತೆ...ಗಳ ಮೇಲೆ ವಿಚಾರ ಮಂಡನೆಯಾಯಿತು. ಆಗ ನನಗೆ ಕೇವಲ ಜಾನಪದ ಸೀಮಿತವಾಗಿರದೆ ವಿಸ್ತಾವಾಗಿ ಹರಡಿಕೊಂಡಿರಬೇಕೆಂಬ ಮಹಾದಾಸೆಯಿಂದ ಅಲ್ಲಿಂದ ಪ್ರಯತ್ನಿಸಿ ವಿಶ್ವವಿದ್ಯಾನಿಲಯದ ಮೆಟ್ಟಿಲತ್ತುವಂತೆ ಮಾಡಿದೆ. ಆಗ ಕೆಲವರು ಜವರೇಗೌಡ ಕೆಲಸವಿಲ್ಲದೆ ಹಳ್ಳಿಯ ಸೋಬಾನೆಪದ, ಗೀತೆಗಳನ್ನು ಪಠ್ಯ ಮಾಡ್ತಾನಂತೆ ಅಂತ ನಗುತ್ತಿದ್ದರು. ಜಾನಪದ ಸಂಗ್ರಹ ಕಾರ್ಯ ನಡೆದಿತ್ತು. ಆದರೆ ಅಧ್ಯಯನ ನಡೆದಿರಲಿಲ್ಲ. ಅನೇಕರಿಗೆ ಜಾನಪದ ಕುರಿತು ಪಾಠ ಮಾಡುವಂತೆ ಕೇಳಿಕೊಂಡೇ ಮಾಡಲ್ಲ ಎಂದರೂ, ನಾನೇ ಸ್ವತಃ ಎ.ಹೆಚ್.ಕ್ರಾಪ್ಪೆ ಅವರ 'The Science of Folklore' ಕೃತಿ ಜೊತೆಗೆ ಅನೇಕ ಗ್ರಂಥಗಳನ್ನು ಓದಿಕೊಂಡು ಟಿಪ್ಪಣಿ ಜೊತೆಗೆ ನನ್ನ ಅನುಭವದ ಮಾತುಗಳಿಂದ ಪಾಠಮಾಡಿದೆ. ಆ ಟಿಪ್ಪಣಿಗಳೇ ಮುಂದೆ 'ಜಾನಪದ ಅಧ್ಯಯನ' ಎಂಬ ಪುಸ್ತಕವಾಗಿ ಮುದ್ರಣ ಮಾಡಿಸಿದೆ ಎಂದರು. ಜಾನಪದ ಕೇವಲ ಐಚ್ಛಿಕವಾಗಿ ಇದ್ದದ್ದು ಮುಂದೆ ನಾನು ಉಪಕುಲಪತಿ ಆದ ಮೇಲೆ ಪ್ರತ್ಯೇಕ ಜಾನಪದ ಎಂ.ಎ., ತರಗತಿ ಆರಂಭಿಸಿದೆವು. ಜೀಶಂಪ ಅವರು ಜಾನಪದ ತರಗತಿಗಳಿಗೆ ಪಾಠ ಮಾಡಲು ಒಪ್ಪಿದರು.

೪) ನಿಮ್ಮ ಜಾನಪದ ಕೃತಿಗಳಿಗೆ ಪ್ರಭಾವ, ಪ್ರೇರಣೆ ನೀಡಿದ ಕೃತಿಗಳು ಯಾವುವು?

ಜಾನಪದ ಅಧ್ಯಯನ ಕೃತಿಗೆ ಮೂಲ ಪ್ರೇರಣೆ ಎ.ಎಚ್. ಕ್ರಾಪೆ ಅವರ The Science of Folklore' ಕೃತಿ. ಜೊತೆಗೆ ಇತರ ಪಾಶ್ಚಾತ್ಯ ಜಾನಪದ ಕೃತಿಗಳ ಅಧ್ಯಯನವನ್ನು ಹಿಂದೆಯೇ ಮಾಡಿದ್ದೆ, ಜಾನಪದಕ್ಕೆ ಉತ್ತಮ ಸ್ಥಾನಮಾನ ದೊರಕಿದಾಗ ಅದರ ಕಡೆಗೆ ಹೆಚ್ಚಿನ ಲಕ್ಷ್ಯ ಕೊಟ್ಟವರು ಎಚ್.ಎಲ್ ನಾಗೇಗೌಡರು. ರಾಮನಗರದಲ್ಲಿ ಒಂದು 'ಜಾನಪದ ವಸ್ತು ಸಂಗ್ರಹಾಲಯ' ಸ್ಥಾಪಿಸಿದರು. ಹಾಗೂ ಜಾನಪದ ಅಕಾಡೆಮಿ ಸ್ಥಾಪಿಸಲು ಶ್ರಮಿಸಿದರು.

೫) ನೀವು ಸ್ಥಾಪಿಸಿದ ವಸ್ತು ಸಂಗ್ರಹಾಲಯದ ಪ್ರಾರಂಭದ ಬಗ್ಗೆ ಹೇಳಿ ಸರ್?

ಜಾನಪದದ ಬಗೆಗಿನ ತೀವ್ರ ಆಸಕ್ತಿಯಿಂದಾಗಿ ಕೆಲವೊಮ್ಮೆ ಅಮೇರಿಕಾ, ಬ್ರಿಟನ್, ಫಿನ್‌ಲ್ಯಾಂಡ್ ಇಂತಹ ದೇಶಗಳಲ್ಲಿ ಪ್ರವಾಸ ಮಾಡಿದಾಗ ಅಲ್ಲಿ ಮಾಡಿರುವಂತಹ ಜಾನಪದ ಸಂಗ್ರಹ, ವಸ್ತುಸಂಗ್ರಹಾಲಯಗಳ ಬಗೆಗಿನ ನನ್ನ ಆಸಕ್ತಿ ತೀವ್ರಗೊಂಡು

ಇಂತಹ ಕಾರ್ಯ ನಮ್ಮಲ್ಲೂ ಪ್ರಾರಂಭಗೊಳ್ಳಬೇಕೆಂದು ಮನಸ್ಸಾಯಿತು. ಅನೇಕ ವ್ಯಕ್ತಿಗಳ ಕಟು ಹಾಸ್ಯದ ನಡುವೆಯೂ ಕರ್ನಾಟಕದಲ್ಲಿನ ಕೆಲವು ಅಮೂಲ್ಯ ವಸ್ತುಗಳ ಸಂಗ್ರಹದ ಜೊತೆಗೆ ನನ್ನ ಮಡದಿಯ ಕೈಕಡಗ, ಕಾಲ್ಮೂರಿಯಂತಹ ಹಳೇಕಾಲದ ಆಭರಣಗಳನ್ನು ತೆಗೆದುಕೊಂಡು ಬಂದು ಶುರುಮಾಡಿದೆ. ಕ್ಯೂರೇಟರಾಗಿ ಬಂದ ಪಿ.ಆರ್.ತಿಪ್ಪೇಸ್ವಾಮಿ ಅವರು ಸಂಗ್ರಹಾಲಯಕ್ಕಾಗಿ ಅನೇಕ ಶಾಶ್ವತ ಕೆಲಸಗಳನ್ನು ಮಾಡಿದರು. ನನಗೆ ಇಂದಿಗೂ ನೆನಸಿರುವಂತೆ ಮೈಸೂರು ವಸ್ತು ಸಂಗ್ರಹಾಲಯವನ್ನು ನೋಡಲು ಬಂದ ಬ್ರಿಟಿಷ್ ಮ್ಯೂಸಿಯಮ್ ಡೆಪ್ಯುಟಿ ಡೈರೆಕ್ಟರ್ ಅಲ್ಲಿನ ಕೆಲಸ ಕಾರ್ಯಗಳಿಗೆ ಮನಸೋತು ನಾನು ಹೊರಗಡೆ ಕೆಲಸ ನಿಮಿತ್ತ ಹೋಗಿ ವಾಪಸ್ಸು ಬರುವವರೆಗೂ ಕಾದು ಕುಳಿತಿದ್ದೂ ಒಳ್ಳೇ ಕೆಲಸ ಮಾಡಿದ್ದೀರಿ ಎಂದು ಹಾರೈಸಿ ಹೋದರು.

೬. ತಾತ ನಿಮ್ಮ ಶಿಷ್ಯಂದಿರಲ್ಲಿ ಜಾನಪದ ಕೆಲಸ ಕಾರ್ಯಕ್ಕೆ ತೊಡಗಿಸಿಕೊಂಡ ವ್ಯಕ್ತಿಗಳ ಹೆಸರನ್ನೇಳಿ?

ನನಗೆ ಅಲ್ಪಸ್ವಲ್ಪ ನೆನಪಿರುವಂತೆ ಜೀಶಂಪ, ಡಿ.ಕೆ.ರಾಜೇಂದ್ರ, ಹಿ.ಶಿ.ರಾಮಚಂದ್ರೇಗೌಡ.... ಶಿಷ್ಯಂದಿರು ಕ್ಯಾತನಹಳ್ಳಿ ರಾಮಣ್ಣ ನನ್ನ ನೇರ ಶಿಷ್ಯನೋ ನನಗೆ ನೆನಪಿಲ್ಲ ಎಂದರು. ಆದರೂ ರಾಮಣ್ಣ ಜಾನಪದ ಕುರಿತಂತೆ ಒಂದುಸಾವಿರ ಪುಟದಷ್ಟು ಕೆಲಸ ಮಾಡಿದ್ದಾರೆ. ಪುಸ್ತಕವಾಗಿ ಸದ್ಯದಲ್ಲೇ ಹೊರ ಬರಲಿದೆ ಎಂದರು.

೭. ಸರ್ ನಿಮ್ಮ ಜಾನಪದ ಅಧ್ಯಯನ ಕೃತಿಯಲ್ಲಿನ ಜಾನಪದ ಕುಣಿತ ಮತ್ತು ಬಯಲಾಟ ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿ ಭರತನಾಟ್ಯದ ಹುಟ್ಟು, ವಿಸ್ತಾರದ ಬಗೆಗೆ ಹೆಚ್ಚಿಗೆ ಪ್ರಸ್ತಾಪ ಮಾಡಿಲ್ಲ, ಮಾಡಿದ್ದರೆ ಒಳಿತಾಗುತ್ತಿತ್ತು?

ಕೂಚುಪುಡಿ, ಕಥಕ್ಕಳಿ, ಭಾಂಗ್ರಾ, ಗಾರ್ಭಾ, ಬಿಹೂ, ಯಕ್ಷಗಾನ ಇಂತಹ ಜಾನಪದ ನೃತ್ಯ ಕಲೆಗಳ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಬಹುಶಃ ಭರತನಾಟ್ಯದ ಬಗ್ಗೆ ನಾನು ಮರೆತಿರಬಹುದು ಅನ್ನಿಸುತ್ತದೆ. ಆದರೂ ಭರತನಾಟ್ಯದ ಬಗೆಗಿನ ಅಧ್ಯಯನ ಇನ್ನೂ ಹೆಚ್ಚಿನ ಮಟ್ಟದಲ್ಲಾಗಬೇಕು.

೮. ತಾತ ಬೀದರ್‌ನಲ್ಲಿ ನಡೆದ ಪ್ರಥಮ ಅಖಿಲ ಭಾರತ ಜಾನಪದ ಸಮ್ಮೇಳನದ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಇಂತಹ ಜಾನಪದ ಸಮ್ಮೇಳನದ ಕೆಲಸ ಸಾಹಸದ ಕಾರ್ಯವೇ ಸರಿ. ಇಡೀ ದೇಶದಲ್ಲಿನ ೧೯ ರಾಜ್ಯಗಳಿಂದ ಪ್ರತಿನಿಧಿಗಳು, ಕಾರ್ಯಕರ್ತರು ಆಗಮಿಸಿದ್ದರು. ಜಾನಪದ ಕುರಿತಾದ ೨ ಗೋಷ್ಠಿ, ಪ್ರಾದೇಶಿಕ ಕಾರ್ಯಗಾರಗಳು ನಡೆದವು. ಒಳ್ಳೇ ವಿಚಾರಗಳ ಬಗೆಗೆ ವಿಷಯ ಮಂಡನೆಯಾದವು. ಬಹುಶಃ ಇತರ ರಾಜ್ಯಗಳಲ್ಲಿ

ಜಾನಪದ ಕುರಿತು ನಡೆದಿರುವಷ್ಟು ಅಧ್ಯಯನ ಕನ್ನಡದಲ್ಲಿ ಇನ್ನೂ ನಡೆದಿಲ್ಲ ಎಂಬ ಭಾವನೆ ಇದೆ. ಆದರೂ ಗೋಷ್ಠಿಗಳ ವಿಚಾರ ಮಂಡನೆಯಲ್ಲಿ ಚಕ್ಕರೆ ಶಿವಶಂಕರ, ತೀ.ನಂ.ಶಂಕರನಾರಾಯಣರಂತಹ ವಿದ್ವಾಂಸರು ಒಳ್ಳೇ ಪ್ರಬಂಧ ಮಂಡಿಸಿದರು. ಅನಂತಮೂರ್ತಿ ಅವರು ಇಂಗ್ಲಿಷ್ ಕನ್ನಡಕ್ಕೆ ಗೊಬ್ಬರವಾಗಲಿ ಎಂಬ ಸಂದೇಶ ನೀಡಿದರು. ಒಟ್ಟಾರೆ ನನ್ನ ಪ್ರಕಾರ ಈ ಜಾನಪದ ಸಮ್ಮೇಳನ ಮಹತ್ವಪೂರ್ಣವಾದುದು. 'ವಿಶ್ವದೊಳಗೊಂಡು ವಿಶ್ವ ಜಾನಪದ' ಎಂಬ ಅಭಿಪ್ರಾಯವನ್ನೀಳಿದೆ.

೯. ಜಾನಪದ ಬಗೆಗಿನ ಅಧ್ಯಯನವನ್ನು ಮುಂದೆ ಯಾವ ಯಾವ ಕ್ಷೇತ್ರದಲ್ಲಿ ನಡೆಸಬಹುದಾಗಿದೆ ಸರ್?

ವಿಶ್ವವೇ ಜಾನಪದ ಅದರ ವಸ್ತು ವಿಸ್ತಾರವಾದುದು, ಆದರೂ ಸಸ್ಯ, ಪ್ರಾಣಿ, ವೈದ್ಯ, ಶಿಲ್ಪ.... ಇಂತಹ ಕ್ಷೇತ್ರಗಳಲ್ಲಿ ಅಧ್ಯಯನ ಸಾಗಬೇಕು. ಅದರಲ್ಲೂ ಆಯುರ್ವೇದ ನಾಟಿ ಔಷಧಿಗಳ ತೌಲನಿಕ ಅಧ್ಯಯನಕ್ಕೆ ತಲೆಮಾರುಗಳ ಅಧ್ಯಯನ ಮಾಡಬೇಕಾಗಬಹುದು. ಆದರೂ ಇಂತಹ ಅಧ್ಯಯನ ಪ್ರಸ್ತುತವಾಗುತ್ತದೆ.

ಕರ್ನಾಟಕದಲ್ಲಿ ಕನ್ನಡ ಕಡ್ಡಾಯ ಭಾಷೆಯಾಗಬೇಕು, ಆಡಳಿತ ಭಾಷೆಯಾಗಬೇಕು ಎಂಬ ಮಾತಿನ ಬಗೆಗೆ ಏನು ಹೇಳಲು ಇಷ್ಟಪಡುತ್ತೀರಿ ತಾತ?

ನಾನು ಗಮನಿಸಿದ ಮಟ್ಟಿಗೆ ಕನ್ನಡಕ್ಕಾಗಿ ಹೋರಾಟ ಮಾಡಿದವರು ನಾಲ್ಕೇ ಜನ. ಬಿ.ಎಂ.ಶ್ರೀ, ಕುವೆಂಪು, ಮಾಸ್ತಿ, ಮತ್ತು ರಾಜರತ್ನಂ. ಇತ್ತೀಚೆಗೆ ಕನ್ನಡದ ಧ್ವನಿಗಳೇ ಕಡಿಮೆ ಆಗಿವೆ. ನಾವು ಸ್ನಾತಕೋತ್ತರ ಶಿಕ್ಷಣ ಪಡೆದಾಗ ಕೇವಲ ನಾಲ್ಕೈದು ಜನ ಮಾತ್ರ ಇದ್ದೇವು. ಆದರೆ ಈಗ ಸಾವಿರಾರು ಜನ ಸ್ನಾತಕೋತ್ತರ ಶಿಕ್ಷಣ ಪಡೆದವರು ಇದ್ದೀರಿ, ನೀವೆಲ್ಲರೂ ಒಕ್ಕೊರಲಿನಿಂದ ಕೂಗಾಕಿದಾಗ ನಿಜವಾಗ್ಲೂ ಕನ್ನಡ ಕಡ್ಡಾಯ ಭಾಷೆ, ಆಡಳಿತ ಭಾಷೆ, ಕನ್ನಡ ಮಾಧ್ಯಮ ಜಾರಿಯಾಗುತ್ತದೆ. ಆದರೆ ಪ್ರಯತ್ನ ಮುಖ್ಯ ಇತ್ತೀಚಿನ ಯುವಕರಲ್ಲಿ ಅಂತಹ ಪ್ರಯತ್ನಗಳು ಕಾಣದಾಗಿವೆ ಎಂದರು.

ಉಪಸಂಹಾರ

ಜಾನಪದ ಸಾಹಿತ್ಯವು ವಿಶ್ವವ್ಯಾಪಿಯಾಗಿ ತನ್ನ ಸ್ಥಾನಮಾನವನ್ನು ವಿಸ್ತರಿಸಿ ಕೊಂಡಿರುವಂಥದ್ದು. ಸಾಹಿತ್ಯಕ್ಷೇತ್ರಕ್ಕೆ ಅಗಾಧವಾದ ಕೊಡುಗೆ ಜಾನಪದದಿಂದ ದೊರಕಿರುವುದೇ ಸಾಕ್ಷಿ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ 'ಜಾನಪದವೇ ಮಹಾಕಾವ್ಯಗಳ ವಸ್ತುವಾಗಿದೆ. ಇಲಿಯಡ್, ಈನಿಯಡ್, ಕಲೇವಾಲ ಇಂತಹ ಬೃಹತ್ ಗಾತ್ರದ ಮಹಾಕಾವ್ಯಗಳಿಗೆ ಜಾನಪದದ ಕೊಡುಗೆ ಅಪಾರ. ಭಾರತದಲ್ಲೂ ಪ್ರಾದೇಶಿಕ ಭಾಷೆಗಳಲ್ಲಿ ಅಲ್ಲಿಯ ಪರಿಸರಕ್ಕನುಗುಣವಾಗಿ ಅನೇಕ ಜಾನಪದ ಮಹಾಕಾವ್ಯಗಳು ರಚನೆಗೊಂಡಿವೆ. ಕನ್ನಡ ಭಾಷೆ ಪ್ರಾಚೀನತಮ ವಾಗಿರುವಂತೆ 'ಜಾನಪದ'ವು ಪೂರ್ವ ಇತಿಹಾಸವನ್ನೇ ಹೊಂದಿದೆ. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತಮತಿಗಳ್' ಎಂಬಂಥ ಮಾತುಗಳೇ ನಿದರ್ಶನವಾಗಿದೆ. ಆಧುನಿಕ ಕನ್ನಡ ಕಾಲಘಟ್ಟದಲ್ಲಿ ಜಾನಪದ ಕ್ಷೇತ್ರಕ್ಕೆ ದೇಜಗೌ ಅವರ 'ಜಾನಪದ ಅಧ್ಯಯನ' ಕೃತಿಯೂ ಹೊಸ ಪರಂಪರೆಗೆ ನಾಂದಿಯಾಯಿತು.

ಜನಸಾಮಾನ್ಯರ ಅನುಭವಗಳಿಂದ ಅಭಿವ್ಯಕ್ತಿ ಪಡೆದಿರುವ 'ಜನಪದ ಗೀತೆ' ಅವರ ದೈನಂದಿನ ಬದುಕಿನ ಪ್ರತಿರೂಪ. ಮಗುವಿನ ಜನನ, ಯವ್ವನದಿಂದ ಮೊದಲ್ಗೊಂಡು ವೈವಾಹಿಕ, ಮುಪ್ಪಿನವರೆವಿಗೂ ಜನಪದ ಗೀತೆಗಳ ಬಾಹುಳ್ಯವಿದೆ. ದೇಜಗೌ ಅವರು ಜನಪದ ಸಾಹಿತ್ಯವನ್ನು ವಿವಿಧ ಕನ್ನಡ ವಿದ್ವಾಂಸರ ವಿಂಗಡಣೆಯ ಜೊತೆಗೆ ವಿದೇಶಿ ರಾಷ್ಟ್ರಗಳಲ್ಲಿನ ಜನಪದ ಚಿಂತಕರ ಬಗ್ಗೆಯೂ ವಿವರಿಸಿದ್ದಾರೆ. ಬಂದು ಪರಿಪೂರ್ಣವೆನಿಸಬಹುದಾದ ಜೀವಂತ ಬದುಕನ್ನು ಜನಪದರಲ್ಲಿ ಗೀತೆ, ಕಥೆ, ಕಥನ ಕವನಗಳಲ್ಲಿ ಕಾಣಬಹುದಾಗಿದೆ. ಜನಪದರಿಗೆ ಸ್ವದೈವ, ಪರದೈವ ಎಂಬ ಭೇದವಿಲ್ಲದೆ ಎಲ್ಲರ ಜೊತೆಗೂ ಸೌಹಾರ್ದತೆಯಿಂದ ಬದುಕುವಂತಹ ವಿಶಾಲ ಮನೋಭಾವನೆಯನ್ನು ಗುರುತಿಸಬಹುದಾಗಿದೆ.

ಕರ್ನಾಟಕದಲ್ಲಿ ಪ್ರಾಮುಖ್ಯತೆ ಪಡೆದಿರುವ ಪೌರಾಣಿಕ ಪುರುಷರುಗಳಿಗಿರುವ ವೃತ್ತಿಗಾಯಕರು ಹಾಗೂ ಅವರ ಕಲಾಪ್ರಕಾರಗಳಲ್ಲಿನ ಭಿನ್ನತೆಯ ಬಗೆಗೂ ಓದುಗರ ಗಮನವನ್ನು ಲೇಖಕರು ಸೆಳೆದಿದ್ದಾರೆ. ಭಾರತದೇಶವು ಪ್ರಾಂತೀಯವಾಗಿ ಹಲವು ಭಾಷೆ, ಧರ್ಮಗಳಿರುವಂತೆಯೇ ಜನಪದ ನೃತ್ಯ ಕಲೆಗಳಲ್ಲಿಯ ವೈವಿಧ್ಯತೆಯ ಬಗೆಗೆ ಚರ್ಚೆಮಾಡಿರುವ ರೀತಿ ಶ್ರೇಷ್ಠ ದರ್ಜೆಯದು. ಗಾರ್ಬಾ, ಕಥಕ್ಕಳಿ, ಕೂಚುಪುಡಿ,

ಬಾಂಗ್ರಾ, ಬಿಹೂ, ಗೌರ್, ಮುಗಡಿ ಎಂಬೆಲ್ಲ ನೃತ್ಯ ಕಲೆಗಳ ಬಗೆಗೆ ವಿವರಿಸಿದ್ದರೂ 'ಭರತನಾಟ್ಯದ ಬಗೆಗಿನ ವಿವರಣೆ ಕಡಿಮೆಯೇ ಸರಿ.

'ಜಾನಪದ ಮಹಾಸಂಪುಟ' ಗ್ರಂಥದಲ್ಲಿ ಓದುಗರನ್ನು ಗಮನ ಸೆಳೆಯುವ ಲೇಖನಗಳೆಂದರೆ ಸಸ್ಯ ಜಾನಪದ, ಪ್ರಾಣಿಜಾನಪದ, ಪರಿಸರ ಜಾನಪದ, ಕಾನೂನು ಜಾನಪದ ಹಾಗೂ ವೈದ್ಯ ಜಾನಪದ. ಲೇಖಕರು ತಮ್ಮ ಸೀಮಿತ ಪರಿಧಿಯಲ್ಲಿ ಇವುಗಳ ಬಗೆಗಿನ ಕೂಲಂಕಷವಾದ ನಿರೂಪಣೆ ಅವರ ಸೃಜನಶೀಲತೆಯ ಪ್ರತಿಬಿಂಬದಂತಿದ್ದರೂ ಓದುಗರಿಗೆ ಅದರ ಮುಂದಿನ ಹಾದಿಯನ್ನು ತೋರಿಸುವಂತಹ ಪ್ರಯತ್ನ ಈ ಲೇಖನಗಳ ಅಧ್ಯಯದಿಂದ ಆಗಿದೆ ಎಂಬ ಮಾತನ್ನು ಅರಿಯಬಹುದಾಗಿದೆ.

'ಜಾಗತಿಕ ಸಾಹಿತ್ಯಕ್ಕೆ ಕನ್ನಡ ಜನಪದ ಸಾಹಿತ್ಯದ ಕೊಡುಗೆ' ಎಂಬ ಲೇಖನವು ಕನ್ನಡ ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನು ವಿವರಿಸಿರುವುದರ ಜೊತೆಗೆ ಶಿಷ್ಟ ಸಾಹಿತ್ಯಕ್ಕಿಂತ ಕನ್ನಡ ಜನಪದ ಸಾಹಿತ್ಯ ಕೊಡುಗೆ ಕಡಿಮೆ ಏನೂ ಅಲ್ಲ ಎಂಬ ಅಭಿಪ್ರಾಯ ಬರುವಂತಹ ಅನೇಕ ಉದಾಹರಣೆಗಳ ಮೂಲಕ ನಿರೂಪಿಸಿದ್ದಾರೆ. ಕಾವ್ಯಗಳಲ್ಲಿ ಜಾನಪದ, ಯಕ್ಷಗಾನ ವಿಚಾರ, ಗರತಿಯ ಹಾಡುಗಳು, ಜಾನಪದ ಸಾಹಿತ್ಯದಲ್ಲಿ ಸಮಾಜದರ್ಶನ, ಜಾನಪದ ಭವಿಷ್ಯ ... ಎಂಬ ಲೇಖನಗಳು ದೇಜಗೌ ಅವರ ಮೂಲಕ ಕನ್ನಡ ಜನಪದ ಸಾಹಿತ್ಯಕ್ಕೆ ಶ್ರೇಷ್ಠತಮ ಕೊಡುಗೆಗಳಾಗಿವೆ.

ದೇಜಗೌ ಅವರು 'ಜಾನಪದ ಅಧ್ಯಯನ' ಕೃತಿಯಿಂದ ಆರಂಭಿಸಿದ ಜಾನಪದ ಕೆಲಸಕಾರ್ಯಗಳು ಮುಂದಿನ ಅನೇಕ ಯುವ ವಿದ್ವಾಂಸರಿಗೆ ಪ್ರೇರಣೆಯೇ ಸರಿ. ವೈದ್ಯ–ನಾಟಿವೈದ್ಯ, ಶಿಷ್ಟ– ಜಾನಪದ ಮಹಾಭಾರತ, ಜಾನಪದ ಮಾರುಕಟ್ಟೆ, ತೌಲನಿಕ ಜಾನಪದ.. ಇಂತಹ ಹಲವು ವಿಷಯಗಳ ಮೇಲೆ ಅಧ್ಯಯನ ಆಗಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ಜಾನಪದ ಮಹಾಸಂಪುಟ' ಗ್ರಂಥವು ಕನ್ನಡ ಜಾನಪದ ಸಾಹಿತ್ಯಕ್ಕೆ ಸ್ಥಿರವಾದ ನೆಲಗಟ್ಟನ್ನು ಒದಗಿಸಿಕೊಡುವ ಪ್ರಾರಂಭದ ಮೆಟ್ಟಿಲುಗಳಂತಿದ್ದರೂ, ಗದ್ದಗಿಮಠ, ನಾಗೇಗೌಡ, ಹಲಸಂಗಿಗೆಳೆಯರು, ಜೀಶಂಪ, ಹಾಮನಾ, ಕ್ಯಾತನಹಳ್ಳಿ ರಾಮಣ್ಣ, ಮಾಸ್ತಿ – ಇಂತಹ ಜಾನಪದ ವಿದ್ವಾಂಸರಿಂದ 'ಜನಪದ ಸಾಹಿತ್ಯ' ಉತ್ಕೃಷ್ಟತೆಯನ್ನು ಪಡೆದಿದೆ. ನಮ್ಮ ಸುತ್ತಮುತ್ತ ಎಲೆಮರೆ ಕಾಯಿಯಂತಿರುವ ನಾಟಿ ಪದಗಳು, ಗರಡಿ ಪದಗಳು, ಕೋಲಾಟಪದಗಳು, ರಾಗಿಕಲ್ಲಿನ ಪದಗಳು, ಇಂತಹ ಅನೇಕ ಜನಪದ ವಲಯಗಳಲ್ಲಿ ಸಂಗ್ರಹ ಕಾರ್ಯ ಹೆಚ್ಚಾಗಿ ಆಗಬೇಕಾಗಿದೆ. ಅಲ್ಲದೆ ಬದಲಾಗುತ್ತಿರುವ ಮಾನವನ

ವೇಷಭೂಷಣ, ಆಹಾರ ಪದ್ಧತಿ, ವೈವಾಹಿಕ ಜೀವನ.... ಇಂಥವುಗಳ ಮೇಲೂ ಜನಪದ ಕೆಲಸಕಾರ್ಯಗಳಾಗಬೇಕಾಗಿದೆ. ಹೀಗೆ ಒಂದು ಸೀಮಿತ ಚೌಕಟ್ಟಿನಲ್ಲಿ ಮೇಲಿನ ಎಲ್ಲಾ ವಿಷಯಗಳನ್ನು 'ಜಾನಪದ ಕ್ಷೇತ್ರಕ್ಕೆ ದೇಜಗೌ ಅವರ ಕೊಡುಗೆ' ಎಂಬ ನಿಬಂಧದಲ್ಲಿ ದಾಖಲಿಸಲು ಪ್ರಯತ್ನಿಸಿದ್ದೇನೆ. ದೇಜಗೌ ಅವರು ಜಾನಪದ ಅಧ್ಯಯನ ಎಂಬ ಉದ್ಗ್ರಂಥದಿಂದ ಆರಂಭಿಸಿದ ಸಾಹಿತ್ಯಾತ್ಮಕ ಚಟುವಟಿಕೆಗಳು ಮುಂದೆ ಹೊಸ ದಾರಿಗೆ ನಾಂದಿಯಾಯಿತು. ಈ ಮೂಲಕ ಕನ್ನಡ ಜನಪದ ಸಾಹಿತ್ಯ ಕ್ಷೇತ್ರವನ್ನು ಹೊಸ ಹೊಸ ವಿಚಾರಧಾರೆಗಳಿಂದ, ಲೇಖನಗಳಿಂದ ಕಟ್ಟುವಂತಹ ಪ್ರಯತ್ನಗಳು ಪ್ರಾರಂಭವಾಗಿವೆ.

ಪರಾಮರ್ಶನ ಗ್ರಂಥಗಳು

೧) ಪ್ರೊ. ದೇಜಗೌ ಅವರ 'ಜಾನಪದ ಮಹಾಸಂಪುಟ' ಪ್ರಥಮ ಮುದ್ರಣ-೨೦೧೦, ಪ್ರಕಾಶಕರು, ಬೆಳಕೆರೆ ಪ್ರಕಾಶನ, ಜಯಲಕ್ಷ್ಮೀಪುರಂ, ಮೈಸೂರು-೧೨.

೨) ಡಾ. ಟಿ.ಕೆ.ಕೆಂಪೇಗೌಡ, 'ಅನಿಕೇತನದಲ್ಲೊಂದು ವಿಶ್ವಚೇತನ' ಪ್ರಥಮ ಮುದ್ರಣ-೨೦೦೯, ಪ್ರಕಾಶಕರು-ಯಡಿಯೂರು ಸಿದ್ದಲಿಂಗೇಶ್ವರ ಪ್ರಕಾಶನ, ಟಿ.ಕೆ.ಲೇಔಟ್, ಮೈಸೂರು.

೩) ರಸಷಷ್ಟಿ, ಪ್ರಧಾನ ಸಂಪಾದಕರು: ಶ್ರೀ ಕೆ.ವಿ.ಶಂಕರಗೌಡ, ಪ್ರಥಮ ಮುದ್ರಣ, ೧೯೮೦, ಪ್ರಕಟಣೆ, ಡಾ. ದೇಜಗೌ ಷಷ್ಟ್ಯಭಿನಂದನ ಸಮಿತಿ, ಮೈಸೂರು.

೪) ದೇಜಗೌ, ಎಪ್ಪತ್ತರ ಹೊಸ್ತಿಲಲ್ಲಿ, ಸಂಪಾದಕರು: ಎಂ.ಆರ್.ಸಣ್ಣರಾಮೇಗೌಡ, ಪ್ರಥಮ ಮುದ್ರಣ-೧೯೮೭, ಪ್ರಕಟಣೆ, ದೇಜಗೌ ಸಾಂಸ್ಕೃತಿಕ ಪ್ರತಿಷ್ಠಾನ ಕಲಾನಿಲಯ, ಮೈಸೂರು.

೫) ಜಾನಪದ ವಿಶ್ವವಿದ್ಯಾನಿಲಯ ಅಗತ್ಯ ಏಕೆ? ಲೇ. ಡಾ. ವೀರಣ್ಣದಂಡೆ, ಪ್ರಕಟಣೆ- ಕವಿಮಾರ್ಗ ಪ್ರಕಾಶನ, ತೇಜಸ್ವಿನಿ, ಸರಸ್ವತಿಪುರಂ.

೬) ದೇಜಗೌ: ವ್ಯಕ್ತಿ ಮತ್ತು ಸಾಹಿತ್ಯ, ಸಂಪಾದಕ: ಡಾ. ಹಾ.ಮಾ.ನಾ. ಪ್ರಥಮ ಮುದ್ರಣ- ೧೯೬೮, ಪ್ರಕಟಣೆ - ದೇಜಗೌ ಗೆಳೆಯರ ಬಳಗ.